ಶುಕ್ರವಾರ, ಮೇ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 148 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ನಟ ಮಾನ್ವಿತಾ ಕಾಮತ್ ಲಾಕ್‌ಡೌನ್ ಅವಧಿಯಲ್ಲಿ ತಮ್ಮೊಳಗಿನ ಬರಹಗಾರ್ತಿಯನ್ನು ಒರೆಗೆ ಹಚ್ಚಿದ್ದು, ನಾಲ್ಕೈದು ಚಿತ್ರಕಥೆಯೊಂದಿಗೆ ನಿರ್ದೇಶನಕ್ಕೂ ಇಳಿಯುವ ಕನಸುಹೊತ್ತಿದ್ದಾರೆ.



ಆಳ-ಅಗಲ: ಅಲೋಪಥಿ ಜತೆ ಯೋಗಗುರು ಗುದ್ದಾಟ

'ಚೋಕ್ಸಿ ಭಾರತಕ್ಕೆ ನೇರ ಹಸ್ತಾಂತರ ಇಲ್ಲ' 8

ಕೋವಿಡ್: ದೃಢ ಪ್ರಮಾಣ ಮತ್ತಷ್ಟು ಇಳಿಕೆ 9

ಸೆನ್ಸೆಕ್ಸ್	ನಿಫ್ಟಿ	₹/$
51,115 ▲	15,337 ▲	72.60 ▲

ಉಡುಪಿ: ಮೇಲ್ದರ್ಜೆಗೆ ಏರದ ಗ್ರಾಮೀಣ ಆರೋಗ್ಯ ವ್ಯವಸ್ಥೆ

ತುರ್ತು ಚಿಕಿತ್ಸೆಗೆ ದೊಡ್ಡ ಊರುಗಳೇ ಆಸರೆ

• ಚಿದಂಬರಪ್ರಸಾದ

ಕೊರೊನಾ ಸೋಂಕು ಈಗ ನಗರಗಳಿಂದ ರಾಜ್ಯದ ಮೂಲೆ ಮೂಲೆಯ ಹಳ್ಳಿಗಳಿಗೆ ಕಬಂಧಬಾಹುಗಳನ್ನು ಚಾಚಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯಗಳ ಕೊರತೆ ಇರುವುದರಿಂದ ಸೋಂಕಿತರು ಚಿಕಿತ್ಸೆಗಾಗಿ ಪರದಾಡುವಂತಾಗಿದೆ. ಗ್ರಾಮೀಣ ಭಾಗದಲ್ಲಿ ರೋಗಿಗಳು ಎದುರಿಸುತ್ತಿರುವ ಸಮಸ್ಯೆಗಳೇನು?, ಚಿಕಿತ್ಸೆಗೆ ಇರುವ ಕೊರತೆಗಳೇನು? ಎಂಬ ವಸ್ತುಸ್ಥಿತಿಯ ಚಿತ್ರಣ ನೀಡಲು ಪ್ರಜಾವಾಣಿ ಸ್ಥಳಕ್ಕೆ ಭೇಟಿ ನೀಡಿ ಸರಣಿ ವರದಿಗಳನ್ನು ನೀಡುತ್ತಿದೆ. ಮೊದಲ ದಿನ ಕೊಡಗು, ಉಡುಪಿ, ಕಲಬುರ್ಗಿ ಜಿಲ್ಲೆಗಳ ಚಿತ್ರಣ ನೀಡಲಾಗಿದೆ.

ಉಡುಪಿ: 'ಸಮುದಾಯ ಆರೋಗ್ಯ ಕೇಂದ್ರದಲ್ಲಿ 30 ಹಾಸಿಗೆಗಳಿವೆ. ಇಲ್ಲಿನ ರೋಗಿಗಳನ್ನು ನೋಡಿಕೊಳ್ಳಲು ವೈದ್ಯರೇ ಇಲ್ಲ. ಇರುವ ವೈದ್ಯರನ್ನು ಬೇರೆಡೆ ನಿಯೋಜನೆ ಮಾಡಲಾಗಿದೆ. ತಾತ್ಕಾಲಿಕವಾಗಿ ನಿವೃತ್ತ ವೈದ್ಯರೊಬ್ಬರನ್ನು ನೇಮಕ ಮಾಡಿದ್ದಾರೆ. ಸರ್ಕಾರ, ಸಚಿವರು, ಜಿಲ್ಲಾಡಳಿತಕ್ಕೆ ಹಲವಾರು ಬಾರಿ ಒತ್ತಾಯ ಮಾಡಿದರೂ ವೈದ್ಯರ ನೇಮಕಾತಿ ಆಗುತ್ತಿಲ್ಲ. ಕೋವಿಡ್–19 ಪಿಡುಗಿನ ಕಾಲದಲ್ಲಿ ಗ್ರಾಮೀಣ ಜನರಿಗೆ ಆಸರೆ ಆಗಬೇಕಿದ್ದ ಆಸ್ಪತ್ರೆಯ ಹಾಸಿಗೆಗಳು ವ್ಯರ್ಥವಾಗಿ ಉಳಿದಿವೆ' ಎನ್ನುವ ಆಕ್ರೋಶ ಶಿರ್ವ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಆರ್. ಪಾಟ್ಕರ್ ಅವರದ್ದು.

'ತಾಲ್ಲೂಕು ಕೇಂದ್ರವಾಗಿರುವ ಕಾಪುವಿನಲ್ಲಿ ಈಗಲೂ ಪ್ರಾಥಮಿಕ ಆರೋಗ್ಯ ಕೇಂದ್ರವೇ ಇದೆ. ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೂ, ಗಂಭೀರ ಪರಿಸ್ಥಿತಿಯಲ್ಲಿ ಇರುವ ಇಲ್ಲಿನ ರೋಗಿಗಳನ್ನು ಉಡುಪಿ ಆಸ್ಪತ್ರೆಗೆ ದಾಖಲಿಸಬೇಕಾಗಿದೆ. ಸರ್ಕಾರ ತಾಲ್ಲೂಕು ಮಾಡಿದ್ದಾದರೂ ಏಕೆ' ಎನ್ನುವ ಪ್ರಶ್ನೆ ಕಾಪುವಿನ ಪುರುಷೋತ್ತಮ ಸಾಲ್ಯಾನ್ ಅವರದ್ದು.

ಈ ಆಕ್ರೋಶ, ಪ್ರಶ್ನೆಗಳಿಂದಲೇ ಜಿಲ್ಲೆಯ ಗ್ರಾಮೀಣ ಭಾಗದ ಆರೋಗ್ಯ ವ್ಯವಸ್ಥೆಯ ಚಿತ್ರಣ ಸ್ಪಷ್ಟವಾಗುತ್ತದೆ. ಜಿಲ್ಲೆಯಲ್ಲಿ ಕೆಲವೆಡೆ ಸೌಕರ್ಯಗಳಿದ್ದರೂ ಬಳಕೆಯಾಗುತ್ತಿಲ್ಲ. ಇನ್ನೂ ಕೆಲವೆಡೆ ಸೌಕರ್ಯಗಳೇ ಇಲ್ಲ.

ಮೂರು ತಾಲ್ಲೂಕುಗಳಿದ್ದ ಉಡುಪಿ ಜಿಲ್ಲೆಯಲ್ಲಿ ಈಗ ಏಳು ತಾಲ್ಲೂಕುಗಳಾಗಿವೆ. ವಿಚಿತ್ರ ಎಂದರೆ ಸದ್ಯ ಇಡೀ ಜಿಲ್ಲೆಯಲ್ಲಿ ಕಾರ್ಕಳದಲ್ಲಿ ಮಾತ್ರ ತಾಲ್ಲೂಕು ಆಸ್ಪತ್ರೆ ಇದೆ. ಕುಂದಾಪುರದ ತಾಲ್ಲೂಕು ಆಸ್ಪತ್ರೆಯನ್ನು ಉಪವಿಭಾಗ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಉಡುಪಿ ತಾಲ್ಲೂಕು ಆಸ್ಪತ್ರೆ ಈಗ ಜಿಲ್ಲಾ ಆಸ್ಪತ್ರೆಯಾಗಿದೆ.

ಗ್ರಾಮಾರೋಗ್ಯ ಆಗಲಿ ಇನ್ನಷ್ಟು ಯೋಗ್ಯ

9ನೇ ಪುಟ ನೋಡಿ



ಮುದರಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಮಾಹಿತಿ ನೀಡುತ್ತಿರುವ ಆಶಾ ಕಾರ್ಯಕರ್ತೆಯರು

ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಹಾಸಿಗೆಗಳು ಇನ್ನಷ್ಟು ಹೆಚ್ಚಬೇಕು. ಗಂಭೀರ ಸಮಸ್ಯೆ ಇರುವವರನ್ನು ವಾರ್ ರೂಂ ಮೂಲಕ ಉಡುಪಿ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ

ಡಾ. ಸುಬ್ರಾಯ್ ಕಾಮತ್, ಕಾಪು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ

100 ಹಾಸಿಗೆಗಳ ಕಾಪು ತಾಲ್ಲೂಕು ಆಸ್ಪತ್ರೆ ನಿರ್ಮಾಣಕ್ಕೆ ಈಗಾಗಲೇ ಪ್ರಸ್ತಾವ ಸಲ್ಲಿಸಲಾಗಿದೆ. ಕೋವಿಡ್ ಕಾರಣದಿಂದ ಸ್ವಲ್ಪ ಮಟ್ಟಿಗೆ ಹಿನ್ನಡೆಯಾಗಿದೆ

ಲಾಲಾಜಿ ಮೆಂಡನ್ ಶಾಸಕ

ವಿಶೇಷ ಪುಟ 9

ಕೆಪಿಎಸ್‌ಸಿ: ಅಕ್ರಮಕ್ಕೆ ರಕ್ಷಣೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಂದಿನ ಅಧ್ಯಕ್ಷ ಮತ್ತು 9 ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿರಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, 'ವಿಧಾನ ಮಂಡಲ ಅಧಿವೇಶನದಲ್ಲೂ ಈ ಬಗ್ಗೆ ಚರ್ಚೆಯಾಗಿದ್ದು, ವಿರೋಧ ಪಕ್ಷದವರೂ ಪ್ರಾಸಿಕ್ಯೂಷನ್ ಕೈಬಿಡಲು ಬೇಡಿಕೆ ಇಟ್ಟಿದ್ದರು. ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಪ್ರಸ್ತಾವವನ್ನು ರಾಜ್ಯಪಾಲರು ತಿರಸ್ಕರಿಸಿದ್ದರು. ಕೆಪಿಎಸ್‌ಸಿ ಕಾರ್ಯದರ್ಶಿ ಕೂಡಾ ಕೈಬಿಡುವಂತೆ ಹೇಳಿದ್ದರು. ಹೀಗಾಗಿ, ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದರು.

ವಿವಾದವೇನು: ವ್ಯಾಪಕ ಭ್ರಷ್ಟಾಚಾರ ನಡೆದಿದೆಯೆಂದು ತೀವ್ರ ವಿವಾದಕ್ಕೆ ಒಳಗಾಗಿದ್ದ ಈ ಸಾಲಿನ ನೇಮಕಾತಿಯನ್ನು ರದ್ದುಗೊಳಿಸಿ ಹೈಕೋರ್ಟ್ 2018ರ ಮಾರ್ಚ್ 9ರಂದು ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್ ಕೂಡಾ ಅದೇ ತೀರ್ಪನ್ನು ಎತ್ತಿಹಿಡಿದಿತ್ತು.

'ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದೇ ಇದ್ದರೆ ಅಕ್ರಮದಲ್ಲಿ ಭಾಗಿಯಾದವರಿಗೆ ಕ್ಲೀನ್ ಚೀಟ್ ನೀಡಿದಂತೆ. ಅಕ್ರಮ ಪ್ರಕರಣವನ್ನೇ ಕೈಬಿಟ್ಟು, ಆರೋಪ ಎದುರಿಸುತ್ತಿರುವವರನ್ನು ದೋಷಮುಕ್ತಗೊಳಿಸಿದಂತೆ. ಆ ಮೂಲಕ, ಆಯ್ಕೆಯಾದವರನ್ನು ಹುದ್ದೆಗಳಿಗೆ ನೇಮಿಸಿಕೊಳ್ಳಲು ದಾರಿ ತೆರೆದುಕೊಟ್ಟಂತೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಡಿಪಿಎಆರ್) ಅಧಿಕಾರಿಯೊಬ್ಬರು ಹೇಳಿದರು.

ಅಕ್ರಮ ನೇಮಕಾತಿ ಆರೋಪದ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ ಕರಡು ದೋಷಾರೋಪ ಪಟ್ಟಿ ಸಿದ್ಧಪಡಿಸಿದೆ.

8ನೇ ಪುಟ ನೋಡಿ

ಮುಗಿಯದ ಆಂತರಿಕ ಸಮರ • ಯಡಿಯೂರಪ್ಪ ವಿರುದ್ಧ ಸೆಟೆದು ನಿಂತ ಯೋಗೇಶ್ವರ್

ಬಿಜೆಪಿ: ಹೊರಗೆ ತಣ್ಣಗೆ, ಒಳಗೆ ಧಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ವಿಷಯ ಬಿಜೆಪಿಯಲ್ಲಿ ಹೊಗೆಯಾಡಲಾರಂಭಿಸಿದೆ. ಎಲ್ಲವೂ ತಣ್ಣಗಿದೆ ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದ್ದರೂ ಒಳಗೆ ಅಸಹನೆಯ ಧಗೆ ಕುದಿಯತೊಡಗಿದೆ.

ಒಂದು ವಾರದಿಂದ ಒಬ್ಬ ಸಚಿವ ಮತ್ತು ಒಬ್ಬ ಶಾಸಕನ ದೆಹಲಿ ಭೇಟಿ ಆಡಳಿತ ಪಕ್ಷದಲ್ಲಿ ದೊಡ್ಡಮಟ್ಟದ ಚರ್ಚೆಗೆ ಕಾರಣವಾಗಿದೆ. ನಾಯಕತ್ವ ಬದಲಾವಣೆ, ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಳದ ವಿಷಯಗಳೂ ಸೇರಿದಂತೆ ವಿವಿಧ ಸಂಗತಿಗಳ ಬಗ್ಗೆ ಚರ್ಚಿಸಲು ಶಾಸಕಾಂಗ ಪಕ್ಷದ ಸಭೆಯನ್ನು ಕರೆಯುವಂತೆ ಮುಖ್ಯಮಂತ್ರಿಯ ಮೇಲೆ ಒತ್ತಡವೂ ಹೆಚ್ಚ ತೊಡಗಿದೆ. ಭಿನ್ನಮತದ ಚಟುವಟಿಕೆ ಮೆಲ್ಲನೆ ಬಿರುಸು ಪಡೆಯುತ್ತಿದೆ.

ಈ ಮಧ್ಯೆ, ದೂರು ಹೊತ್ತುಕೊಂಡು ದೆಹಲಿಗೆ ಹೋದವರಿಗೆ ವರಿಷ್ಠರ 'ದರ್ಶನ' ಭಾಗ್ಯದ ಸಿಗದ ಕಾರಣಕ್ಕೆ ವಾಪಸ್ ಆಗಿದ್ದಾರೆ ಎಂಬುದು ಒಂದು ಮೂಲಗಳ ಹೇಳಿಕೆ. ಆದರೆ, ದೆಹಲಿಯಿಂದ ವಾಪಸ್ ಬಂದಿರುವ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಅವರು ಗುರುವಾರ ಆಡಿರುವ ಮಾತಿನ ಧಾಟಿ ನೋಡಿದರೆ, ವರಿಷ್ಠರೇ ಅವರ ಬೆಂಬಲಕ್ಕೆ ನಿಂತಂತೆ ಅನುಮಾನ ಬರುತ್ತಿದೆ ಎಂಬ ಮಾತುಗಳು ಪಕ್ಷ ನಿಷ್ಠ ಶಾಸಕರ ವಲಯದಿಂದಲೇ ಹರಿದುಬರತೊಡಗಿವೆ.

'ನಾಯಕತ್ವ ಬದಲಾವಣೆಯ ಚಟುವಟಿಕೆ ಹಾಗೂ ಶಾಸಕರ ಪ್ರತ್ಯೇಕ ಸಭೆಗಳು ನಡೆಯುತ್ತಿರುವುದು ನೂರಕ್ಕೆ ನೂರು ನಿಜ' ಎಂದು ಕಂದಾಯ ಸಚಿವ ಆರ್.ಅಶೋಕ ಬುಧವಾರ(ಮೇ 26) ಹೇಳಿದ್ದರು. ಈ ಬೆನ್ನಲ್ಲೇ, ಸಚಿವ ಯೋಗೇಶ್ವರ್ ಅವರು ಯಡಿಯೂರಪ್ಪ ಮಗ ಬಿ.ವೈ. ವಿಜಯೇಂದ್ರ ವಿರುದ್ಧ ಪರೋಕ್ಷವಾಗಿ ಟೀಕಾ ಪ್ರಹಾರ ನಡೆಸಿದ್ದಾರೆ. ತಮ್ಮ ದೆಹಲಿ ಭೇಟಿಯನ್ನೂ ಸಮರ್ಥಿಸಿಕೊಂಡಿದ್ದಾರೆ. ಇದರಿಂದ ಕುಪಿತರಾಗಿರುವ ಯಡಿಯೂರಪ್ಪ ಅವರ ಆಪ್ತ ಬಣದ ಶಾಸಕರು ಯೋಗೇಶ್ವರ್ ಮೇಲೆ ಮುಗಿಬಿದ್ದಿದ್ದಾರೆ.

ಕೊರೊನಾ ಎರಡನೇ ಅಲೆಯ ಬಳಿಕ ಬಿಜೆಪಿ ರಾಜ್ಯ ಘಟಕ, ಸರ್ಕಾರದ ವಿಚಾರದಲ್ಲಿ ಸಂಪೂರ್ಣ ಮೌನಕ್ಕೆ ಶರಣಾಗಿದೆ. ಯಡಿಯೂರಪ್ಪ ವಿಶೇಷ ಆರ್ಥಿಕ ಪ್ಯಾಕೇಜ್ ಪ್ರಕಟಿಸಿದಾಗಲೂ ಅದಕ್ಕೆ ಯಾವುದೇ ಪ್ರತಿಕ್ರಿಯೆಯನ್ನೂ ನೀಡಿಲ್ಲ.

9ನೇ ಪುಟ ನೋಡಿ

'ಉತ್ತರ ಕೊಟ್ಟು ಕಳಿಸಿದ್ದಾರಲ್ಲ'

'ಯಾರೋ ಒಬ್ಬರು ಎಲ್ಲಿಗೋ ಹೋಗಿದ್ದಾರೆ ಎಂದರೆ ನಾನ್ಯಾಕೆ ಮಾತನಾಡಬೇಕು. ಅವರಿಗೆ ಉತ್ತರ ಕೊಟ್ಟು ಕಳಿಸಿದ್ದಾರಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ರಾಜಕೀಯ ಬೆಳವಣಿಗೆಗಳ ಕುರಿತು ಸುದ್ದಿಗಾರರ ಪ್ರಶ್ನೆಗೆ ತುಸು ಸಿಟ್ಟಿನಿಂದಲೇ ಅವರು ಪ್ರತಿಕ್ರಿಯಿಸಿದರು.

'ನನ್ನ ಮುಂದೆ ಈಗ ಇರುವುದು ಕೋವಿಡ್ ನಿರ್ವಹಣೆ ಮಾಡುವುದು ಮತ್ತು ಜನರನ್ನು ಕಾಪಾಡುವುದು. ಅದಷ್ಟೇ ನನ್ನ ಆದ್ಯತೆ' ಎಂದರು. 'ಶಾಸಕಾಂಗ ಪಕ್ಷದ ಸಭೆ ಕರೆಯಲು ಒತ್ತಡ ಇದೆಯೇ' ಎಂಬ ಪ್ರಶ್ನೆಗೆ, 'ಆ ಬಗ್ಗೆ ನಿಮ್ಮ ಜತೆ ಮಾತನಾಡುವ ಅಗತ್ಯವಿಲ್ಲ' ಎಂದು ಮಾಧ್ಯಮದವರಿಗೆ ತಿರುಗಿಸಿ ಹೇಳಿದರು.

ಸರ್ಕಾರದಲ್ಲಿ ಗೊಂದಲ ಮೂಡಿಸುವುದು ಸರಿಯಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ತಮ್ಮ ವಯಸ್ಸನ್ನೂ ಲೆಕ್ಕಿಸದೇ ಉತ್ತಮ ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅಸ್ಥಿರತೆ ಮೂಡಿಸುವ ಪ್ರಯತ್ನ ಸರಿಯಲ್ಲ

ವಿ.ಸೋಮಣ್ಣ, ವಸತಿ ಸಚಿವ

ನಿನಗೆ (ಯೋಗೇಶ್ವರ್) ತಾಕತ್ತಿದ್ದರೆ ನಾಯಕತ್ವ ಬದಲಾವಣೆ ಮಾಡು. ಅವನೊಬ್ಬ 420, ಮೆಗಾಸಿಟಿ ಯೋಜನೆಯಲ್ಲಿ ಮೋಸ ಮಾಡಿದ ವ್ಯಕ್ತಿ. ಯೋಗೇಶ್ವರ್ ಅವರನ್ನು ವಜಾ ಮಾಡಲಿ. ಯಡಿಯೂರಪ್ಪ ಅವರದು ಸಮರ್ಥ ನಾಯಕತ್ವ.

ಎಂ.ಪಿ.ರೇಣುಕಾಚಾರ್ಯ, ಶಾಸಕ

ಚುನಾವಣೆಯಲ್ಲಿ ಸೋತ ವ್ಯಕ್ತಿಯನ್ನು ಎಂಎಲ್‌ಸಿ ಮಾಡಿ, ಸಚಿವರನ್ನಾಗಿ ಮಾಡಿದ್ದಕ್ಕೆ ಪಕ್ಷ ಈ ಸ್ಥಿತಿ ಅನುಭವಿಸಬೇಕಾಗಿ ಬಂದಿದೆ. ಮನೆ ದೇವ್ರಿಗೆ ಬ್ಲ್ಯಾಕ್ ಮೇಲ್ ಮಾಡ್ತಾ ಇದ್ದಾನೆ.

ರಾಜೂಗೌಡ, ಶಾಸಕ

'ಮಗನ ಅಧಿಕಾರ ಚಲಾವಣೆ ಒಪ್ಪಲ್ಲ'

'ಸಚಿವನಾಗಿ ನನ್ನ ಹೆಸರಲ್ಲಿ ನನ್ನ ಮಗ ಅಧಿಕಾರ ಚಲಾಯಿಸುವುದನ್ನು ಒಪ್ಪುವುದಿಲ್ಲ. ನನ್ನ ಹೆಸರಲ್ಲಿ ಬೇರೊಬ್ಬರು ಅಧಿಕಾರ ಚಲಾಯಿಸುವುದನ್ನೂ ಒಪ್ಪಲ್ಲ. ಇದರ ಸೂಕ್ಷ್ಮ ಏನೆಂಬುದು ನಿಮಗೆ ಅರ್ಥ ಆಗುತ್ತೆ' ಎಂದು ಸಚಿವ ಸಿ.ಪಿ. ಯೋಗೇಶ್ವರ್ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ.ವಿಜಯೇಂದ್ರ ವಿರುದ್ಧ ಹರಿಹಾಯ್ದಿದ್ದಾರೆ.

'ಇಲ್ಲಿರುವುದು ಬಿಜೆಪಿ ಸರ್ಕಾರವಲ್ಲ. ಮೂರು ಪಕ್ಷಗಳ ಸರ್ಕಾರ. ನಮ್ಮ ಪಕ್ಷಕ್ಕೆ ವಲಸೆ ಬಂದವರ ಬಗ್ಗೆ ಮಾತನಾಡುತ್ತಿಲ್ಲ. ಇತರ ಪಕ್ಷಗಳ ಜತೆಗಿನ ಹೊಂದಾಣಿಕೆ ಸರ್ಕಾರ' ಎಂದು ಅವರು ಸುದ್ದಿಗಾರರಿಗೆ ಹೇಳಿದರು.

'ದೆಹಲಿಗೆ ಹೋಗುತ್ತಲೇ ಇರುತ್ತೇನೆ. ನನಗೆ ನನ್ನದೇ ಆದ ಸಮಸ್ಯೆಗಳಿವೆ. ಅದಕ್ಕೆ ಪರಿಹಾರ ಕಂಡುಕೊಳ್ಳಲು ನಾಯಕರನ್ನು ಭೇಟಿ ಮಾಡಲು ಹೋಗುತ್ತೇನೆ. ಅದು ಏನೆಂದು ಸಂದರ್ಭ ಬಂದಾಗ ಹೇಳುತ್ತೇನೆ' ಎಂದರು.

'ನಾಯಕತ್ವ ಬದಲಾವಣೆ ಚರ್ಚೆ ಎಲ್ಲಿಂದ ಹುಟ್ಟಿತು ಗೊತ್ತಿಲ್ಲ. ನಾಯಕತ್ವ ಬದಲಾವಣೆ ಶಕ್ತಿ ನನಗಿಲ್ಲ' ಎಂದರು.

'2023 ರಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಬೇಕು. ಆ ಚುನಾವಣೆಯಲ್ಲಿ ನಾನೂ ಗೆಲ್ಲಬೇಕು. ಆ ಬಗ್ಗೆಯಷ್ಟೇ ನನ್ನ ಗಮನ. ಇಂದಿನ ಸ್ಥಿತಿಯಲ್ಲಿ ನಾವು ಗೆಲ್ಲಲು ಸಾಧ್ಯವೆ' ಎಂದು ಪ್ರಶ್ನಿಸಿದರು.



ಹಾನಿ ಕೋಲ್ಕತ್ತದಿಂದ 180 ಕಿ.ಮೀ. ದೂರದ ಶಂಕರಪುರದಲ್ಲಿ ಯಸ್ ಚಂಡಮಾರುತದ ಪರಿಣಾಮ ಸಮುದ್ರದ ದೈತ್ಯ ಅಲೆಗಳ ಹೊಡೆತಕ್ಕೆ ತಡೆಗೋಡೆ ಹಾನಿಗೀಡಾಗಿದೆ –ಎಎಫ್‌ಪಿ ಚಿತ್ರ

ಜಿಂದಾಲ್‌ಗೆ ಭೂಮಿ ಮಾರಾಟ ಸರ್ಕಾರದ ತೀರ್ಮಾನ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕರ ಒತ್ತಡ ಹಾಗೂ ಸಾರ್ವಜನಿಕ ವಿರೋಧಕ್ಕೆ ಮಣಿದ ರಾಜ್ಯ ಸರ್ಕಾರ, ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಗೆ (ಜಿಂದಾಲ್) 3,667 ಎಕರೆ ಭೂಮಿಯನ್ನು ಶುದ್ಧಕ್ರಯ ಮಾಡಿಕೊಡುವ ನಿರ್ಧಾರವನ್ನು ಕೈಬಿಟ್ಟಿದೆ.

ಪ್ರತಿ ಎಕರೆಗೆ ₹ 1.27 ಲಕ್ಷ ದರದಲ್ಲಿ ಜಮೀನು ಕ್ರಯ ಮಾಡಿಕೊಡಲು ಸಚಿವ ಸಂಪುಟದ ಈ ಹಿಂದಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಅದಕ್ಕೆ ಪಕ್ಷದೊಳಗಿಂದಲೇ ತೀವ್ರ ವಿರೋಧ ವ್ಯಕ್ತವಾಗಿತ್ತು. ಈ ಬೆಳವಣಿಗೆ ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡಿತ್ತು. ಈ ಕಾರಣ ಗುರುವಾರ ನಡೆದ ಸಚಿವ ಸಂಪುಟದಲ್ಲಿ ನಿರ್ಧಾರ ಕೈಬಿಡುವ ತೀರ್ಮಾನ ಕೈಗೊಳ್ಳಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, 'ಜಿಂದಾಲ್‌ಗೆ ಭೂಮಿಯನ್ನು ಶುದ್ಧಕ್ರಯ ಮಾಡಿಕೊಡುವ ನಿರ್ಣಯವನ್ನು ಇವತ್ತಿನ ಸಂಪುಟ ಸಭೆಯಲ್ಲಿ ದೃಢೀಕರಿಸಲಿಲ್ಲ' ಎಂದು ಹೇಳಿದರು.

'ಹಿಂದಿನ ಸಚಿವ ಸಂಪುಟದ ನಿರ್ಣಯವನ್ನು ತಡೆ ಹಿಡಿಯಲಾಗಿದೆ. ಸಂಪುಟ ತನ್ನ ವಿವೇಚನೆಯ ಮೇರೆಗೆ ಬಾಕಿ ಉಳಿದ ಪ್ರಕರಣಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತದೆ. ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲೂ ಪ್ರಕರಣ ಬಾಕಿ ಉಳಿದಿದೆ. ರಾಜ್ಯ ಸರ್ಕಾರ ಭವಿಷ್ಯದಲ್ಲಿ ತನ್ನ ನಿರ್ಣಯವನ್ನು ಬದಲಿಸಲೂಬಹುದು' ಎಂದು ಬೊಮ್ಮಾಯಿ ಹೇಳಿದರು.

2019ರಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಜಿಂದಾಲ್‌ಗೆ ಭೂಮಿ ನೀಡುವ ತೀರ್ಮಾನ ಕೈಗೊಂಡಾಗ ಬಿಜೆಪಿ ವಿರೋಧಿಸಿತ್ತು.

4ನೇ ಪುಟ ನೋಡಿ

ಏನಿದು ಭೂ ವ್ಯವಹಾರ

ಬಳ್ಳಾರಿ ಜಿಲ್ಲೆ ತೋರಣಗಲ್‌ನಲ್ಲಿ ಜಿಂದಾಲ್‌ಗೆ ಲೀಸ್ ಕಂ ಸೇಲ್ ಆಧಾರದಲ್ಲಿ ನೀಡಿದ್ದ 3,677 ಎಕರೆ ಜಮೀನನ್ನು ಶುದ್ಧಕ್ರಯ ಮಾಡಿಕೊಡಲು ಯಡಿಯೂರಪ್ಪ ನೇತೃತ್ವದ ಸಚಿವ ಸಂಪುಟ ಇದೇ ವರ್ಷದ ಏಪ್ರಿಲ್ 26 ರಂದು ತೀರ್ಮಾನಿಸಿತ್ತು.

2019 ರಲ್ಲಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಮುಂದೆಯೂ ಈ ಪ್ರಸ್ತಾವ ಇತ್ತು. ಆಗ ಎಕರೆಗೆ ₹ 1.50 ಲಕ್ಷದಂತೆ ಮಾರಲು ಮುಂದಾದಾಗ ವಿರೋಧ ಪಕ್ಷದಲ್ಲಿದ್ದ ಬಿಜೆಪಿ, ವಿರೋಧಿಸಿತ್ತು. ಯಡಿಯೂರಪ್ಪ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರದ ವಿರುದ್ಧ ಹೋರಾಟ ನಡೆದಿತ್ತು.

ಬಿಜೆಪಿ ಸರ್ಕಾರ ಬಂದ ಮೇಲೆ ಹಿಂದಿನ ಹೋರಾಟ ಮರೆತು, ಜಿಂದಾಲ್‌ಗೆ ಭೂಮಿ ನೀಡುವ ತೀರ್ಮಾನ ಕೈಗೊಳ್ಳಲಾಗಿತ್ತು.

'2006 ರಲ್ಲಿ ಜಿಂದಾಲ್ ಕಂಪನಿಗೆ ಲೀಸ್ ಕಂ ಸೇಲ್ ಆಧಾರದಲ್ಲಿ ಜಮೀನು ನೀಡಲಾಗಿತ್ತು. ಗಣಿಗಾರಿಕೆಗೆ ನೀಡಿದ್ದ ಆ ಜಾಗವನ್ನು ಬಳಕೆ ಮಾಡಿದ್ದಾರೆ ಮತ್ತು ಅಲ್ಲಿ ಕಾರ್ಖಾನೆಯನ್ನೂ ಸ್ಥಾಪಿಸಿದ್ದಾರೆ. ಗುತ್ತಿಗೆ ಅವಧಿ ಮುಗಿದಿರುವುದರಿಂದ ಶುದ್ಧಕ್ರಯ ಮಾಡಲು ಹಿಂದಿನ ಸರ್ಕಾರ ಇದ್ದಾಗ ಪ್ರಸ್ತಾವ ಸಲ್ಲಿಸಿದ್ದರು. ಆಗ ಕೆಲವು ಆಕ್ಷೇಪಗಳು ಕೇಳಿ ಬಂದಿದ್ದವು. ನಮ್ಮ ಸರ್ಕಾರ ಬಂದ ಮೇಲೆ ಅದರ ಪರಿಶೀಲನೆಗೆ ಸಚಿವ ಸಂಪುಟ ಉಪ ಸಮಿತಿ ರಚಿಸಿತು. ಉಪ ಸಮಿತಿಯ ಶಿಫಾರಸ್ಸಿನ ಮೇರೆಗೆ 3,667 ಎಕರೆ ಜಮೀನನ್ನು ಶುದ್ಧಕ್ರಯ ಪತ್ರ ಮಾಡಿಕೊಡಲು ಒಪ್ಪಿಕೊಳ್ಳಲಾಗಿದೆ. ತೋರಣಗಲ್ಲು ಮತ್ತು ಕುರೇಕುಪ್ಪ ಗ್ರಾಮಗಳಲ್ಲಿನ 2,005.58 ಎಕರೆ ಮತ್ತು ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1,666.73 ಎಕರೆ ಜಮೀನು ಸೇರಿದೆ' ಎಂದು ಕಾನೂನು ಸಚಿವ ಬೊಮ್ಮಾಯಿ ಸರ್ಕಾರದ ತೀರ್ಮಾನವನ್ನು ಸಮರ್ಥಿಸಿಕೊಂಡಿದ್ದರು. ಈ ಮಧ್ಯೆ ಬಿಜೆಪಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ ಬೆಲ್ಲದ, ಕೆ.ಪೂರ್ಣಿಮಾ, ಉದಯ್ ಗರುಡಾಚಾರ್ ಮತ್ತು ಇತರರು ಈ ನಿರ್ಧಾರ ವಿರೋಧಿಸಿ ಪತ್ರ ಬರೆದು, 'ಈ ನಿರ್ಣಯ ರಾಜ್ಯದ ಹಿತಕ್ಕೆ ವಿರುದ್ಧ' ಎಂದು ಹೇಳಿದ್ದರು.

ಭೂಮಿ ಮಾರುವ ನಿರ್ಧಾರ ವಿರೋಧಿಸಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾಗೆ ಪತ್ರ ಬರೆದಿದ್ದೆವು. ವರಿಷ್ಠರ ಖಡಕ್ ಸೂಚನೆ ಅನ್ವಯ ಸರ್ಕಾರ ನಿರ್ಧಾರ ಕೈಬಿಟ್ಟಿದೆ

ಬಸನಗೌಡ ಪಾಟೀಲ ಯತ್ನಾಳ

ಬಿಜೆಪಿ ಶಾಸಕ, ವಿಜಯಪುರ

ರಾಜ್ಯ ಕೋವಿಡ್ ಅಂಕಿ–ಅಂಶ

25,23,998 ▲	ಒಟ್ಟು ಸೋಂಕಿತರು (24,99,784 ನಿನ್ನೆಯ ವಿವರ)
4,02,203 ▼	ಸಕ್ರಿಯ ಪ್ರಕರಣಗಳು
20,94,369 ▲	ಗುಣಮುಖರಾದವರು
27,405 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	24,214 ▼
ಗುಣಮುಖ	31,459 ▼
ಸಾವು	476 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಡಿಜಿಟಲ್ ಮಾಧ್ಯಮ ಪ್ರಕಾಶಕರಿಗೆ ಕೇಂದ್ರದ ಸೂಚನೆ

15 ದಿನಗಳ ಒಳಗೆ ಮಾಹಿತಿ ನೀಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಡಿಜಿಟಲ್ ಮಾಧ್ಯಮಗಳು ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳುವ ಅಗತ್ಯವಿಲ್ಲ. ಆದರೆ, ಕೆಲವು ಮಾಹಿತಿಗಳನ್ನು 15 ದಿನಗಳ ಒಳಗೆ ಕಡ್ಡಾಯವಾಗಿ ಸಲ್ಲಿಸಬೇಕು' ಎಂದು ಕೇಂದ್ರದ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಗುರುವಾರ ಹೇಳಿದೆ.

ಸಚಿವಾಲಯವು ಬಿಡುಗಡೆ ಮಾಡಿರುವ ಸಾರ್ವಜನಿಕ ನೋಟಿಸ್‌ನಲ್ಲಿ ಈ ಮಾಹಿತಿ ಇದೆ. 'ಸುದ್ದಿ ಪ್ರಸಾರಕರು, ಡಿಜಿಟಲ್ ಮಾಧ್ಯಮಗಳು ಸೇರಿದಂತೆ ಈ ನಿಯಮಗಳ ಅಡಿಯಲ್ಲಿ ಬರುವ ಎಲ್ಲಾ ರೀತಿಯ ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಚಿವ ಪ್ರಕಾಶ್ ಜಾವಡೇಕರ್ ಅವರು ಸಂವಾದ ನಡೆಸಿದ್ದಾರೆ. ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳ ಅಡಿಯಲ್ಲಿ ಸ್ವಯಂ ನಿಯಂತ್ರಣ ವ್ಯವಸ್ಥೆಯನ್ನು ಆರಂಭಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು 60 ಮಾಧ್ಯಮ ಸಂಸ್ಥೆಗಳು ಹೇಳಿವೆ' ಎಂದು ಸಚಿವಾಲಯವು ಹೇಳಿದೆ.

'ಈ ಎಲ್ಲಾ ಮಾಧ್ಯಮ ಸಂಸ್ಥೆಗಳು ಸಚಿವಾಲಯದಲ್ಲಿ ಪೂರ್ವಭಾವಿಯಾಗಿ ನೋಂದಣಿ ಮಾಡಿಕೊಳ್ಳಬೇಕಿಲ್ಲ. ಆದರೆ ತಮ್ಮ ಸಂಸ್ಥೆ ಬಗ್ಗೆ ಮಾಹಿತಿ ನೀಡಬೇಕು. ಕುಂದುಕೊರತೆ ನೋಡಲ್ ಅಧಿಕಾರಿ, ತಾವು ಸದಸ್ಯರಾಗಿರುವ ಸ್ವಯಂ ನಿಯಂತ್ರಣ ಸಮಿತಿ/ಮಂಡಳಿಯ ವಿವರ, ಸುದ್ದಿ ಸಂಪಾದಕರ ವಿವರ ಮತ್ತು ಸುದ್ದಿ ನಿರ್ವಾಹಕರ ವಿವರವನ್ನು ನೀಡಬೇಕು' ಎಂದು ಸಚಿವಾಲಯವು ಸೂಚನೆ ನೀಡಿದೆ.

ನಿಯಮ ಪಾಲಿಸಿ: ಟ್ವಿಟರ್‌ಗೆ ತಾಕೀತು

'ಭಾರತದಲ್ಲಿನ ಕಾನೂನುಗಳು ಹೇಗೆ ಇರಬೇಕು ಎಂದು ಹೇಳುವ ಅಧಿಕಾರ ಟ್ವಿಟರ್‌ಗೆ ಇಲ್ಲ. ಸುಮ್ಮನೆ ಬಡಬಡಿಸುವುದನ್ನು ಬಿಟ್ಟು, ಇಲ್ಲಿನ ನಿಯಮಗಳನ್ನು ಜಾರಿಗೆ ತನ್ನಿ' ಎಂದು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಟ್ವಿಟರ್‌ಗೆ ತಾಕೀತು ಮಾಡಿದೆ. 'ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳು ಅಪಾಯಕಾರಿಯಾಗಿವೆ. ಅವುಗಳನ್ನು ಬದಲಾವಣೆ ಮಾಡಬೇಕು' ಎಂದು ಟ್ವಿಟರ್ ಗುರುವಾರ ಹೇಳಿಕೆ ನೀಡಿತ್ತು. ಈ ಹೇಳಿಕೆಗೆ ಪ್ರತಿಯಾಗಿ ಕೇಂದ್ರ ಸರ್ಕಾರವು ಟ್ವಿಟರ್‌ಗೆ ತಾಕೀತು ಮಾಡಿದೆ.

ವಿವರ 7

ನೈರುತ್ಯ ಮುಂಗಾರು 31ಕ್ಕೆ ಕೇರಳ ಪ್ರವೇಶ ಸಾಧ್ಯತೆ

ನವದೆಹಲಿ (ಪಿಟಿಐ): ಬಂಗಾಳಕೊಲ್ಲಿಯ ನೈರುತ್ಯ ಹಾಗೂ ಪೂರ್ವದ ಕೇಂದ್ರ ಭಾಗದಲ್ಲಿ ನೈರುತ್ಯ ಮುಂಗಾರು ಮಾರುತಗಳು ಜೋರಾಗಿ ಬೀಸುತ್ತಿವೆ. ಹೀಗಾಗಿ ಮೇ 31ರಂದು ಮುಂಗಾರು ಮಾರುತ ಕೇರಳ ಪ್ರವೇಶಿಸಲು ಪೂರಕ ವಾತಾವರಣ ನಿರ್ಮಾಣವಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ತಿಳಿಸಿದೆ.

ವಾಡಿಕೆಯಂತೆ ಜೂನ್ 1ರಂದು ಮುಂಗಾರು ಮಾರುತಗಳು ಕೇರಳ ಪ್ರವೇಶಿಸುತ್ತವೆ. ಈ ಮಾರುತಗಳಿಂದಾಗಿ ಜೂನ್‌ನಿಂದ ಸೆಪ್ಟೆಂಬರ್ ವರೆಗೆ ದೇಶದ ಬಹುತೇಕ ಭಾಗಕ್ಕೆ ಮಳೆಯಾಗುತ್ತದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿ.ಎನ್.ಆರ್. ರಾವ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಿಸಬಹುದಾದ ಇಂಧನ ಮೂಲಗಳು ಮತ್ತು ಇಂಧನ ಶೇಖರಣೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಾಗಿ ಖ್ಯಾತ ವಿಜ್ಞಾನಿ ಸಿ.ಎನ್.ಆರ್. ರಾವ್ ಅವರು ಅಂತರರಾಷ್ಟ್ರೀಯ 'ಇನಿ' (Eni) ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಈ ಪ್ರಶಸ್ತಿ ಇಂಧನ ಕೇಂದ್ರದ ಮುಂಚೂಣಿ ಮತ್ತು ಅತ್ಯುನ್ನತ ಪ್ರಶಸ್ತಿಯಾಗಿದ್ದು, ಇಂಧನ ಸಂಶೋಧನೆಯ ನೋಬೆಲ್ ಪ್ರಶಸ್ತಿ ಎಂದೇ ಪರಿಗಣಿಸಲಾಗುತ್ತದೆ.

ಪ್ರೊ.ರಾವ್ ಅವರು ಜಲಜನಕ ಆಧಾರಿತ ಇಂಧನದ ಮೇಲೆ ಅಧ್ಯಯನ ನಡೆಸಿದ್ದಾರೆ. ಈ ಇಂಧನ ಮೂಲ ಮಾತ್ರ ಇಡೀ ಮನುಕುಲಕ್ಕೆ ಉಪಯೋಗವಾಗಬಲ್ಲ ಏಕೈಕ ಮೂಲವಾಗಿ ಹೊರ ಹೊಮ್ಮಿದೆ. ಜಲಜನಕದ ಶೇಖರಣೆ, ದ್ಯುತಿರಸಾಯನ ವಿಜ್ಞಾನ ಮತ್ತು ವಿದ್ಯುದ್ರಸಾಯನ ಕ್ರಿಯೆಯಿಂದಲೂ ಜಲಜನಕ ಉತ್ಪಾದನೆ, ಸೌರಶಕ್ತಿಯಿಂದ ಜಲಜನಕ ಉತ್ಪಾದನೆ ಇವರ ಪ್ರಮುಖ ಸಾಧನೆಗಳಾಗಿವೆ.

ವಿಶೇಷವಾಗಿ ಲೋಹದ ಆಕ್ಸೈಡ್, ಕಾರ್ಬನ್ ನ್ಯಾನೊ ಟ್ಯೂಬ್‌ಗಳು, ಗ್ರಾಫೀನ್, ಬೊರಾನ್–ನೈಟ್ರೋಜನ್–ಕಾರ್ಬನ್ ಹೈಬ್ರಿಡ್ ವಸ್ತುಗಳು, ಮಾಲಿಬ್ಡಿನಮ್ ಸಲ್ಫೈಡ್ ಇವುಗಳನ್ನು ಇಂಧನ ಕ್ಷೇತ್ರದಲ್ಲಿ ಅನ್ವಯಗೊಳಿಸಿದ್ದು ಮಾತ್ರವಲ್ಲದೆ, ಹಸಿರು ಜಲಜನಕ ಉತ್ಪಾದನೆಗೆ ಇವರು ಕೊಡುಗೆ ನೀಡಿದ್ದಾರೆ. ಪ್ರಶಸ್ತಿಯ ಆಯ್ಕೆಗೆ ಈ ಅಂಶಗಳನ್ನು ಪ್ರಧಾನವಾಗಿ ಪರಿಗಣಿಸಲಾಗಿದೆ ಎಂದು ಭಾರತ ಸರ್ಕಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ತಿಳಿಸಿದೆ.

'ಈ ಪ್ರಶಸ್ತಿ ಪಡೆದ ಏಷ್ಯಾದ ಮತ್ತು ಭಾರತದ ಮೊದಲ ವಿಜ್ಞಾನಿ ಎಂಬ ಹಿರಿಮೆಗೆ ರಾವ್ ಪಾತ್ರರಾಗಿದ್ದಾರೆ. ವಿಶೇಷವಾಗಿ ಮುದ್ರಿತ ಚಿನ್ನದ ಪದಕ ಮತ್ತು ನಗದು ಒಳಗೊಂಡ ಈ ಪ್ರಶಸ್ತಿಯನ್ನು ಇಟಲಿಯ ಅಧ್ಯಕ್ಷ ಸರ್ಗಿಯೊ ಮಾಟ್ಟರೆಲ್ಲಾ ಅಕ್ಟೋಬರ್ 14 ರಂದು ಪ್ರೊ.ರಾವ್ ಅವರಿಗೆ ಪ್ರದಾನ ಮಾಡಲಿದ್ದಾರೆ' ಎಂದು ಜವಾಹರ್ ಲಾಲ್ ನೆಹರೂ ವೈಜ್ಞಾನಿಕ ಸಂಶೋಧನಾ ಕೇಂದ್ರದ ಪ್ರಕಟಣೆ ತಿಳಿಸಿದೆ.

ಬಾಂಗ್ಲಾ ಪ್ರಜೆಗಳ ನಡುವೆ ವೈಮನಸ್ಸು • ವಿಡಿಯೊ ಆಧರಿಸಿ ಆರೋಪಿಗಳ ಸೆರೆ

ಸಾಮೂಹಿಕ ಅತ್ಯಾಚಾರ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದ 23 ವರ್ಷದ ಯುವತಿಯ ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲ್ಬೆರಳು ತುರುಕಿ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿರುವ ಹೀನ ಕೃತ್ಯ ನಗರದಲ್ಲಿ ನಡೆದಿದೆ.

ಯುವತಿ ಮೇಲಿನ ಕ್ರೌರ್ಯದ ದೃಶ್ಯವನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದ ದುಷ್ಟರು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಅದೇ ವಿಡಿಯೊ ಆಧರಿಸಿ ನಾಲ್ವರು ಆರೋಪಿಗಳನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

'ಕಾಮುಕರ ಕೃತ್ಯದಿಂದಾಗಿ ಯುವತಿಯ ಗುಪ್ತಾಂಗದಿಂದ ರಕ್ತ ಸೋರಿ ತೀವ್ರ ಹಾನಿಯಾಗಿದ್ದು, ಸದ್ಯ ಅವರು ಎಲ್ಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿಲ್ಲ. ಅವರಿಗಾಗಿ ಹುಡುಕಾಟ ನಡೆದಿದೆ. ಪ್ರಕರಣದಲ್ಲಿ ಬಾಂಗ್ಲಾದೇಶದ ಸಾಗರ್, ಮೊಹಮ್ಮದ್ ಬಾಬಾ ಶೇಕ್, ರಿದಾಯ್ ಬಾಬು ಹಾಗೂ ಹೈದರಾಬಾದ್‌ನ ಹಕೀಲ್ ಎಂಬುವರನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಸಹಕರಿಸಿದ್ದ ಮಹಿಳೆಯೊಬ್ಬಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಂಧಿತ ಆರೋಪಿಗಳು, ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಬಾಂಗ್ಲಾದೇಶದಿಂದ ಯುವತಿಯನ್ನು ನಗರಕ್ಕೆ ಕರೆಸಿ ಕೃತ್ಯ ಎಸಗಿದ್ದಾರೆ' ಎಂದೂ ಮೂಲಗಳು ಹೇಳಿವೆ.



ಆರೋಪಿಗಳು

2ನೇ ಪುಟ ನೋಡಿ

ಲೊಕೇಶನ್ ನೀಡಿದ ಸುಳಿವು

'ಅತ್ಯಾಚಾರದ ವಿಡಿಯೊಗಳು ಈಶಾನ್ಯ ರಾಜ್ಯಗಳು ಹಾಗೂ ಬಾಂಗ್ಲಾದೇಶದಲ್ಲಿ ಹರಿದಾಡಿದ್ದವು. ವಿಚಾರಣೆ ಆರಂಭಿಸಿದ್ದ ಅಸ್ಸಾಂ ಪೊಲೀಸರು, ಯುವತಿ ಕುಟುಂಬಸ್ಥರನ್ನು ಪತ್ತೆ ಮಾಡಿದ್ದರು. ಸಂಬಂಧಿ ಜೊತೆ ಯುವತಿ ಭಾರತಕ್ಕೆ ಹೋಗಿರುವುದಾಗಿ ಕುಟುಂಬಸ್ಥರು ಹೇಳಿದ್ದರು' ಎಂದು ಗೊತ್ತಾಗಿದೆ.

ಯುವತಿಯ ಸಂಬಂಧಿಯ ಮೊಬೈಲ್ ನೆಟ್‌ವರ್ಕ್ ಪರಿಶೀಲಿಸಿದಾಗ ಬೆಂಗಳೂರು ತೋರಿಸಿತ್ತು. ಅದೇ ಮಾಹಿತಿಯನ್ನು ಅಸ್ಸಾಂ ಪೊಲೀಸರು, ಬೆಂಗಳೂರು ಪೊಲೀಸರಿಗೆ ನೀಡಿದ್ದರು.

ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ನೇತೃತ್ವದಲ್ಲಿ ತಂಡ ರಚಿಸಿದ್ದ ಕಮಿಷನರ್ ಕಮಲ್ ಪಂತ್, ಆರೋಪಿಗಳ ಬಂಧನಕ್ಕೆ ಸೂಚಿಸಿದ್ದರು. ರಾಮಮೂರ್ತಿನಗರ ಮತ್ತು ಆವಲಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಆರೋಪಿಗಳು ವಾಸವಿರುವ ಮಾಹಿತಿ ಸಿಕ್ಕಿತ್ತು. ಸ್ಥಳಕ್ಕೆ ಬಂಧಿಸಲು ಹೋದ ಪೊಲೀಸರನ್ನು ಕಂಡಿದ್ದ ಆರೋಪಿಗಳು, ಮನೆಯ ಕಾಂಪೌಂಡ್ ಹಾರಿ ಪರಾರಿಯಾಗಲು ಯತ್ನಿಸಿದ್ದರು. ಪೊಲೀಸ್ ಸಿಬ್ಬಂದಿ ಆರೋಪಿಗಳನ್ನು ಬೆನ್ನಟ್ಟಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೃತ್ಯ ಎಸಗಿದ್ದ ಮನೆಗೆ ಕಮಲ್ ಪಂತ್, ಹೆಚ್ಚುವರಿ ಪೊಲೀಸ್ ಕಮಿಷನರ್ ಎಸ್. ಮುರುಗನ್, ಡಿಸಿಪಿ ಎಸ್.ಡಿ. ಶರಣಪ್ಪ ಭೇಟಿ ನೀಡಿದರು.

ಶುಕ್ರವಾರದ ಉಷ್ಣಾಂಶ 32° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಭಾಗಶಃ ಮೋಡ ಕವಿದ ವಾತಾವರಣ. ಸಂಜೆ ಸಾಧಾರಣ ಮಳೆ ಸಾಧ್ಯತೆ

ಹವಾಮಾನ: ಶನಿವಾರ 32° 22° | ಭಾನುವಾರ 33° 22° | ಸೋಮವಾರ 33° 22°

ಸೂರ್ಯೋದಯ: 5.53 ಸೂರ್ಯಾಸ್ತ : 6:41 ಚಂದ್ರೋದಯ: ರಾ. 8:56 ಚಂದ್ರಾಸ್ತ: ಬೆ. 7:30

ಗುರುವಾರದ ಹವಾಮಾನ : ಗರಿಷ್ಠ 31° ಕನಿಷ್ಠ 21°

ಜಲ್ಲಿ– ಬಿಸಿ ಡಾಂಬರ್ ಮಿಶ್ರಣ ಘಟಕ ನಿರ್ವಹಣೆ: ಆಡಳಿತಾಧಿಕಾರಿಗೆ ದೂರು

ಟೆಂಡರ್ ಪಡೆಯಲು ಸುಳ್ಳು ದಾಖಲೆ ಸಲ್ಲಿಕೆ?

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಕಣ್ಣೂರಿನ ಜಲ್ಲಿ–ಬಿಸಿ ಡಾಂಬರು ಮಿಶ್ರಣ ಘಟಕದ ನಿರ್ವಹಣೆ ಟೆಂಡರ್‌ಗೆ ಅರ್ಜಿ ಸಲ್ಲಿಸುವಾಗ ಗುತ್ತಿಗೆದಾರ ಬಿ.ಎಸ್. ಧನಂಜಯ ಅವರು ಬಿಬಿಎಂಪಿಗೆ ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದರೇ?

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರಿಗೆ ಸಲ್ಲಿಕೆ ಆಗಿರುವ ದೂರು ಈ ಕುರಿತ ಸಂದೇಹವನ್ನು ಹುಟ್ಟುಹಾಕಿದೆ.

ಈ ಟೆಂಡರ್‌ನ ಗುತ್ತಿಗೆ ಪಡೆಯಲು ತಾಂತ್ರಿಕ ಅರ್ಹತೆ ಪಡೆದಿರುವ ಧನಂಜಯ (ನಿಕ್ಷೇಪ್ ಇನ್‌ಫ್ರಾ ಪ್ರಾಜೆಕ್ಟ್ಸ್) ಅವರು ವಾರ್ಷಿಕ ವಹಿವಾಟಿಗೆ ಸಂಬಂಧಿಸಿದಂತೆ ನೀಡಿರುವ ದಾಖಲೆಗಳು ಸುಳ್ಳು ಮಾಹಿತಿಯಿಂದ ಕೂಡಿವೆ. ಅವರು ತಮ್ಮಲ್ಲಿರುವುದಾಗಿ ಹೇಳಿಕೊಂಡ ಟಿಪ್ಪರ್ ಲಾರಿಗಳ ಕುರಿತು ನೀಡಿರುವ ದಾಖಲೆಗಳಲ್ಲೂ ಕೆಲವು ಸುಳ್ಳು ಎಂದು ಆರೋಪಿಸಿ ಎಸ್.ಸಿದ್ಧಾರ್ಥ ಅವರು ರಾಕೇಶ್ ಸಿಂಗ್ ಅವರಿಗೆ ನೀಡಿರುವ ದೂರಿನ ಪ್ರತಿಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಧನಂಜಯ ಅವರು ₹ 25 ಲಕ್ಷ ಮೌಲ್ಯದ ಮಿಲ್ಲಿಂಗ್ ಯಂತ್ರ ಖರೀದಿಯ ಬಗ್ಗೆ ಮಾಡಿಕೊಂಡ ಒಪ್ಪಂದದ ಬಗ್ಗೆ ದಾಖಲೆ ನೀಡಿದ್ದಾರೆ. ಆದರೆ, ಈ ಯಂತ್ರದ ಹೈಪೋಥಿಕೇಷನ್ ರದ್ದಾಗಿರುವ ಬಗ್ಗೆ ದಾಖಲೆಗಳನ್ನು ನೀಡಿಲ್ಲ. ಅವರು ಟಿಪ್ಪರ್‌ಗಳ ಕುರಿತಾಗಿ ದಾಖಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಆ ನೋಂದಣಿ ಸಂಖ್ಯೆಯು ಕಾರಿನದು ಎಂದು ಸಿದ್ಧಾರ್ಥ ಆರೋಪಿಸಿದ್ದಾರೆ. ಈ ಕುರಿತ ದಾಖಲೆಗಳನ್ನೂ ಅವರು ಒದಗಿಸಿದ್ದಾರೆ.

ಟೆಂಡರ್ ಷರತ್ತುಗಳ ಪ್ರಕಾರ ಈ ಘಟಕದ ನಿರ್ವಹಣೆಗೆ ಅರ್ಹತೆ ಪಡೆಯುವ ಸಂಸ್ಥೆಗಳು ಐದು ವರ್ಷಗಳ ವಾರ್ಷಿಕ ವಹಿವಾಟುಗಳ ವಿವರ ಸಲ್ಲಿಸಬೇಕಿದೆ. ಅವುಗಳಲ್ಲಿ ಯಾವುದಾದರೂ ಎರಡು ವರ್ಷಗಳಲ್ಲಿ ವಾರ್ಷಿಕ ವಹಿವಾಟುಗಳ ಮೊತ್ತವು ಕನಿಷ್ಠ ₹ 24 ಕೋಟಿ ದಾಟಿರಬೇಕು ಎಂಬ ಷರತ್ತು ವಿಧಿಸಲಾಗಿದೆ.

ಟೆಂಡರ್ ಪಡೆಯಲು ಸಲ್ಲಿಸಿದ ವಾರ್ಷಿಕ ವಹಿವಾಟಿನ ದಾಖಲೆಗಳ ಬಗ್ಗೆಯೂ ತಪ್ಪು ಮಾಹಿತಿ ನೀಡಿದ ವಿವರಗಳನ್ನು ಸಿದ್ಧಾರ್ಥ್ ಒದಗಿಸಿದ್ದಾರೆ. ಟೆಂಡರ್ ದಾಖಲೆಗಳೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿದ ಬಳಿಕವೇ ಅದರ ಆರ್ಥಿಕ ಬಿಡ್‌ಗಳನ್ನು ತೆರೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಟೆಂಡರ್ ಅಕ್ರಮ– ಟಿವಿಸಿಸಿ ತನಿಖೆಗೆ ಸೂಚನೆ

ಕಣ್ಣೂರಿನ ಜಲ್ಲಿ– ಬಿಸಿ ಡಾಂಬರು ಮಿಶ್ರಣ ಘಟಕ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ 'ಪ್ರಜಾವಾಣಿ' ಪತ್ರಿಕೆಯ ಗುರುವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಟೆಂಡರ್ ಪ್ರಕ್ರಿಯೆ: ಅಕ್ರಮದ ವಾಸನೆ' ವಿಶೇಷ ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಆಯುಕ್ತರ ತಾಂತ್ರಿಕ ಜಾಗೃತಿ ಕೋಶದ (ಟಿವಿಸಿಸಿ) ಮುಖ್ಯ ಎಂಜಿನಿಯರ್ ಅವರಿಗೆ ಗುರುವಾರ ಸೂಚಿಸಿದ್ದಾರೆ.

'ರಸ್ತೆ ಮೂಲಸೌಕರ್ಯ ವಿಭಾಗವು ಡಾಂಬರು ಮಿಶ್ರಣ ಘಟಕದ ನಿರ್ವಹಣೆಗಾಗಿ ಆಹ್ವಾನಿಸಿದ್ದ ಟೆಂಡರ್‌ನಲ್ಲಿ ತಾಂತ್ರಿಕ ಮೌಲ್ಯ ಮಾಪನವನ್ನು ಪಾರದರ್ಶಕವಾಗಿ ಮಾಡಲಾಗಿದೆಯೇ ಮತ್ತು ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ ಎಂಬುದನ್ನು ಪರಿಶೀಲಿಸಿ ಮೂರು ದಿನಗಳ ಒಳಗೆ ವರದಿ ಸಲ್ಲಿಸಬೇಕು' ಎಂದು ಮುಖ್ಯ ಆಯುಕ್ತರು ಸೂಚಿಸಿದ್ದಾರೆ.

ಸಿದ್ಧಾರ್ಥ ಅವರು ದೂರಿನ ಜೊತೆ ಒದಗಿಸಿದ ದಾಖಲೆ ಪ್ರಕಾರ

ವರ್ಷ	ಮೊತ್ತ (₹ ಕೋಟಿಗಳಲ್ಲಿ)
2013-14	7.30
2014-15	8.24
2015-16	5.54
2016-17	9.46
2017-18	11.79
ಒಟ್ಟು	42.34

ವಾರ್ಷಿಕ ವಹಿವಾಟಿನ ವಿವರ
ಧನಂಜಯ ಅವರು ಒದಗಿಸಿರುವ ದಾಖಲೆಗಳ ಪ್ರಕಾರ

ವರ್ಷ	ಮೊತ್ತ (₹ ಕೋಟಿಗಳಲ್ಲಿ)
2015-16	40.51
2016-17	23.09
2017-18	25.04
2018-19	50.51
2019-20	92.36

ಸುದ್ದಿ 2 ನಿಮಿಷ

'ಕೆಪಿಎಸ್‌ಸಿ: ಭ್ರಷ್ಟರ ರಕ್ಷಣೆಗೆ ನಿಂತ ಸರ್ಕಾರ'

ಬೆಂಗಳೂರು: 'ಕೆಪಿಎಸ್‌ಸಿ 2011ರ ಸಾಲಿನ ಗೆಜೆಟೆಡ್ ಅಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದ್ದು, ಇದರಲ್ಲಿ ಭಾಗಿಯಾಗಿರುವ ಸದಸ್ಯರು ಹಾಗೂ ಅಧ್ಯಕ್ಷರ ವಿರುದ್ಧದ ವಿಚಾರಣೆ ಕೈಬಿಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಸರ್ಕಾರವು ಭ್ರಷ್ಟರ ರಕ್ಷಣೆಗೆ ನಿಂತಿರುವುದಕ್ಕೆ ಇದು ಸಾಕ್ಷಿ. ಇದನ್ನು ನಾವು ಖಂಡಿಸುತ್ತೇವೆ. ಸರ್ಕಾರ ತನ್ನ ತೀರ್ಮಾನ ಬದಲಿಸಬೇಕು' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್.ದೀಪಕ್ ಒತ್ತಾಯಿಸಿದ್ದಾರೆ.

'ಕರ್ನಾಟಕ ಲೋಕಸೇವಾ ಆಯೋಗವು ತನ್ನ ನೇಮಕಾತಿಗಳಲ್ಲಿ ಭ್ರಷ್ಟಾಚಾರ ಮುಂದುವರಿಸಲು ಈಗ ರಹದಾರಿ ಸಿಕ್ಕಂತಾಗಿದೆ. ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳನ್ನು ಸಂಸ್ಥೆಯ ಆಯಕಟ್ಟಿನ ಹುದ್ದೆಗಳಿಂದ ಹೊರಗಿಟ್ಟು, ಭ್ರಷ್ಟರನ್ನು ಈ ಜಾಗಗಳಿಗೆ ತಂದು ಕೂರಿಸಲಾಗುತ್ತಿದೆ. ಇದರಿಂದ ಕೆಪಿಎಸ್‌ಸಿಯ ಘನತೆಯೇ ಕುಸಿಯುತ್ತಿದೆ' ಎಂದು ಆರೋಪಿಸಿದ್ದಾರೆ.

ಕಾಳಸಂತೆಯಲ್ಲಿ ಆಮ್ಲಜನಕ; ಇಬ್ಬರ ಬಂಧನ



ಬೆಂಗಳೂರು: ಕಾಳಸಂತೆಯಲ್ಲಿ ಅಮ್ಲಜನಕ ಸಿಲಿಂಡರ್ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೆಜಿಎಫ್ ರಾಬರ್ಟ್‌ಸನ್‌ಪೇಟೆಯ ಅರುಣ್‌ಕುಮಾರ್ (34) ಹಾಗೂ ಸಯ್ಯದ್ ಸಾಕೀಬ್ (27) ಬಂಧಿತರು. ಅವರಿಂದ 45 ಲೀಟರ್‌ನ 5 ಜಂಬೊ ವೈದ್ಯಕೀಯ ಆಮ್ಲಜನಕ ಸಿಲಿಂಡರ್ ಹಾಗೂ 2 ಕಾರು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿಗಳು ಕಾರುಗಳಲ್ಲಿ ಬೊಮ್ಮನಹಳ್ಳಿ ಕಡೆಯಿಂದ ದೊಡ್ಡಬಳ್ಳಾಪುರ ಕಡೆಗೆ ಹೊರಟಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಯಲಹಂಕ ಉಪನಗರ ಠಾಣೆ ವ್ಯಾಪ್ತಿಯಲ್ಲಿ ಕಾರುಗಳನ್ನು ತಡೆದು ಪರಿಶೀಲನೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ತಿಳಿಸಿದರು.

'ಆಮ್ಲಜನಕ ಸಿಲಿಂಡರ್‌ಗಳನ್ನು ಆರೋಪಿಗಳು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದರು' ಎಂದೂ ಸಿಸಿಬಿ ಪೊಲೀಸರು ಹೇಳಿದರು.

'ಕರಡಿ ಹಿಡಿಯಲು ಅಧಿಕಾರಿಗಳಿಗೆ ಸೂಚನೆ'

ಬೆಂಗಳೂರು: 'ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸುತ್ತಲಿನ ಗ್ರಾಮಗಳಲ್ಲಿ ಕರಡಿಯೊಂದು ಪ್ರತ್ಯಕ್ಷವಾಗಿ ಜನರಲ್ಲಿ ಆತಂಕ ಮೂಡಿಸಿದೆ. ಆ ಕರಡಿಯನ್ನು ಹಿಡಿದು ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಡುವಂತೆ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಇತರ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

ಬನ್ನೇರುಘಟ್ಟ ಸಮೀಪದ ಬೇಗೆಹಳ್ಳಿ, ಮಹಂತಲಿಂಗಾಪುರ, ಸಕಲವಾರ, ಭೂತಾನಹಳ್ಳಿ, ಬಿಲ್ವರದನಹಳ್ಳಿ, ಕ್ಯಾಸರಗುಪ್ಪೆ ಸೇರಿದಂತೆ ಹಲವು ಗ್ರಾಮಗಳಲ್ಲಿ ಕರಡಿಯೊಂದು ಪದೇ ಪದೇ ಕಾಣಿಸಿಕೊಳ್ಳುತ್ತಿರುವುದರಿಂದ ಜನ ಮನೆಗಳಿಂದ ಹೊರಬರಲು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಈ ಸಂಬಂಧ ಪ್ರಜಾವಾಣಿ 'ಕಾಡಂಚಿನ ಗ್ರಾಮಗಳಲ್ಲಿ ಕರಡಿ ಓಡಾಟ' ಶೀರ್ಷಿಕೆಯ ಅಡಿಯಲ್ಲಿ ಗುರುವಾರ ವಿಶೇಷ ವರದಿ ಪ್ರಕಟಿಸಿತ್ತು.

ಜಾನುವಾರು ಸಾಗಣೆ: 50ಕ್ಕೂ ಹೆಚ್ಚು ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಜಾನುವಾರು ಸಂರಕ್ಷಣೆ ಕಾಯ್ದೆ –2020ರ ನಿಯಮಾವಳಿ ರೂಪುಗೊಳ್ಳದೆ ಇದ್ದರೂ ರಾಜ್ಯದಲ್ಲಿ 50ಕ್ಕೂ ಹೆಚ್ಚು ಎಫ್‌ಐಆರ್ ದಾಖಲಿಸಲಾಗಿದೆ ಎಂದು ಈ ಕಾಯ್ದೆ ಪ್ರಶ್ನಿಸಿ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಆರೋಪಿಸಿದ್ದು, ಹೊಸ ಕಾಯ್ದೆಯಡಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಸರ್ಕಾರ ಮತ್ತೊಮ್ಮೆ ಭರವಸೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಆಕ್ಷೇಪಣೆ ಸಲ್ಲಿಸಲು ಹೆಚ್ಚಿನ ಸಮಯಾವಕಾಶ ಕೋರಿದರೆ ಅರ್ಜಿದಾರರು ಕೋರಿರುವಂತೆ ಮಧ್ಯಂತರ ಪರಿಹಾರದ ಆದೇಶ ಹೊರಡಿಸಲಾಗುವುದು' ಎಂದು ಸರ್ಕಾರಕ್ಕೆ ಪೀಠ ತಿಳಿಸಿತು. ವಿಚಾರಣೆಯನ್ನು ಜೂ.9ಕ್ಕೆ ಮುಂದೂಡಿತು.

'ಕೃಷಿ ಉದ್ದೇಶಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಜಾನುವಾರು ಸಾಗಿಸಿದರೂ ರೈತರ ವಿರುದ್ಧ ಪ್ರಕರಣ ದಾಖಲಿಸಲು ಹೊಸ ಕಾಯ್ದೆಯಲ್ಲಿ ಅವಕಾಶ ನೀಡಲಾಗಿದೆ. ಜಾನುವಾರು ರಕ್ಷಣೆ ಹೆಸರಿನಲ್ಲಿ ಈ ಕಾಯ್ದೆಯನ್ನು ಕೆಲವರು ದುರ್ಬಳಕೆ ಮಾಡಿಕೊಳ್ಳಲಿದ್ದಾರೆ' ಎಂಬುದು ಅರ್ಜಿದಾರರ ಆರೋಪ.

'ರಕ್ತದ ಕ್ಯಾನ್ಸರ್: ಆಕರಕೋಶ ರೋಗಿಗೆ ಜೀವರಕ್ಷಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಕ್ತದ ಕ್ಯಾನ್ಸರ್ ಎದುರಿಸುತ್ತಿರುವವರನ್ನು ರಕ್ಷಿಸಲು ಬ್ಲಡ್ ಸ್ಟೆಮ್ ಸೆಲ್ (ರಕ್ತದ ಆಕರಕೋಶ) ಸಹಕಾರಿ. ಹಾಗಾಗಿ, ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನಮಾಡಲು ಮುಂದೆಬರಬೇಕು' ಎಂದು ವೈದ್ಯರು ಮನವಿ ಮಾಡಿದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಜಾಗತಿಕ ರಕ್ತದ ಆಕರಕೋಶ ದಾನಿಗಳ ನೋಂದಣಿ ಸೇವಾ ಸಂಸ್ಥೆ 'ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್' ಗುರುವಾರ ಆಯೋಜಿಸಿದ ಆನ್‌ಲೈನ್ ಕಾರ್ಯಕ್ರಮದಲ್ಲಿ ರಕ್ತದ ಕಾಂಡಕೋಶ ದಾನದ ಬಗ್ಗೆ ದಾನಿಗಳು ಹಾಗೂ ರೋಗಿಗಳು ಜಾಗೃತಿ ಮೂಡಿಸಿದರು.

ದೆಹಲಿಯರಾಜೀವ್‌ಗಾಂಧಿಕ್ಯಾನ್ಸರ್ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ಅಸ್ಥಿಮಜ್ಜೆ ಕಸಿ ವಿಭಾಗದ ನಿರ್ದೇಶಕ ಡಾ. ದಿನೇಶ್ ಭುರಾನಿ ಮಾತನಾಡಿ, 'ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ದಾನಿಗಳ ರಕ್ತದಿಂದ ಆಕರ ಕೋಶಗಳನ್ನು ಪಡೆದು, ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ಇದು ಅಗತ್ಯವಿರುವಂತಹ ರೋಗಿಗಳ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವುದು ಶೇ 40ರಷ್ಟು ಮಾತ್ರ. ಉಳಿದವರು ಸಂಬಂಧಿಗಳಲ್ಲದ ದಾನಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ' ಎಂದು ಹೇಳಿದರು.

'ರಕ್ತದಿಂದ ಆಕರ ಕೋಶಗಳನ್ನು ಪಡೆಯುವ ಪ್ರಕ್ರಿಯೆ 4ರಿಂದ 5 ಗಂಟೆಗಳಲ್ಲಿ ಮುಕ್ತಾಯವಾಗಲಿದೆ. ಕೇವಲ 200ರಿಂದ 250 ಎಂ.ಎಲ್ ರಕ್ತವನ್ನು ಮಾತ್ರ ಪಡೆಯಲಾಗುತ್ತದೆ. ದಾನಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ' ಎಂದು ವಿವರಿಸಿದರು.

46 ಸಾವಿರ ನೋಂದಣಿ: ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ಯಾಟ್ರಿಕ್ ಪೌಲ್, 'ದೇಶದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿದ್ದು, ಬಹುತೇಕ ರೋಗಿಗಳಿಗೆ ರಕ್ತದ ಆಕರ ಕೋಶ ಕಸಿ ಮಾಡಲಾಗುತ್ತಿದೆ. ಆದರೆ, ದಾನಿಗಳ ಕೊರತೆಯಿಂದಾಗಿ ಹಲವು ಮಂದಿ ಕಸಿಗೆ ಎದುರು ನೋಡುತ್ತಿದ್ದಾರೆ. ಕ್ಯಾನ್ಸರ್‌ಗಳಿಗೆ ರಕ್ತದ ಆಕರಕೋಶ ಕಸಿ ಪರಿಹಾರವಾಗಿದೆ. ನಮ್ಮ ರಿಜಿಸ್ಟ್ರಿಯಲ್ಲಿ 46 ಸಾವಿರಕ್ಕೂ ಅಧಿಕ ದಾನಿಗಳು ಹೆಸರು ನೋಂದಾಯಿಸಿದ್ದಾರೆ. ಭಾರತದಲ್ಲಿ ಎರಡು ವರ್ಷಗಳ ಅವಧಿಯಲ್ಲಿ 35 ರೋಗಿಗಳಿಗೆ ಹೊಂದಾಣಿಕೆಯಾಗುವ ರಕ್ತದ ಆಕರ ಕೋಶ ಒದಗಿಸಲಾಗಿದೆ' ಎಂದರು.

ಬೆಂಗಳೂರಿನ ರಕ್ತದ ಆಕರ ಕೋಶ ದಾನಿ ಅಭಿಷೇಕ ಬೋಪಣ್ಣ ಹಾಗೂ ಜಾರ್ಖಂಡ್‌ನ ರಕ್ತದ ಕ್ಯಾನ್ಸರ್ ರೋಗಿ ಕೀರ್ತಿ ತಮ್ಮ ಅನುಭವ ಹಂಚಿಕೊಂಡರು.

ಕಲಾವಿದರಿಗೆ ನೆರವು: ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು: 'ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕಲಾವಿದರು ತಲಾ ₹ 3 ಸಾವಿರ ನೆರವು ಪಡೆಯಲು ಸೇವಾಸಿಂಧು ಪೋರ್ಟಲ್‌ನಲ್ಲಿ ಮೇ 28ರಿಂದ ಜೂ.5ರೊಳಗೆ ಅರ್ಜಿಸಲ್ಲಿಸಬೇಕು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿಳಿಸಿದೆ.

ಕೋವಿಡ್ ಎರಡನೇ ಅಲೆ ಹಾಗೂ ಲಾಕ್‌ಡೌನ್ ಕಾರಣ ಸರ್ಕಾರವು ಕಲಾವಿದರಿಗೆ ತಲಾ ₹ 3 ಸಾವಿರ ನೆರವು ಘೋಷಿಸಿದೆ.

'ಆರ್ಥಿಕವಾಗಿ ಸಂಕಷ್ಟದಲ್ಲಿರುವ ಎಲ್ಲ ಪ್ರಕಾರದ ಕಲಾವಿದರು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಕಲಾವಿದರು ವೃತ್ತಿನಿರತರಾಗಿದ್ದು, 35 ವರ್ಷ ಮೇಲ್ಪಟ್ಟವರಾಗಿರಬೇಕು. ಕನಿಷ್ಠ 10 ವರ್ಷಗಳ ಕಲಾ ಸೇವೆ ಮಾಡಿರಬೇಕು. ಇಲಾಖೆಯಿಂದ ಮಾಸಾಶನ ಪಡೆಯುತ್ತಿರಬಾರದು. ಸರ್ಕಾರಿ ನೌಕರಿಯಲ್ಲಿ ಇರಕೂಡದು. 2020–21ನೇ ಸಾಲಿನ ಸಾಮಾನ್ಯ, ವಿಶೇಷ ಘಟಕ, ಗಿರಿಜನ ಉಪಯೋಜನೆಯಡಿ ಧನಸಹಾಯ ಪಡೆದಿರಬಾರದು' ಎಂದು ಇಲಾಖೆ ಸೂಚಿಸಿದೆ.

'ಅರ್ಹ ಕಲಾವಿದರು ತಮ್ಮ ವಿಳಾಸ, ಕಲಾ ಪ್ರಕಾರ, ದೂರವಾಣಿ ಸಂಖ್ಯೆ, ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ ಸೇರಿದಂತೆ ವಿವಿಧ ಮಾಹಿತಿಯನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ನಮೂದಿಸಬೇಕು' ಎಂದು ತಿಳಿಸಲಾಗಿದೆ.

₹ 4.82 ಕೋಟಿ ಮಂಜೂರು: 'ಲಾಕ್‌ಡೌನ್ ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಕಲಾವಿದರಿಗೆ ತಲಾ ಮೂರು ಸಾವಿರ ರೂಪಾಯಿಗಳ ಆರ್ಥಿಕ ನೆರವು ನೀಡಲು ₹ 482.85 ಲಕ್ಷ ಹಣವನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಈ ಸಂಬಂಧ ಅಧಿಕೃತ ಆದೇಶ ಹೊರಡಿಸಲಾಗಿದ್ದು, ರಾಜ್ಯದ 16,095 ಬಡ ಕಲಾವಿದರು ಈ ಸೌಲಭ್ಯವನ್ನು ಪಡೆಯಲಿದ್ದಾರೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

'ಪ್ರತಿ ಜಿಲ್ಲೆಯಲ್ಲೂ ಇಲಾಖೆಯ ಸಹಾಯಕ ನಿರ್ದೇಶಕರನ್ನು ಒಳಗೊಂಡ ಐದು ಜನರ ಸಮಿತಿಯು ಅರ್ಹ ಕಲಾವಿದರನ್ನು ಆಯ್ಕೆ ಮಾಡಿ, ಕೇಂದ್ರ ಕಚೇರಿಗೆ ಕಳುಹಿಸುತ್ತದೆ. ನಂತರ ಕೇಂದ್ರ ಕಚೇರಿಯಿಂದ ಕಲಾವಿದರ ಬ್ಯಾಂಕ್ ಖಾತೆಗೆ ನೇರವಾಗಿ ಆರ್‌ಟಿಜಿಎಸ್ ಮೂಲಕ ನೆರವಿನ ಮೊತ್ತವನ್ನು ಜಮಾ ಮಾಡಲಾಗುತ್ತದೆ' ಎಂದು ಹೇಳಿದ್ದಾರೆ.

ಸಾಮೂಹಿಕ ಅತ್ಯಾಚಾರ: ನಾಲ್ವರ ಬಂಧನ

ಒಂದನೇ ಪುಟದಿಂದ..

ಆಗಿದ್ದೇನು? 'ಬಾಂಗ್ಲಾದೇಶದ ಯುವತಿ, ಸಂಬಂಧಿ ಹಾಗೂ ಪರಿಚಯಸ್ಥರ ಜೊತೆ ಭಾರತಕ್ಕೆ ಬಂದಿದ್ದರು. ಅವರನ್ನು ಬರಮಾಡಿಕೊಂಡಿದ್ದ ಆರೋಪಿಗಳು, ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಕೊಠಡಿಯೊಂದರಲ್ಲಿ ಇರಿಸಿದ್ದರು. ಯುವತಿಯನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳಲು ಪ್ರಯತ್ನಿಸಿದ್ದರು. ಆದರೆ, ಯುವತಿ ಅದಕ್ಕೆ ಒಪ್ಪಿರಲಿಲ್ಲ' ಎಂದು ಮೂಲಗಳು ಹೇಳಿವೆ.

'ಗ್ರಾಹಕರ ಜೊತೆ ಹೋಗುವುದಿಲ್ಲವೆಂದಿದ್ದ ಯುವತಿ, ವಾಪಸು ಊರಿಗೆ ಕಳುಹಿಸುವಂತೆ ಪಟ್ಟು ಹಿಡಿದಿದ್ದರು. ಜೊತೆಯಲ್ಲೇ ಇದ್ದ ಇನ್ನೊಬ್ಬ ಮಹಿಳೆ, ವೇಶ್ಯಾವಾಟಿಕೆಗಾಗಿ ಪುನಃ ಒತ್ತಾಯಿಸಿದ್ದಳು. ಅದಕ್ಕೂ ಯುವತಿ ಒಪ್ಪಿರಲಿಲ್ಲ. ಜೊತೆಗೆ, ಹಣದ ವಿಚಾರಕ್ಕೂ ಅವರ ನಡುವೆ ವೈಮನಸ್ಸು ಉಂಟಾಗಿತ್ತು.'

'ಆಕ್ರೋಶಗೊಂಡ ಮಹಿಳೆ ಹಾಗೂ ಇತರೆ ಆರೋಪಿಗಳು, ಯುವತಿಯನ್ನು ಮಂಚದ ಮೇಲೆ ಮಲಗಿಸಿ ಎಳೆದಾಡಿದ್ದರು. ಬಟ್ಟೆ ಕಳಚಿ ನಗ್ನಗೊಳಿಸಿದ್ದರು. ನಂತರ, ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ತಮ್ಮ ಕಾಲು ಬೆರಳುಗಳನ್ನು ಹಾಕಿ ಮೃಗೀಯವಾಗಿ ವರ್ತಿಸಿ ಅತ್ಯಾಚಾರ ಎಸಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಅಕ್ರಮವಾಗಿ ನುಸುಳಿದ್ದರು: 'ಯುವತಿ, ಅವರ ಸಂಬಂಧಿಕರು ಹಾಗೂ ಪರಿಚಯಸ್ಥರು ಬಾಂಗ್ಲಾದೇಶದಿಂದ ಅಕ್ರಮವಾಗಿ ದೇಶದೊಳಗೆ ನುಸುಳಿದ್ದರು. ನಂತರ ಬೆಂಗಳೂರಿಗೆ ಬಂದು ನೆಲೆಸಿದ್ದರು ಎಂಬ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಚಿತ್ರಾವಳಿ



ನಗರಸಭೆ ಮಾಜಿ ಸದಸ್ಯ ಬಿ.ಎನ್‌.ಬೈರೇಗೌಡ ಅವರು ಬ್ಯಾಟರಾಯನಪುರದಲ್ಲಿ ಬಡಕೂಲಿಕಾರ್ಮಿಕರಿಗೆ ಆಹಾರದ ಕಿಟ್ ವಿತರಿಸಿದರು



ಜವಾಹರಲಾಲ್ ನೆಹರೂ ಪುಣ್ಯತಿಥಿಯ ಅಂಗವಾಗಿ ಕಾಂಗ್ರೆಸ್ ವತಿಯಿಂದ ಮಲ್ಲೇಶ್ವರದಲ್ಲಿ ಗುರುವಾರ ಉಚಿತ ಆಂಬುಲೆನ್ಸ್ ಸೇವೆಗೆ ಚಾಲನೆ ನೀಡಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ರಾಜ್ಯಸಭಾ ಸದಸ್ಯ ಜೆ.ಸಿ.ಚಂದ್ರಶೇಖರ್ ಇದ್ದರು.

ಪೌರಕಾರ್ಮಿಕನ ಕೊಲೆ: ಕಠಿಣ ಶಿಕ್ಷೆಗೆ ಒತ್ತಾಯ

ಬೆಂಗಳೂರು: 'ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗುತ್ತಿಗೆ ಪೌರಕಾರ್ಮಿಕನ ಕೊಲೆ ಪ್ರಕರಣ ಆಘಾತಕಾರಿ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು' ಎಂದು ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘ ಒತ್ತಾಯಿಸಿದೆ.

'ಮಾಸ್ಕ್ ಧರಿಸಿ ಎಂದು ಹೇಳಿದ್ದಕ್ಕೆ ಪೌರಕಾರ್ಮಿಕ ಸುನೀಲ್ (24) ಎಂಬುವರ ಮೇಲೆ ಕೆಲವು ಕಿಡಿಗೇಡಿಗಳು ಹಲ್ಲೆ ನಡೆಸಿದ್ದಾರೆ. ಅಲ್ಲದೆ, ಮಾರಕಾಸ್ತ್ರಗಳಿಂದ ಇರಿದಿದ್ದರಿಂದ ಸುನೀಲ್ ಮೃತಪಟ್ಟಿದ್ದಾರೆ. ಅವರ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡಬೇಕು ಹಾಗೂ ಅವರ ಅವಲಂಬಿತರೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಬೇಕು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಆಗ್ರಹಿಸಿದ್ದಾರೆ.

'ಘಟನೆಯಲ್ಲಿ ಗಾಯಗೊಂಡಿರುವ ಶ್ರೀಕಂಠ ಎಂಬುವರಿಗೆ ಉತ್ತಮ ಚಿಕಿತ್ಸೆ ನೀಡಬೇಕು ಮತ್ತು ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

'ಕೋವಿಡ್ ಶವಗಳ ಸಂಸ್ಕಾರ, ಸೋಂಕಿತರ ಮನೆಗಳಿಗೆ ಔಷಧಿ ಸಿಂಪಡಿಸುವ ಕೆಲಸಕ್ಕೆ ತಾತ್ಕಾಲಿಕ ಟೆಂಡರ್ ಮೂಲಕ ಪ್ರತ್ಯೇಕ ಕಾರ್ಮಿಕರನ್ನು ತಕ್ಷಣವೇ ನೇಮಿಸಬೇಕು. ಪಿಪಿಇ ಕಿಟ್,ಗ್ಲೌಸ್, ಮಾಸ್ಕ್, ನೀಡದೆ ಈ ಕೆಲಸದಲ್ಲಿ ಪೌರಕಾರ್ಮಿಕರನ್ನು ನಿಯೋಜಿಸಬಾರದು' ಎಂದು ಸಂಘದ ಅಧ್ಯಕ್ಷ ಹರೀಶ್ ನಾಯಕ್ ಹೇಳಿದ್ದಾರೆ.

ನಿಧನ ವಾರ್ತೆ

ವಿನುತಾ ಮೂಲ



ಬೆಂಗಳೂರು: ಕನ್ನಡಿಗರ ಉದ್ಯೋಗ ವೇದಿಕೆಯ ಸಂಸ್ಥಾಪಕ ಅಧ್ಯಕ್ಷೆ ವಿನುತಾ ಮೂಲ ಅವರು ಗುರುವಾರ (ಮೇ 27 ರಂದು) ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

ವಿನುತಾ ಅವರು ತುಮಕೂರಿನ ಅಬಕಾರಿ ಉದ್ಯಮಿ ಕೆ. ಜಿ. ನಾರಾಯಣ ಸ್ವಾಮಿ ಅವರ ಪುತ್ರಿ ಹಾಗೂ ಉದ್ಯಮಿ ವೆಂಕಟೇಶ್ ಅವರ ಪತ್ನಿ. ಮೃತರಿಗೆ ಪತಿ, ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ, ನಾಲ್ಕು ಮೊಮ್ಮಕ್ಕಳಿದ್ದಾರೆ. ಇತ್ತೀಚೆಗೆ ಇವರು 'ಸಾವಿತ್ರಿಬಾಯಿ ಫುಲೆ' ಪ್ರಶಸ್ತಿಗೆ ಭಾಜನರಾಗಿದ್ದರು.

ಚೆಕ್‌ಪೋಸ್ಟ್‌ನಲ್ಲಿ ಸಿಕ್ಕಿಬಿದ್ದ ವಾಹನ ಕಳ್ಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ದ್ವಿಚಕ್ರ ವಾಹನ ಕಳವು ಮಾಡಿದ್ದ ಆರೋಪದಡಿ ಸಿ. ನಿಖಿಲ್ (21) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಹಳ್ಳಿಯ ನಿಖಿಲ್, ಈ ಹಿಂದೆ ಮೊಬೈಲ್ ಕಳ್ಳತನ ಪ್ರಕರಣದಲ್ಲಿ ಬಂಧಿತನಾಗಿದ್ದ. ಜೈಲಿಗೆ ಹೋಗಿ ಜಾಮೀನು ಮೇಲೆ ಇತ್ತೀಚೆಗಷ್ಟೇ ಹೊರಗೆ ಬಂದಿದ್ದ. ಆತನಿಂದ ₹ 2.65 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಬ್ಯಾಡರಹಳ್ಳಿ ಪೊಲೀಸರು ಹೇಳಿದರು.

'ಲಾಕ್‌ಡೌನ್ ವೇಳೆ ಅನಗತ್ಯವಾಗಿ ಸಂಚರಿಸುವ ವಾಹನಗಳ ತಪಾಸಣೆಗಾಗಿ ಠಾಣೆ ವ್ಯಾಪ್ತಿಯ ನೈಸ್ ರಸ್ತೆಯಲ್ಲಿ ಚೆಕ್‌ಪೋಸ್ಟ್ ನಿರ್ಮಿಸಲಾಗಿದೆ. ಮೇ 25ರಂದು ಚೆಕ್‌ಪೋಸ್ಟ್ ಮೂಲಕ ಹೊರಟಿದ್ದ ಆರೋಪಿಯ ದ್ವಿಚಕ್ರ ವಾಹನ ತಡೆದು ತಪಾಸಣೆ ನಡೆಸಲಾಗಿತ್ತು. ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಆರೋಪಿ ಹಾಜರುಪಡಿಸಿರಲಿಲ್ಲ. ಆತನನ್ನು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ' ಎಂದೂ ತಿಳಿಸಿದರು.

ಸ್ನೇಹಿತನ ಜೊತೆ ಕೃತ್ಯ: 'ಹಲವು ವರ್ಷಗಳಿಂದ ಆರೋಪಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾನೆ. ಸ್ನೇಹಿತನ ಜೊತೆ ಸೇರಿ ಮೊಬೈಲ್ ಕಲವು ಮಾಡುತ್ತಿದ್ದ ಬಗ್ಗೆ ಈ ಹಿಂದೆ ಪ್ರಕರಣ ದಾಖಲಾಗಿತ್ತು. ಸ್ನೇಹಿತನ ಸಮೇತ ಬಂಧಿಸಿ 50ಕ್ಕೂ ಹೆಚ್ಚು ಮೊಬೈಲ್ ಜಪ್ತಿ ಮಾಡಲಾಗಿತ್ತು' ಎಂದೂ ಪೊಲೀಸರು ಹೇಳಿದರು.

'ಜೈಲಿನಿಂದ ಜಾಮೀನು ಮೇಲೆ ಹೊರಗೆ ಬಂದಿದ್ದ ಆರೋಪಿ, ವಾಹನ ಕಳ್ಳತನ ಮಾಡಲಾರಂಭಿಸಿದ್ದರು. ಮೇ 17ರಂದು ಆಂಧ್ರಹಳ್ಳಿಯ ಡಿ ಗ್ರೂಪ್ ಲೇಔಟ್‌ನಲ್ಲಿ ದ್ವಿಚಕ್ರ ವಾಹನ ಕದ್ದು ಪರಾರಿಯಾಗಿದ್ದ' ಎಂದೂ ತಿಳಿಸಿದರು.

ವೃದ್ಧಾಶ್ರಮದಲ್ಲಿ ಸೌಕರ್ಯ: ವಿವರ ಕೇಳಿದ ಹೈಕೋರ್ಟ್

ಬೆಂಗಳೂರು: ಸ್ವಯಂಸೇವಾ ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳು ನಡೆಸುತ್ತಿರುವ ವೃದ್ಧಾಶ್ರಮಗಳಲ್ಲಿ ಕಲ್ಪಿಸಿರುವ ಮೂಲ-ಸೌಕರ್ಯಗಳ ಬಗ್ಗೆ ವಿವರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಹಿರಿಯ ನಾಗರಿಕರ ಕಾಯ್ದೆ–2007ರ ಸೆಕ್ಷನ್ 19ರ ಅಡಿಯಲ್ಲಿನ ನಿಬಂಧನೆಗಳ ಜಾರಿಗೆ ಕೈಗೊಂಡ ಕ್ರಮ ಬಗ್ಗೆ ವಿವರಿಸುವಂತೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿತು.

ಪ್ರತಿ ಜಿಲ್ಲೆಯಲ್ಲೂ ವೃದ್ಧಾಶ್ರಮಗಳನ್ನು ತೆರೆಯಲು ಕಾಯ್ದೆಯಡಿ ಅವಕಾಶ ಇದ್ದರೂ ಸಮರ್ಪಕವಾಗಿ ಅನುಷ್ಠಾನವಾಗಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.



ಪುಷ್ಪನಮನ
ಬುದ್ಧ ಪೂರ್ಣಿಮೆ ಅಂಗವಾಗಿ ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ.ಲಕ್ಷ್ಮೀನಾರಾಯಣ ಅವರು ಬನ್ನೇರುಘಟ್ಟ ರಸ್ತೆಯ ನಿಸರ್ಗ ಬಡಾವಣೆಯ ಬುದ್ಧನ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಸಂಸ್ಥೆಯ ಸಿಬ್ಬಂದಿ ಇದ್ದರು.

‘ಶಾಸಕ ರಮೇಶ ಜಾರಕಿಹೊಳಿಗೆ ಸಚಿವ ಬೊಮ್ಮಾಯಿ ರಕ್ಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಾಚಾರದ ಆರೋಪ ಹೊತ್ತಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಗೃಹ ಸಚಿವ ಬಸವರಾಜ ಬೊಮ್ಮಯಿ ರಕ್ಷಣೆ ನೀಡುತ್ತಿದ್ದಾರೆ’ ಎಂದು ಆರೋಪಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಗೃಹ ಸಚಿವರಾಗಿ ಮುಂದುವರೆಯಲು ಬೊಮ್ಮಾಯಿಗೆ ಯಾವುದೇ ನೈತಿಕತೆ ಇಲ್ಲ. ಅವರು ತಕ್ಷಣ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ‘ಈ ಪ್ರಕರಣದ ಬಗ್ಗೆ ಹೈಕೋರ್ಟ್ ನಿಗಾದಲ್ಲಿ ಸ್ವತಂತ್ರ ಸಂಸ್ಥೆಯಿಂದ ತನಿಖೆ ಆಗಬೇಕು. ರಮೇಶ ಜಾರಕಿಹೊಳಿಯನ್ನು ತಕ್ಷಣ ಬಂಧಿಸಬೇಕು. ರಕ್ಷಣೆಗೆ ನಿಂತಿರುವ ಸಚಿವರ ಬಗ್ಗೆಯೂ ತನಿಖೆ ಆಗಬೇಕು’ ಎಂದು ಒತ್ತಾಯಿಸಿದರು.

‘ನನಗಿರುವ ಮಾಹಿತಿ ಪ್ರಕಾರ, ಆರೋಪಿ ರಮೇಶ ಜಾರಕಿಹೊಳಿ ಗೃಹ ಸಚಿವರನ್ನು ಹುಬ್ಬಳ್ಳಿಯಲ್ಲಿ ಭೇಟಿ ಮಾಡಿ ಪ್ರಕರಣದ ಬಗ್ಗೆ ಚರ್ಚೆ ಮಾಡಿದ್ದಾರೆ. ಪ್ರಲ್ಹಾದ ಜೋಶಿಯನ್ನೂ ಭೇಟಿ ಮಾಡಿದ್ದಾರೆ. ಅತ್ಯಾಚಾರ ಆರೋಪಿ ಗೃಹ ಸಚಿವರನ್ನು ಭೇಟಿ ಮಾಡಿರುವುದು ಇದೇ ಮೊದಲು. ಆರಂಭದಲ್ಲಿ ವಿಡಿಯೊ ನಕಲಿ ಎಂದು ಹೇಳಿದ್ದ ರಮೇಶ ಜಾರಕಿಹೊಳಿ, ಇದೀಗ ಅದರಲ್ಲಿ ಇರುವುದು ನಾನೇ ಎಂದು ಹೇಳಿದ್ದಾರೆ. ನಾನು, ನಾನೇ - ಅವಳು, ಅವಳೇ ಎಂದಿದ್ದಾರೆ’ ಎಂದು ಲೇವಡಿ ಮಾಡಿದರು.

ಈ ಪ್ರಕರಣದಲ್ಲಿ ದಿನೇಶ್ ಕಲ್ಲಹಳ್ಳಿ ದೂರು ನೀಡಿದ ದಿನದಿಂದ ಈವರೆಗಿನ ಘಟನಾವಳಿಗಳನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, ‘ಕಾನೂನು ಪ್ರಕಾರ ರಮೇಶ ಜಾರಕಿಹೊಳಿಯನ್ನು ತಕ್ಷಣವೇ ಬಂಧಿಸಬೇಕಿತ್ತು. ದೇಶದಲ್ಲಿ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸದ ಏಕಮಾತ್ರ ಪ್ರಕರಣ ಇದು’ ಎಂದರು.

ಬಂಧಿಸದಿದ್ದರೆ ಹೋರಾಟ: ಡಿಕೆಶಿ

‘ಮುಖ್ಯಮಂತ್ರಿ, ಗೃಹ ಮಂತ್ರಿ ಮತ್ತು ರಾಜ್ಯದ ಮಹಿಳೆಯರ ಹಾಗೂ ಪೊಲೀಸ್ ಅಧಿಕಾರಿಗಳ ಆತ್ಮಗೌರವದ ರಕ್ಷಣೆಗಾಗಿ ಅತ್ಯಾಚಾರದ ಆರೋಪಿ ರಮೇಶ ಅವರನ್ನು ತಕ್ಷಣ ಬಂಧಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

‘ಈ ಪ್ರಕರಣ ಸಮ್ಮತಿಯಿಂದ ನಡೆದಿದೆಯೋ, ಬಲವಂತದಿಂದ ನಡೆದಿದೆಯೋ ಎಂದು ವಿಚಾರಣೆಯ ಬಳಿಕ ಕೋರ್ಟ್ ನಿರ್ಧರಿಸುತ್ತದೆ’ ಎಂದ ಅವರು, ‘ಆರೋಪಿ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ, ಕಾಂಗ್ರೆಸ್ ಬೀದಿಗಿಳಿದು ಹೋರಾಟ ನಡೆಸಲಿದೆ’ ಎಂದು ಎಚ್ಚರಿಕೆ ನೀಡಿದರು.

ಅಸಂಘಟಿತ ಕಾರ್ಮಿಕರಿಗಾಗಿ ಆಮ್ಲಜನಕ ಸೇವಾ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂಕಷ್ಟ ಕಾಲದಲ್ಲಿ ಸಿಐಟಿಯು ಅಸಂಘಟಿತ ಕಾರ್ಮಿಕರಿಗೆ ಆಸರೆಯಾಗಿ ನಿಂತಿದೆ.

ಕೋವಿಡ್ ನೆರವು ಅಭಿಯಾನದ ಅಡಿಯಲ್ಲಿ ಬಸವನಗುಡಿಯಲ್ಲಿರುವ ಜ್ಯೋತಿಬಸು ಭವನದಲ್ಲಿ ಆಮ್ಲಜನಕ ಸೇವಾ ಕೇಂದ್ರ ಸ್ಥಾಪಿಸಿದೆ. ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಕೆ.ಹೇಮಲತಾ ಅವರು ಆನ್‌ಲೈನ್ ಮೂಲಕ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಈ ಕೇಂದ್ರಕ್ಕೆ ಚಾಲನೆ ನೀಡಿದರು. ಸಿಐಟಿಯುನ ಜನಪರ ಕಾಳಜಿಯನ್ನು ಅವರು ಶ್ಲಾಘಿಸಿದರು.

ಐದು ಆಮ್ಲಜನಕ ಸಾಂದ್ರಕಗಳನ್ನೊಳಗೊಂಡ ಕೇಂದ್ರ ಇದಾಗಿದ್ದು ಕಾರ್ಮಿಕ ಆಯುಕ್ತ ಅಕ್ರಂ ಪಾಷಾ ಅವರೂ ಭೇಟಿ ನೀಡಿ ಪರಿಶೀಲಿಸಿದರು.

‘11 ಮಂದಿ ವೈದ್ಯರನ್ನೊಳಗೊಂಡ ಆನ್‌ಲೈನ್ ಮೆಡಿಕಲ್ ಕೇರ್ ಕ್ಲಿನಿಕ್, ಏಳು ಮಂದಿ ಶುಶ್ರೂಷಕಿಯರಿರುವ ಆನ್‌ಲೈನ್ ನರ್ಸಿಂಗ್ ಕೇರ್ ಕ್ಲಿನಿಕ್, ಆನ್‌ಲೈನ್ ಆಪ್ತ ಸಮಾಲೋಚನ ಕ್ಲಿನಿಕ್‌ಗಳನ್ನು ಸಿಐಟಿಯು ಈಗಾಗಲೇ ಆರಂಭಿಸಿ ಜನರ ಸೇವೆ ಮಾಡುತ್ತಿದೆ. ಬೆಂಗಳೂರಿನ 26 ಕೇಂದ್ರಗಳಲ್ಲಿ ಕೊರೊನಾ ಸೋಂಕಿತರಿಗೆ ಔಷಧವನ್ನು ಉಚಿತವಾಗಿ ವಿತರಿಸುವ ಕಾರ್ಯಕ್ಕೂ ಮುಂದಾಗಿದೆ. ರಾಜ್ಯದ ಇತರ ಭಾಗಗಳಿಗೂ ಈ ಸೇವೆ ವಿಸ್ತರಿಸಲು ಪ್ರಯತ್ನಿಸಲಾಗುತ್ತಿದೆ’ ಎಂದು ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್ ತಿಳಿಸಿದರು.

ಕೋವಿಡ್‌ನಿಂದ ಚೇತರಿಸಿಕೊಂಡ ನಂತರವೂ ಉಸಿರಾಟದ ತೊಂದರೆ ಅನುಭವಿಸುತ್ತಿರುವವರು ಹಾಗೂ ತುರ್ತು ಅವಶ್ಯಕತೆ ಇದ್ದವರು ಈ ಸೇವೆಗೆ ಅರ್ಹರು. ತಜ್ಞ ವೈದ್ಯರ ತಂಡ ರೋಗಿಯನ್ನು ತಪಾಸಣೆ ಮಾಡಿ ಶಿಫಾರಸು ಮಾಡಿದರೆ ಅಂತಹವರಿಗೆ ಮಾತ್ರ ಆಮ್ಲಜನಕ ಸೇವೆ ಒದಗಿಸಲಾಗುತ್ತದೆ.

ಸಂಪರ್ಕಕ್ಕೆ: ದಿಲೀಪ್ ಶೆಟ್ಟಿ 8147222507 ಮತ್ತು ಪ್ರಜ್ವಲ್ 8618672742.

ಚಾಮರಾಜನಗರ ದುರಂತ: ಪರಿಹಾರ ಹೆಚ್ಚಳ ಕುರಿತು ವಿಚಾರಣೆ

ಬೆಂಗಳೂರು: ‘ಚಾಮರಾಜನಗರದ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟ 24 ಜನರ ಕುಟುಂಬಗಳಿಗೆ ಪರಿಹಾರ ಹೆಚ್ಚಿಸುವ ಸಂಬಂಧ ವಿಚಾರಣೆ ಕೈಗೆತ್ತಿಕೊಳ್ಳಲಾಗುವುದು’ ಎಂದು ಹೈಕೋರ್ಟ್ ತಿಳಿಸಿದೆ.

‘ಮೃತರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಬೇಕು ಎಂದು ವಿಚಾರಣೆ ವೇಳೆ ವಕೀಲರು ಮನವಿ ಮಾಡಿದಾಗ, ಈ ಬಗ್ಗೆ ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಗುವುದು’ ಎಂದು ಮುಖ್ಯ ನ್ಯಾಯಮುರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಹೇಳಿತು.

ದುರಂತದ ಬಗ್ಗೆ ವರದಿ ಸಲ್ಲಿಸಿರುವ ಕಾನೂನು ಸೇವೆಗಳ ಪ್ರಾಧಿಕಾರದ ಮೂವರು ಸದಸ್ಯರ ಸಮಿತಿ, ‘ಮೇ 2ರಿಂದ ಮೇ 10ರ ನಡುವೆ ಆಮ್ಲಜನಕ ಕೊರತೆಯಿಂದ 36 ಮಂದಿ ಮೃತಪಟ್ಟಿದ್ದಾರೆ’ ಎಂದು ಶಂಕಿಸಿದೆ.

‘ಮೃತ ರೈತರನ್ನು ಹುತಾತ್ಮರೆಂದು ಘೋಷಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷಿ ತಿದ್ದುಪಡಿ ಕಾಯ್ದೆಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರದ ವಿರುದ್ಧ ರೈತರು ನಡೆಸುತ್ತಿರುವ ಹೋರಾಟಕ್ಕೆ ಆರು ತಿಂಗಳಾಗಿದ್ದು, ಪ್ರತಿಭಟನೆಯ ಸ್ಥಳದಲ್ಲಿ ಮೃತಪಟ್ಟ ಎಲ್ಲ ರೈತರನ್ನು ಹುತಾತ್ಮರೆಂದು ಘೋಷಿಸಿ, ಅವರ ಕುಟುಂಬಗಳಿಗೆ ಪರಿಹಾರ ನೀಡಬೇಕು’ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಆಗ್ರಹಿಸಿದ್ದಾರೆ.

‘ಮೃತಪಟ್ಟ ರೈತರನ್ನು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೊಂದಿದೆ ಎಂದು ಜನ ಭಾವಿಸುತ್ತಿದ್ದಾರೆ. ಜನರ ಬೃಹತ್ ಚಳವಳಿಯನ್ನು ಈ ಮಟ್ಟದಲ್ಲಿ ನಿರ್ಲಕ್ಷಿಸಿದ ಇತಿಹಾಸ ಇಲ್ಲ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ದೇಶದ ಆರ್ಥಿಕ ಭದ್ರತೆಯನ್ನು ನಾಶ ಮಾಡುವ ಮತ್ತು ರೈತರ, ಕಾರ್ಮಿಕರ ಪಾಲಿಗೆ ಮಾರಣಾಂತಿಕವಾಗುವ ಕಾಯ್ದೆಗಳನ್ನು ಮೋದಿ ಸರ್ಕಾರ ಜಾರಿಗೆ ತಂದಿದೆ. ಕೇಂದ್ರ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ಸರ್ವಾಧಿಕಾರಿಯಲ್ಲ ಎನ್ನುವುದಾದರೆ ರೈತರೊಂದಿಗೆ ಚರ್ಚಿಸಿ ಹೋರಾಟ ಹಿಂಪಡೆಯುವಂತೆ ಮಾಡಬೇಕು. ಅದಾನಿ, ಅಂಬಾನಿ ಮತ್ತು ಕಾರ್ಪೊರೇಟ್ ಪರವಾದ ಕಾನೂನುಗಳನ್ನು ವಾಪಸು ಪಡೆಯಬೇಕು’ ಎಂದು ಆಗ್ರಹಿಸಿದ್ದಾರೆ.

‘ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ನೀಡಬೇಕು ಮತ್ತು ಗ್ರಾಹಕರಿಗೂ ನ್ಯಾಯಯುತ ಬೆಲೆಗಳಲ್ಲಿ ಪಡಿತರ ಸಿಗುವಂತೆ ಮಾಡಬೇಕು. ರೈತರು ಬೆಳೆದ ಬೆಳೆಗಳಿಗೆ ಬೆಲೆ ಖಾತ್ರಿ ಕಾಯ್ದೆಯನ್ನು, ಗ್ರಾಹಕರಿಗೆ ನ್ಯಾಯಯುತ ಬೆಲೆಗಳ ಖಾತ್ರಿಯ ಕಾಯ್ದೆಯನ್ನು ಜಾರಿಗೊಳಿಸಬೇಕು. ಇದನ್ನು ನಿಭಾಯಿಸಲು ಸರ್ವಪಕ್ಷಗಳ, ತಜ್ಞರ, ರೈತ ಮುಖಂಡರ, ಗ್ರಾಹಕ ಪ್ರತಿನಿಧಿಗಳ ಶಾಶ್ವತ ಸಮಿತಿ ರಚಿಸಬೇಕು’ ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಪರಿಹಾರ ಧನ: ಸೂಕ್ತ ದಾಖಲಾತಿ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಬೆಳೆ ನಷ್ಟವಾಗಿರುವ ನೆಲಮಂಗಲ ತಾಲ್ಲೂಕಿನ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರು ರಾಜ್ಯ ಸರ್ಕಾರ ನೀಡುವ ಪರಿಹಾರ ಧನ ಪಡೆಯಲು ಅಗತ್ಯ ದಾಖಲೆಗಳನ್ನು ಇಲಾಖೆಗೆ ಸಲ್ಲಿಸಿ ಪರಿಹಾರ ಧನ ಪಡೆದುಕೊಳ್ಳಬೇಕು ಎಂದು ತಾಲ್ಲೂಕು ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಸುಬ್ರಹ್ಮಣ್ಯ ಜಿ.ವಿ. ತಿಳಿಸಿದ್ದಾರೆ.

ಒಂದು ಗುಂಟೆಗೆ ಕನಿಷ್ಠ ₹2ಸಾವಿರ ಮತ್ತು ಒಂದು ಹೆಕ್ಟೇರ್‌ಗೆ ಗರಿಷ್ಠ ₹10 ಸಾವಿರ ಪರಿಹಾರಧನವನ್ನು ರಾಜ್ಯ ಸರ್ಕಾರ ನೀಡಲಿದೆ.

ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮತ್ತು ತೋಟಗಾರಿಕಾ ಇಲಾಖೆಯಲ್ಲಿ ನೋಂದಾಯಿಸಿರುವ ರೈತರ ಬ್ಯಾಂಕ್ ಖಾತೆಗೆ ಪರಿಹಾರ ಧನ ನೇರವಾಗಿ ಜಮಾ ಆಗಲಿದೆ.

ಹೆಚ್ಚಿನ ಮಾಹಿತಿಗಾಗಿ: 9901754339



ಬಿಜೆಪಿ ಮಂಡಲ ವತಿಯಿಂದ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಶಂಕರಮಠ ವಾರ್ಡ್‌ನ ಹಿರಿಯ ನಾಗರಿಕರಿಗೆ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳಿಂದ ಉಚಿತವಾಗಿ ಔಷಧ ವಿತರಿಸಲಾಯಿತು. ಮಂಡಲ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ವಾರ್ಡ್‌ನ ಪ್ರಧಾನ ಕಾರ್ಯದರ್ಶಿ ಅವಿನ್ ಆರಾಧ್ಯ, ನಂದಿನಿ ಲೇಔಟ್ ವಾರ್ಡ್ ಅಧ್ಯಕ್ಷ ಲೋಕೇಶ್ ಇದ್ದರು

ದಿನಕ್ಕೆ 88 ಲಕ್ಷ ಲೀಟರ್ ಸಂಗ್ರಹ: ಉಳಿಯುತ್ತಿದೆ ನಂದಿನಿ ಹಾಲು

ಹಾಲು ಖರೀದಿ: ವಾರಕ್ಕೆ 2 ದಿನ ಸ್ಥಗಿತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್‌ನಿಂದಾಗಿ ‘ನಂದಿನಿ’ ಹಾಲು ಮಾರಾಟ ಕುಸಿದಿದ್ದು, ಒಕ್ಕೂಟಗಳಿಗೆ ಬರುತ್ತಿರುವ ಹಾಲಿನ ಪ್ರಮಾಣ ಹೆಚ್ಚುತ್ತಲೇ ಇದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ವಾರದಲ್ಲಿ ಒಂದೆರಡು ದಿನ ಹಾಲು ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಕೆಎಂಎಫ್ ಚಿಂತನೆ ನಡೆಸಿದೆ.

ಮೇ ಮೊದಲ ವಾರದಲ್ಲಿ ದಿನಕ್ಕೆ 70 ಲಕ್ಷ ಲೀಟರ್ ಹಾಲನ್ನು ಒಕ್ಕೂಟಗಳಿಗೆ ರೈತರು ಪೂರೈಸುತ್ತಿದ್ದರು. ಕಳೆದ ವಾರ ಈ ಪ್ರಮಾಣ 82 ಲಕ್ಷ ಲೀಟರ್ ಆಗಿತ್ತು. ಈಗ 88 ಲಕ್ಷ ಲೀಟರ್‌ಗೆ ಏರಿದೆ. ಖಾಸಗಿಯವರು ಹಾಲು ಖರೀದಿ ಕಡಿಮೆ ಮಾಡಿರುವುದು, ಮಳೆಯಾಗಿ ರಾಸುಗಳಿಗೆ ಯಥೇಚ್ಛವಾಗಿ ಮೇವು ಸಿಕ್ಕುತ್ತಿರುವುದು ಹಾಲಿನ ಪ್ರಮಾಣ ಹೆಚ್ಚಳಕ್ಕೆ ಕಾರಣ ಎನ್ನಲಾಗಿದೆ.

‘ಹಾಲಿನ ಪ್ಯಾಕೇಟ್ ಮಾರಾಟ, ಬೆಣ್ಣೆ, ತುಪ್ಪ, ಎಲ್ಲಾ ಹಾಲಿನ ಉತ್ಪನ್ನಗಳ ತಯಾರಿಕೆ ಸೇರಿ 53 ಲಕ್ಷ ಲೀಟರ್ ಬಳಕೆಯಾಗುತ್ತಿದೆ. ಉಳಿದ 35 ಲಕ್ಷ ಲೀಟರ್ ಹಾಲನ್ನು ಪ್ರತಿನಿತ್ಯ ಪುಡಿಯಾಗಿ ಪರಿವರ್ತಿಸಲಾಗುತ್ತಿದೆ’ ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

‘ಪರಿವರ್ತನೆಗೆ ಇರುವ ಸಾಮರ್ಥ್ಯದ ಮಿತಿಯೂ ಮೀರಿದೆ. ಹಾಲಿನ ಪೂರೈಕೆ ಇದೇ ರೀತಿ ಮುಂದುವರಿದರೆ, ಪುಡಿಯಾಗಿ ಪರಿವರ್ತಿಸುವುದು ಕಷ್ಟ. ಅನಿವಾರ್ಯವಾಗಿ ವಾರದಲ್ಲಿ ಒಂದೆರಡು ದಿನ ರಜೆ ಕೊಡಬೇಕಾದ ಸ್ಥಿತಿ ಎದುರಾಗಲಿದೆ’ ಎಂದು ತಿಳಿಸಿವೆ.

‘ಲಾಕ್‌ಡೌನ್ ನಂತರ ಹಾಲಿನ ಪುಡಿ ತಯಾರಿಕೆ ಹೆಚ್ಚಾಗಿರುವ ಕಾರಣ ಸದ್ಯ 18 ಸಾವಿರ ಟನ್ ಹಾಲಿನ ಪುಡಿ ದಾಸ್ತಾನಿದೆ. 12 ಸಾವಿರ ಟನ್ ಬೆಣ್ಣೆ ದಾಸ್ತಾನಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದ ಕಾರಣ ದರವೂ ಕುಸಿತವಾಗಿದೆ. ಯಥೇಚ್ಛವಾಗಿ ಸಂಗ್ರಹ ಆಗುತ್ತಿರುವ ಹಾಲನ್ನು ಏನು ಮಾಡಬೇಕು ಎಂಬ ಚಿಂತೆ ಅಧಿಕಾರಿಗಳನ್ನು ಕಾಡುತ್ತಿದೆ. ವಾರದಲ್ಲಿ ಒಂದರೆಡು ದಿನ ಹಾಲಿನ ರಜೆ ನೀಡಲು ಸಾಧ್ಯವೇ ಎಂಬ ಚಿಂತನೆಯನ್ನೂ ನಡೆಸುತ್ತಿದ್ದಾರೆ’ ಎಂದು ಮೂಲಗಳು ಹೇಳಿವೆ. ಈ ಬಗ್ಗೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಅವರಿಂದ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಶಾಲಾ ಮಕ್ಕಳಿಗಾಗಿ ಪುಡಿ ಖರೀದಿಗೆ ಮನವಿ

‘1ರಿಂದ 10ನೇ ತರಗತಿಯ ಸರ್ಕಾರಿ ಶಾಲೆ ಮತ್ತು ಅನುದಾನಿತ ಶಾಲೆ ಮಕ್ಕಳಿಗೆ ಕೆನೆಭರಿತ ಹಾಲಿನ ಪುಡಿ ನೀಡುವ ಯೋಜನೆ ಸದ್ಯಕ್ಕೆ ಸ್ಥಗಿತಗೊಂಡಿದೆ. ಸರ್ಕಾರ ಕೆಎಂಎಫ್‌ನಿಂದ ಖರೀದಿ ಮಾಡಿ ಮಕ್ಕಳ ಮನೆಗೇ ಹಾಲಿನ ಪುಡಿ ವಿತರಿಸಬೇಕು’ ಎಂಬ ಮನವಿಯನ್ನು ಕೆಎಂಎಫ್ ಸರ್ಕಾರಕ್ಕೆ ಸಲ್ಲಿಸಿದೆ.‘ಕೋವಿಡ್‌ನಿಂದ ಶಾಲೆಗಳಿಗೆ ರಜೆ ನೀಡಿದ ಬಳಿಕ ಹಾಲಿನ ಪುಡಿ ನೀಡುವ ಯೋಜನೆ ನಿಂತಿದೆ. ಮನೆಯಲ್ಲಿರುವ ಮಕ್ಕಳಿಗೆ ಅರ್ಧ ಕೆ.ಜಿ ಹಾಲಿನ ಪುಡಿ ನೀಡುವ ಮೂಲಕ ಮಕ್ಕಳಲ್ಲಿ ಪೌಷ್ಟಿಕಾಂಶ ಹೆಚ್ಚಿಸಲು ಸಾಧ್ಯವಿದೆ. ಈ ಯೋಜನೆಗೆ ಹೊಸದಾಗಿ ಹಣ ಹೊಂದಿಸುವ ಅಗತ್ಯ ಇಲ್ಲ. ಪ್ರಸಕ್ತ ಸಾಲಿನ ಈ ಯೋಜನೆಗೆ ₹653 ಕೋಟಿ ನಿಗದಿಯಾಗಿದ್ದು, ಅದನ್ನು ಬಳಸಿಕೊಳ್ಳಬಹುದು’ ಎಂದೂ ವಿವರಿಸಿದೆ. ‘ರಾಜ್ಯದಲ್ಲಿರುವ 64 ಲಕ್ಷ ಮಕ್ಕಳಿಗೆ ಅರ್ಧ ಕೆ.ಜಿಯಂತೆ ಹಾಲಿನ ಪುಡಿ ನೀಡಲು ₹92.32 ಕೋಟಿ ಬೇಕಾಗಲಿದೆ. ಹೀಗೆ ಖರೀದಿಸುವ ಮೂಲಕ ಎರಡು ತಿಂಗಳ ಮಟ್ಟಿಗಾದರೂ ಹಾಲು ಉತ್ಪಾದಕರ ನೆರವಿಗೆ ಸರ್ಕಾರ ಬರಬೇಕು’ ಎಂದು ಹೇಳಿದೆ.

ಖಾಸಗಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ದಾಖಲಾತಿ ಇಳಿಕೆ • ಅನ್ಯರಾಜ್ಯದವರಿಗೂ ಸಹಕಾರಿಯಾಗಿದ್ದ ಕೇಂದ್ರಗಳು

ಹೋಟೆಲ್ ಆರೈಕೆ: ಶೇ 50ರಷ್ಟು ಹಾಸಿಗೆ ಖಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಒಂದು ವಾರದಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿದೆ. ಇದರಿಂದಾಗಿ, ಹೋಟೆಲ್ ಆರೈಕೆ ಕೇಂದ್ರಗಳಲ್ಲಿ ಸಜ್ಜುಗೊಳಿಸಲಾಗಿದ್ದ 1,281 ಹಾಸಿಗೆಗಳಲ್ಲಿ ಶೇ 50ಕ್ಕೂ ಅಧಿಕ ಹಾಸಿಗೆಗಳು ಖಾಲಿಯಾಗಿವೆ.

ಎರಡನೇ ಅಲೆಯಲ್ಲಿ ದಿನಕ್ಕೆ ಹೊಸ ಪ್ರಕರಣಗಳ ಸಂಖ್ಯೆ 20 ಸಾವಿರದ ಗಡಿ ದಾಟಿದ್ದರಿಂದ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರು ಸಮಸ್ಯೆ ಎದುರಿಸಬೇಕಾಯಿತು.

ಹೀಗಾಗಿ, ಸರ್ಕಾರವು ಹೋಟೆಲ್‌ಗಳ ಸಹಕಾರದಲ್ಲಿ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿತ್ತು. ಆತಿಥ್ಯ ವಲಯಕ್ಕೆ ಕೋವಿಡ್ ಹೊಡೆತ ನೀಡಿದ್ದರಿಂದ ಹೋಟೆಲ್‌ಗಳ ಮಾಲೀಕರು ಕೂಡ ಕೋವಿಡ್ ಆರೈಕೆ ಕೇಂದ್ರಗಳ ನಿರ್ಮಾಣಕ್ಕೆ ಒಲವು ತೋರಿದ್ದರು.

ಖಾಸಗಿ ಆಸ್ಪತ್ರೆಗಳು ಹತ್ತಿರದ ಹೋಟೆಲ್‌ಗಳನ್ನು ಗುರುತಿಸಿ, ಅಲ್ಲಿ ಅಗತ್ಯ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ನೇಮಿಸಿದ್ದವು. ಸೋಂಕು ಲಕ್ಷಣಗಳು ಅಷ್ಟಾಗಿ ಗೋಚರಿಸದವರಿಗೆ ಚಿಕಿತ್ಸೆ ಒದಗಿಸಲು ಹಾಸಿಗೆಗಳನ್ನು ಸಜ್ಜುಗೊಳಿಸಲಾಗಿತ್ತು.

ಮನೆ ಆರೈಕೆಗೆ ವ್ಯವಸ್ಥೆ ಇಲ್ಲದವರಿಗೆ, ಅನ್ಯ ರಾಜ್ಯಗಳಿಂದ ಬಂದು ಸೋಂಕಿತರಾದವರಿಗೆ, ಆಸ್ಪತ್ರೆ ಚಿಕಿತ್ಸೆ ಅಗತ್ಯ ಇಲ್ಲದವರಿಗೆ ಹೋಟೆಲ್ ಆರೈಕೆ ಕೇಂದ್ರಗಳು ಸಹಕಾರಿಯಾಗಿದ್ದವು. ಹೀಗಾಗಿ, ಹಾಸಿಗೆಗಳು ಭರ್ತಿಯಾಗಿದ್ದವು. ಈಗ ಅಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 600ಕ್ಕೆ ಇಳಿದಿದೆ.

ಸ್ಥಗಿತ ಸಾಧ್ಯತೆ: ನಗರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 2 ಲಕ್ಷಕ್ಕೆ ಇಳಿಕೆಯಾಗಿದೆ. ಎರಡು ವಾರಗಳ ಹಿಂದೆ 4 ಲಕ್ಷದ ಆಸುಪಾಸಿನಲ್ಲಿತ್ತು.

ಕೋವಿಡ್ ಪೀಡಿತರಾದವರಲ್ಲಿ ಶೇ 80ರಷ್ಟು ಮಂದಿಗೆ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಶೇ 10ರಷ್ಟು ಮಂದಿಗೆ ಮಾತ್ರ ಹೆಚ್ಚಿನ ಚಿಕಿತ್ಸೆ ಬೇಕಾಗುತ್ತಿದೆ. ಸೋಂಕಿತರಲ್ಲಿ ಸದ್ಯ 80 ಸಾವಿರಕ್ಕೂ ಅಧಿಕ ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. ಕೆಲವರು ಸರ್ಕಾರಿ ಕೋವಿಡ್ ಆರೈಕೆ ಕೇಂದ್ರಗಳು ಹಾಗೂ ಸಂಘ–ಸಂಸ್ಥೆಗಳು ಪ್ರಾರಂಭಿಸಿದ ಆರೈಕೆ ಕೇಂದ್ರ ಗಳಲ್ಲಿದ್ದಾರೆ.

ಕೋವಿಡ್ ಪೀಡಿತರಿಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಂದ 13,388 ಹಾಸಿಗೆಗಳನ್ನು ಗುರುತಿಸಲಾಗಿತ್ತು.

ಸದ್ಯ 6,336 ಮಂದಿ ಆಸ್ಪತ್ರೆ ಚಿಕಿತ್ಸೆ ಪಡೆಯುತ್ತಿದ್ದಾರೆ. 6,949 ಹಾಸಿಗೆಗಳು ಖಾಲಿಯಿವೆ. ಸುಗುಣ, ಪೀಪಲ್ ಟ್ರೀ, ಮಣಿಪಾಲ್, ಮಲ್ಲಿಗೆ, ಅಪೋಲೊ, ಕೊಲಂಬಿಯಾ ಏಷ್ಯಾ ಸೇರಿದಂತೆ ನಗರದ ಪ್ರಮುಖ ಆಸ್ಪತ್ರೆಗಳು 30ಕ್ಕೂ ಅಧಿಕ ಹೋಟೆಲ್‌ಗಳಲ್ಲಿ ಕೋವಿಡ್ ಸೇವೆ ಒದಗಿಸುತ್ತಿವೆ.

ಅಂಕಿ–ಅಂಶ

1,281 ಹೋಟೆಲ್‌ಗಳಲ್ಲಿ ಆರೈಕೆಗೆ ಸಜ್ಜುಗೊಳಿಸಲಾಗಿದ್ದ ಹಾಸಿಗೆಗಳು

600 ಹೋಟೆಲ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವವರು

32 ಆರೈಕೆ ಕೇಂದ್ರಗಳಾಗಿ ಮಾರ್ಪಟ್ಟ ಹೋಟೆಲ್‌ಗಳು

17 ಹೋಟೆಲ್ ಆರೈಕೆ ಕೆಂದ್ರಗಳನ್ನು ನಿರ್ವಹಿಸುತ್ತಿರುವ ಆಸ್ಪತ್ರೆಗಳು


‘ವಾರದಲ್ಲಿ ಕೇಂದ್ರಗಳು ಸ್ಥಗಿತ’



ಡಾ. ಪ್ರಸನ್ನ ಎಚ್.ಎಂ.

‘ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವುದರಿಂದ ಆಸ್ಪತ್ರೆಗಳಲ್ಲಿಯೇ ಸಾಮಾನ್ಯ ಹಾಸಿಗೆಗಳು ಲಭ್ಯವಾಗುತ್ತಿವೆ. ಹೋಟೆಲ್ ಆರೈಕೆ ಕೇಂದ್ರಗಳ ನಿರ್ವಹಣೆ ಹೊರೆಯಾಗಲಿದೆ. ಸದ್ಯ ಅಲ್ಲಿ ಕೂಡ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ವಾರದಲ್ಲಿ ಆ ಕೇಂದ್ರಗಳು ಸ್ಥಗಿತವಾಗಲಿವೆ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

‘ಸ್ಥಗಿತವಾದಲ್ಲಿ ಪುನಃ ಆತಿಥ್ಯ’



ಪಿ.ಸಿ. ರಾವ್

‘ಖಾಸಗಿ ಆಸ್ಪತ್ರೆಗಳ ಜತೆಗಿನ ಒಪ್ಪಂದದ ಅನುಸಾರ ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಲು ಕೆಲ ತಾರಾ ಹೋಟೆಲ್‌ಗಳನ್ನು ನೀಡಲಾಗಿತ್ತು. ಹಾಸಿಗೆ ಸಿಗದೆ ಇರುವಾಗ ಸೋಂಕಿತರಿಗೆ ಹೋಟೆಲ್ ಆರೈಕೆ ಕೇಂದ್ರಗಳು ಸಹಕಾರಿಯಾದವು. ಕೋವಿಡ್ ಸೇವೆ ಹೋಟೆಲ್‌ಗಳಲ್ಲಿ ಸ್ಥಗಿತವಾದಲ್ಲಿ ಎಲ್ಲ ಕೊಠಡಿಗಳನ್ನು ಸೋಂಕು ನಿವಾರಕದಿಂದ ಸ್ವಚ್ಛ ಮಾಡಿ, ಆತಿಥ್ಯ ಸೇವೆಗೆ ಸಜ್ಜುಗೊಳಿಸುತ್ತೇವೆ’ ಎಂದು ಬೃಹತ್ ಬೆಂಗಳೂರು ಹೋಟೆಲ್ ಸಂಘಟನೆಯ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

ಸುದ್ದಿ 2 ನಿಮಿಷ

ಖಾಸಗಿಗೆ ಹೆಚ್ಚಿನ ಡೋಸ್ ಲಸಿಕೆ: ನಿಲುವು ಸ್ಪಷ್ಟಪಡಿಸಿ

ಬೆಂಗಳೂರು: ‘ಖಾಸಗಿ ಆಸ್ಪತ್ರೆಗಳಿಗೆ ಶೇ 25ಕ್ಕೂ ಹೆಚ್ಚಿನ ಡೋಸ್ ಲಸಿಕೆ ಲಭ್ಯ ಆಗಿರುವುದು ಮುಂದಿನ ದಿನಗಳಲ್ಲಿ ಸಮಸ್ಯೆ ತಂದೊಡ್ಡುವ ಸಾಧ್ಯತೆ ಇದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರನ್ನು ಒಳಗೊಂಡ ವಿಶೇಷ ವಿಭಾಗೀಯ ಪೀಠ, ‘ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆಯದ ವ್ಯಕ್ತಿ ಖಾಸಗಿ ಸಂಸ್ಥೆಗಳಲ್ಲಿ ಲಸಿಕೆ ಪಡೆಯಬಹುದು. ಇದನ್ನು ಸಂವಿಧಾನದ 14ನೇ ವಿಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಗಮನಿಸಬೇಕಾದ ಅಗತ್ಯವಿದೆ’ ಎಂದು ಹೇಳಿತು.



‘ಖಾಸಗಿ ಸಂಸ್ಥೆಗಳು ತಮ್ಮ ಪಾಲಿನ ಶೇ 25ರಷ್ಟಕ್ಕೂ ಹೆಚ್ಚುವರಿಯಾಗಿ 18 ಸಾವಿರ ಡೋಸ್ ಪಡೆದುಕೊಂಡಿವೆ. ಕೆಲ ರಾಜ್ಯಗಳಲ್ಲಿ ಖಾಸಗಿ ಸಂಸ್ಥೆಗಳು ತಮ್ಮ ಪಾಲಿನ ಡೋಸ್ ಖಾಲಿ ಮಾಡದಿದ್ದರೆ ಅದನ್ನು ಬೇರೆ ರಾಜ್ಯದಲ್ಲಿನ ಖಾಸಗಿ ಸಂಸ್ಥೆಗಳಿಗೆ ಲಭ್ಯವಾಗುವಂತೆ ಮಾಡಲಾಗಿದೆ’ ಎಂದು ಕೇಂದ್ರ ಸರ್ಕಾರ ವಿವರಿಸಿತು.

‘ಶೇ 25ಕ್ಕಿಂತ ಹೆಚ್ಚಿನ ಪಾಲನ್ನು ಖಾಸಗಿ ಸಂಸ್ಥೆಗಳು ಪಡೆದುಕೊಂಡರೆ ಮುಂದಿನ ದಿನಗಳಲ್ಲಿ ಸಮಸ್ಯೆ ಉದ್ಭವಿಸಲಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕು. ಈಗಾಗಲೇ 18 ಸಾವಿರ ಹೆಚ್ಚುವರಿ ಡೋಸ್‌ಗಳನ್ನು ಖಾಸಗಿ ಸಂಸ್ಥೆಗಳು ಪಡೆದುಕೊಂಡಿರುವ ಕಾರಣ ಖಾಸಗಿ ಸಂಸ್ಥೆಗಳಿಗೆ ಕೆಲ ನಿರ್ದೇಶನಗಳನ್ನು ನೀಡಬೇಕಾಗುತ್ತದೆ. ಈ ಸಂಬಂಧ ಒಂದು ವಾರದೊಳಗೆ ಪ್ರತಿಕ್ರಿಯೆ ಸಲ್ಲಿಸಬೇಕು’ ಎಂದು ಎರಡೂ ಸರ್ಕಾರಗಳಿಗೆ ಪೀಠ ನಿರ್ದೇಶನ ನೀಡಿತು.

ರಾಜ್ಯಪಾಲರಿಗೆ ಕೋವಿಡ್ ಮಾಹಿತಿ

ಬೆಂಗಳೂರು: ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಗುರುವಾರ ಭೇಟಿ ಮಾಡಿದ ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ರಾಜ್ಯದಲ್ಲಿನ ಕೋವಿಡ್ ಪರಿಸ್ಥಿತಿ ಮತ್ತು ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು.

ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಜೊತೆ ರಾಜಭವನಕ್ಕೆ ತೆರಳಿದ ಅವರು, ಸೋಂಕು ತಡೆಗಟ್ಟಲು ಲಾಕ್‌ಡೌನ್ ಸೇರಿದಂತೆ ಈವರೆಗೆ ತೆಗೆದುಕೊಂಡ ಕ್ರಮಗಳು, ಲಸಿಕೆ ಅಭಿಯಾನ, ವೈದ್ಯಕೀಯ ಮೂಲಸೌಕರ್ಯ ಅಭಿವೃದ್ಧಿ, ಸಿಬ್ಬಂದಿ ನೇಮಕ ಸೇರಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದರು.

ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕಿನ ಬಗ್ಗೆಯೂ ರಾಜ್ಯಪಾಲರಿಗೆ ಮಾಹಿತಿ ನೀಡಿದರು.

ರಾಜೀನಾಮೆ ಚಟಾಕಿ ಹಾರಿಸಿದ ಮಾಧುಸ್ವಾಮಿ

ಬೆಂಗಳೂರು: ‘ನೀವು ಹೇಳುತ್ತಿರುವುದೆಲ್ಲ ಅನುಷ್ಠಾನ ಆಗಿದ್ದರೆ ನಾನು ರಾಜೀನಾಮೆ ಕೊಡಲು ಸಿದ್ಧ’ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ಉದ್ದೇಶಿಸಿ ಸಚಿವ ಸಂಪುಟ ಸಭೆಯಲ್ಲಿ ಲಘು ಧಾಟಿಯಲ್ಲಿ ಹೇಳಿದರು.

ಕೋವಿಡ್ ನಿರ್ವಹಣೆ ಕುರಿತು ಚರ್ಚೆ ನಡೆಯುವಾಗ ಅಶ್ವತ್ಥನಾರಾಯಣ ಅವರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಾಹಿತಿ ನೀಡುತ್ತಿದ್ದರು.

ಆಗ ಮಧ್ಯ ಪ್ರವೇಶಿಸಿದ ಮಾಧುಸ್ವಾಮಿ, ‘ನೀವು ಹೇಳುತ್ತಿರುವುದೆಲ್ಲ ದಾಖಲೆ ಪತ್ರದಲ್ಲಿ ಮಾತ್ರ ಇದೆ. ಅವೆಲ್ಲ ಜಾರಿ ಆಗಿಲ್ಲ. ನೀವು ಹೇಳಿದ್ದೆಲ್ಲ ನಿಜವೇ ಆಗಿದ್ದರೆ, ರಾಜಿನಾಮೆ ಕೊಡಲು ಸಿದ್ಧ ಎಂದು ಚಟಾಕಿ ಹಾರಿಸಿದರು’ ಎಂದು ಮೂಲಗಳು ತಿಳಿಸಿವೆ.

‘ರಾಜೀನಾಮೆ’ ಪದ ಕಿವಿಗೆ ಬೀಳುತ್ತಿದ್ದಂತೆ ಎಚ್ಚೆತ್ತುಕೊಂಡ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ‘ಮಾಧುಸ್ವಾಮಿ ಸುಮ್ಮನೆ ಇರಿ’ ಎಂದು ಹೇಳಿ ಸಮಾಧಾನಪಡಿಸಿದರು.

ಈಚೆಗೆ ಮುಖ್ಯಮಂತ್ರಿಯವರು ಜಿಲ್ಲಾಧಿಕಾರಿಗಳ ವಿಡಿಯೊ ಸಂವಾದ ನಡೆಸುವಾಗಲೂ, ಅಧಿಕಾರಿಗಳು ಮತ್ತು ಆರೋಗ್ಯ ಸಚಿವರ ವಿರುದ್ಧ ಮಾಧುಸ್ವಾಮಿ ಕಿಡಿಕಾರಿದ್ದರು.

‘ಮೊದಲ ಹಂತದಲ್ಲಿ 7,500 ಕಾರ್ಮಿಕರಿಗೆ ಲಸಿಕೆ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಷನಲ್ ಕಾಲೇಜು, ಎಂ.ಜಿ.ರಸ್ತೆ, ಬೈಯಪ್ಪನಹಳ್ಳಿ ಹಾಗೂ ವಿಜಯನಗರ ಮೆಟ್ರೊ ನಿಲ್ದಾಣಗಳಲ್ಲಿ ಎರಡು ದಿನ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿ ನಿಲ್ದಾಣದಲ್ಲಿ 6 ಕೇಂದ್ರಗಳನ್ನು ತೆರೆಯಲಾಗಿದೆ. ಒಂದೊಂದು ನಿಲ್ದಾಣದಲ್ಲಿ ದಿನಕ್ಕೆ 900ರಂತೆ ಮೊದಲ ಹಂತದಲ್ಲಿ 7,500 ಮೆಟ್ರೊ ನಿರ್ಮಾಣ ಕಾರ್ಮಿಕರಿಗೆ ಲಸಿಕೆ ಹಾಕುವ ಗುರಿ ಇದೆ’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಎ.ಸಿ.ಟಿ. ಗ್ರಾಂಟ್ಸ್, ದಿ ಯುನೈಟೆಡ್ ಬೆಂಗಳೂರು ಹಾಗೂ ಸತ್ವ ಕನ್ಸಲ್ಟಿಂಗ್ ಸಹಭಾಗಿತ್ವದಲ್ಲಿ ಬಸವನಗುಡಿಯ ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮೆಟ್ರೊ ನಿರ್ಮಾಣ ಕಾರ್ಮಿಕರಿಗೆ ಲಸಿಕೆ ಉಚಿತವಾಗಿ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಹಲವಾರು ಕಂಪನಿಗಳು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಕಾರ್ಯಕ್ರಮದ ಅಡಿಯಲ್ಲಿ ಹಣ, ಅತ್ಯಾಧುನಿಕ ಉಪಕರಣಗಳನ್ನು ಒದಗಿಸಿವೆ’ ಎಂದರು.

ಕೊಳೆಗೇರಿಗಳಲ್ಲಿ ಸೋಂಕು ಹರಡುವ ಅಪಾಯ ಹೆಚ್ಚು: ವಿಲ್ಸನ್ ಗಾರ್ಡನ್‌ನ ರೆಡ್ ಫೀಲ್ಡ್ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕೊಳೆಗೇರಿ ನಿವಾಸಿ ಗಳಿಗೆ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಭಾಗಿಯಾಗಿ ‘ಕೊಳೆಗೇರಿಗಳಲ್ಲಿ ಸೋಂಕು ಹರಡುವ ಅಪಾಯ ಹೆಚ್ಚಿರುತ್ತದೆ. ಇದನ್ನು ಮನಗಂಡು ಎಸಿಟಿ ಗ್ರಾಂಟ್ಸ್, ಅಮೆಜಾನ್ ಇಂಡಿಯಾ, ಜೊಮ್ಯಾಟೊ, ಪೇಟಿಎಂ, ಸತ್ವ ಕನ್ಸಲ್ಟಿಂಗ್ ಸೇರಿದಂತೆ ಹಲವು ಕಂಪನಿಗಳು ಸಿಎಸ್‌ಆರ್ ನಿಧಿ ಮೂಲಕ ಇಲ್ಲಿನ ನಿವಾಸಿಗಳಿಗೆ ಲಸಿಕೆ ನೀಡುವ ವ್ಯವಸ್ಥೆ ಮಾಡಿವೆ. ಕೋವಿಡ್ ನಿಯಂತ್ರಣದ ದೃಷ್ಟಿಯಿಂದ ಇದೊಂದು ಮಹತ್ವದ ಹೆಜ್ಜೆ’ ಎಂದರು.



ಬೀದಿಬದಿ ವ್ಯಾಪಾರಿಗಳಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಚಾಲನೆ ನೀಡಿದರು. ಸಚಿವ ಆರ್. ಅಶೋಕ, ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ ಗರುಡಾಚಾರ್, ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಇದ್ದರು –ಪ್ರಜಾವಾಣಿ ಚಿತ್ರ

‘ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಒದಗಿಸಲು ಕ್ರಮ’

‘ಗುರುತಿನ ಚೀಟಿ ಹೊಂದಿರದ ಬೀದಿ ಬದಿ ವ್ಯಾಪಾರಿಗಳಿಗೆ ಸರ್ಕಾರದಿಂದಲೇ ಆನ್‌ಲೈನ್ ಮೂಲಕ ಶಿಫಾರಸು ಪತ್ರ (ಎಲ್‌ಒಆರ್) ನೀಡಿ ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಒದಗಿಸಲು ಪ್ರಯತ್ನಿಸಲಾಗುತ್ತಿದೆ’ ಎಂದು ಯಡಿಯೂರಪ್ಪ ಹೇಳಿದರು.

ಬಿಬಿಎಂಪಿ ವತಿಯಿಂದ ಬಸವನಗುಡಿ ನ್ಯಾಷನಲ್ ಕಾಲೇಜು ಆವರಣದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಲಸಿಕೆ ನೀಡಲಾಗುತ್ತಿದ್ದು ಇಲ್ಲಿಗೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

‘4 ಸಾವಿರ ಬೀದಿ ಬದಿ ವ್ಯಾಪಾರಿಗಳಿಗೆ ವಿವಿಧ ಬ್ಯಾಂಕ್‌ಗಳಿಂದ ತಲಾ ₹10 ಸಾವಿರ ಸಾಲ ನೀಡಲು ಕ್ರಮ ಕೈಗೊಳ್ಳಲಾಗಿದೆ. 53 ಸಾವಿರ ವ್ಯಾಪಾರಿಗಳನ್ನು ಗುರುತಿಸಿ ಅವರಿಗೆ ಲಸಿಕೆ ಉಚಿತವಾಗಿ ನೀಡಲು ಮುಂದಾಗಿದ್ದೇವೆ’ ಎಂದರು.

‘ತುರ್ತು ಚಿಕಿತ್ಸಾ ವ್ಯವಸ್ಥೆ ಹೆಚ್ಚಳ’

‘ನಗರದಲ್ಲಿ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿವೆ. ಹಾಗೆಂದು ನಾವು ಮೈಮರೆಯಬಾರದು. ತುರ್ತು ಚಿಕಿತ್ಸಾ ವ್ಯವಸ್ಥೆ ಹೆಚ್ಚಿಸುವ ಮೂಲಕ ಜನರಲ್ಲಿ ಸುರಕ್ಷತೆಯ ಭಾವ ಮೂಡಿಸಲಾಗುವುದು’ ಎಂದು ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಜಯನಗರ 4ನೇ ಬ್ಲಾಕ್‌ನಲ್ಲಿರುವ ಗಾರ್ಡನ್ ಸಿಟಿ ಆಸ್ಪತ್ರೆಯನ್ನು ಪುನರುಜ್ಜೀವನಗೊಳಿಸಲಾಗಿದ್ದು, ಇಲ್ಲಿ ಕೋವಿಡ್ ಪೀಡಿತರ ಚಿಕಿತ್ಸೆಗೆ 70 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಈ ಆಸ್ಪತ್ರೆಯಲ್ಲಿ ಆಶೀರ್ವಾದ ಪೈಪ್ಸ್ ವತಿಯಿಂದ 10 ಐಸಿಯು ಹಾಸಿಗೆ, ಅಜೀಂ ಪ್ರೇಮ್‌ಜೀ ಫೌಂಡೇಷನ್ ಹಾಗೂ ಡಾಕ್ಟರ್ಸ್ ಫಾರ್ ಯೂ ಸಂಸ್ಥೆಗಳ ಸಹಕಾರದೊಂದಿಗೆ 10 ಎಚ್‌ಡಿಯು ಹಾಗೂ ಆಮ್ಲಜನಕ ಸೌಲಭ್ಯದ 50 ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಜಯನಗರ ಜನರಲ್ ಆಸ್ಪತ್ರೆಯ ವಿಸ್ತರಣಾ ಘಟಕವಾಗಿ ಈ ಆಸ್ಪತ್ರೆ ಕೆಲಸ ಮಾಡಲಿದೆ’ ಎಂದು ಅವರು ತಿಳಿಸಿದರು.



ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆಯ ನೇಕಾರ ಕಾಲೊನಿಯ ಸ್ವಕುಳಸಾಳಿ ಸಮಾಜದ 45 ಬಡ ಕುಟುಂಬಗಳಿಗೆ ಸಂಯುಕ್ತ ಸ್ವಕುಳಸಾಳಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ ಭಂಡಾರೆ ನೇತೃತ್ವದಲ್ಲಿ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಸಂಘದ ಅಧ್ಯಕ್ಷ ಗಿರಿಧರ ಗಾಯಕವಾಡ ಇದ್ದರು.

ವೈದ್ಯಕೀಯ ಸಿಬ್ಬಂದಿಯಿಂದ ‘ನಾಳೆ ಬನ್ನಿ’ ಮಂತ್ರ

ಕೆಲವರಿಗೆ ಲಸಿಕೆ ಹಲವರಿಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 45 ವರ್ಷ ಮೇಲ್ಪಟ್ಟವರು ಮತ್ತು ಕೋವಿಡ್ ಮುಂಚೂಣಿ ಕಾರ್ಯಕರ್ತರು ಲಸಿಕೆಗಾಗಿ ಕೋವಿಡ್ ಆಸ್ಪತ್ರೆಗಳತ್ತ ಹೆಜ್ಜೆ ಹಾಕಿದರು. ಆಸ್ಪತ್ರೆಗಳ ಮುಂದೆ ಎಂದಿನ ದಟ್ಟಣೆ ಕಾಣಲಿಲ್ಲ. ಕೆಲವು ಕಡೆ ‘ನಾಳೆ ಬನ್ನಿ’ ಎಂಬ ಮಾತು ಸಾಮಾನ್ಯವಾಗಿತ್ತು.

ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಎರಡು ದಿನದಿಂದ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುತ್ತಿದೆ. ಅದರಲ್ಲಿಯೂ 45 ವರ್ಷ ಮೇಲ್ಪಟ್ಟವರಿಗೆ ಎರಡನೇ ಡೋಸ್ ಮಾತ್ರ ಈ ಲಸಿಕೆ ನೀಡಲಾಯಿತು. ವಾರಗಟ್ಟಲೇ ಕೋವ್ಯಾಕ್ಸಿನ್‌ಗಾಗಿ ಕಾಯುತ್ತಿದ್ದವರಿಗೆ ಆದ್ಯತೆ ಮೇರೆಗೆ ಈ ಲಸಿಕೆ ವಿತರಿಸಲಾಯಿತು.

45 ವರ್ಷ ಮೇಲ್ಪಟ್ಟವರಿಗೆ ಕೋವಿಶೀಲ್ಡ್ ಲಸಿಕೆಯ ಮೊದಲ ಮತ್ತು ಎರಡನೇ ಡೋಸ್ ನೀಡಲಾಯಿತು. ಈ ಆಸ್ಪತ್ರೆಯ ಮುಂದೆ ಬುಧವಾರ ಕಂಡು ಬಂದಿದ್ದ ದಟ್ಟಣೆ ಗುರುವಾರ ಇರಲಿಲ್ಲ. ಹಿರಿಯ ನಾಗರಿಕರಿಗೆ ಮತ್ತು ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆ ಮೇರೆಗೆ ಲಸಿಕೆ ವಿತರಿಸಲಾಯಿತು.

‘ಕೋವ್ಯಾಕ್ಸಿನ್ ಲಸಿಕೆ ಕೊಡಲು ಆರಂಭಿಸಿದ್ದೇವೆ. ಗುರುವಾರ 170 ಜನರಿಗೆ ಕೋವ್ಯಾಕ್ಸಿನ್ ಮತ್ತು 90 ಮಂದಿಗೆ ಕೋವಿಶೀಲ್ಡ್ ಲಸಿಕೆ ನೀಡಲಾಯಿತು’ ಎಂದು ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ವೆಂಕಟೇಶಯ್ಯ ತಿಳಿಸಿದರು.

‘ನಾಳೆ ಬನ್ನಿ’: ನಿಗದಿತ ಸಂಖ್ಯೆಯಲ್ಲಿ ಅಂದರೆ ಸುಮಾರು 50ರಿಂದ 60 ಜನರಿಗೆ ಟೋಕನ್ ವಿತರಿಸಿದ ನಂತರ, ಉಳಿದವರಿಗೆ 'ನಾಳೆ ಬನ್ನಿ' ಎಂದು ವೈದ್ಯಕೀಯ ಸಿಬ್ಬಂದಿ ಹೇಳುವುದು ಸಾಮಾನ್ಯವಾಗಿತ್ತು.

ನಗರದ ಸಿ.ವಿ. ರಾಮನ್ ಆಸ್ಪತ್ರೆಯಲ್ಲಿ ಹೆಚ್ಚು ಜನ ಲಸಿಕೆ ಹಾಕಿಸಿಕೊಂಡಿದ್ದರು. 45 ವರ್ಷ ಮೇಲ್ಪಟ್ಟ ನೋಂದಾಯಿತ ನಾಗರಿಕರಿಗೆ ಕೋವ್ಯಾಕ್ಸಿನ್ ಎರಡನೇ ಡೋಸ್ ಮತ್ತು ಕೋವಿಶೀಲ್ಡ್‌ನ ಎರಡೂ ಡೋಸ್ ನೀಡಲಾಯಿತು. ಆದರೆ, ಇಲ್ಲಿಯೂ ಲಸಿಕೆ ಬೇಗ ಖಾಲಿಯಾಯಿತು.

‘ಐವತ್ತು–ಅರವತ್ತು ಜನರಿಗೆ ಕೊಟ್ಟ ಕೂಡಲೇ ಲಸಿಕೆ ಖಾಲಿಯಾಯಿತು, ನಾಳೆ ಬನ್ನಿ ಎನ್ನುತ್ತಾರೆ. ಆದರೆ, ಖಾಸಗಿ ಆಸ್ಪತ್ರೆಗಳಲ್ಲಿ ದುಡ್ಡು ನೀಡಿದರೆ ಲಸಿಕೆ ಸಿಗುತ್ತಿದೆ. ಹಣ ಇದ್ದವರು ಮಾತ್ರ ಲಸಿಕೆ ಹಾಕಿಸಿಕೊಳ್ಳಬೇಕಾ’ ಎಂದು ಕೋವಿಡ್ ಮುಂಚೂಣಿ ಕಾರ್ಯಕರ್ತರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ನಗರದ ಕೆಲವು ಸರ್ಕಾರಿ ಆಸ್ಪತ್ರೆಗಳ ಪೈಕಿ ಕೆಲವು ಆಸ್ಪತ್ರೆಗಳಿಗೆ ಹೆಚ್ಚು ಮತ್ತು ಕೆಲವು ಆಸ್ಪತ್ರೆಗಳಿಗೆ ಕಡಿಮೆ ಡೋಸ್‌ಗಳನ್ನು ಪೂರೈಸಲಾಗುತ್ತಿದೆ. ಇದಕ್ಕೆ ಕಾರಣ ಗೊತ್ತಿಲ್ಲ. ಆದರೆ, ಜನ ಮಾತ್ರ ವೈದ್ಯಕೀಯ ಸಿಬ್ಬಂದಿ ಮೇಲೆ ಅಸಮಾಧಾನ ಹೊರ ಹಾಕುತ್ತಾರೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಿಬ್ಬಂದಿ ಅಳಲು ತೋಡಿಕೊಂಡರು.

ಸೋಮವಾರದಿಂದ ಸಮಸ್ಯೆಯಿಲ್ಲ: ನಗರದ ಹಲವು ಸರ್ಕಾರಿ ಆಸ್ಪತ್ರೆಗಳಿಗೆ ಗುರುವಾರ ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಯ ಹೆಚ್ಚು ಡೋಸ್‌ಗಳನ್ನು ವಿತರಿಸಲಾಗಿದೆ. ಶನಿವಾರದಿಂದ ಸಾರ್ವಜನಿಕರಿಗೆ ನಿಯಮಿತವಾಗಿ ಲಸಿಕೆ ಸಿಗುವ ಸಾಧ್ಯತೆ ಇದೆ.

‘ನಮ್ಮ ಆಸ್ಪತ್ರೆಯೂ ಸೇರಿದಂತೆ ಸುತ್ತ–ಮುತ್ತಲಿನ ಸರ್ಕಾರಿ ಆಸ್ಪತ್ರೆಗಳಿಗೆ ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಎರಡೂ ಲಸಿಕೆಗಳ ಡೋಸ್‌ಗಳನ್ನು ವಿತರಿಸಲಾಗಿದೆ. ಸೋಮವಾರದಿಂದ ಯಾವುದೇ ಸಮಸ್ಯೆ ಇರುವುದಿಲ್ಲ’ ಎಂದು ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅನ್ವರ್ ಅಹ್ಮದ್ ತಿಳಿಸಿದರು.



ಕೋವಿಡ್ ಲಸಿಕೆ ಪಡೆಯಲು ಮಲ್ಲೇಶ್ವರದ ಸರ್ಕಾರಿ ಕಾಲೇಜಿನ ಆವರಣದಲ್ಲಿ ಗುರುವಾರ ಸರದಿಯಲ್ಲಿ ನಿಂತಿದ್ದ ಸಾರ್ವಜನಿಕರಿಗೆ ಸ್ಥಳೀಯ ನಿವಾಸಿಗಳ ಸಂಘದ ಕಾರ್ಯಕರ್ತರು ಬಿಸ್ಕತ್ತು ಮತ್ತು ನೀರು ವಿತರಿಸಿದರು ಪ್ರಜಾವಾಣಿ ಚಿತ್ರ

ಮಕ್ಕಳ ತಜ್ಞರ ನೇಮಕಕ್ಕೆ ಕ್ರಮ: ಗೌರವ್ ಗುಪ್ತಾ

ಬೆಂಗಳೂರು: ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡಾಗ ಮಕ್ಕಳು ಕೂಡಾ ಸೋಂಕಿಗೆ ಒಳಗಾಗುವ ಅಪಾಯವಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಇದರ ಬೆನ್ನಲ್ಲೇ, ಮೂರನೇ ಅಲೆ ಮಕ್ಕಳನ್ನು ಬಾಧಿಸದಂತೆ ತಡೆಯಲು ಬಿಬಿಎಂಪಿ ಸಿದ್ಧತೆ ಆರಂಭಿಸಿದೆ.

‘ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳಿಗೆ ಅಪಾಯ ಹೆಚ್ಚು ಎಂಬ ವರದಿ ಇರುವುದರಿಂದ ಇದನ್ನು ನಿಯಂತ್ರಿಸಲು ಈಗಲೇ ಸಿದ್ಧತೆ ಆರಂಭಿಸಿದ್ದೇವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಮಕ್ಕಳ ತಜ್ಞರ ನೇಮಕಕ್ಕೆ ಕ್ರಮ ಕೈಗೊಂಡಿದ್ದೇವೆ. ಮಕ್ಕಳ ಆಸ್ಪತ್ರೆಗಳಲ್ಲಿ ಹಾಸಿಗೆ ಸಾಮರ್ಥ್ಯ ಹೆಚ್ಚಿಸಲಿದ್ದೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕಗಳ (ಐಸಿಯು) ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಳ ಮಾಡುವುದಕ್ಕೂ ಕ್ರಮಕೈಗೊಂಡಿದ್ದೇವೆ. ಸಾಮಾನ್ಯ ಹಾಸಿಗೆಗಳನ್ನು ಐಸಿಯು ಹಾಸಿಗೆಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲೂ ಸಿದ್ಧತೆಗಳು ನಡೆದಿವೆ. ಆಮ್ಲಜನಕದ ಕೊರತೆ ಕಾಡಬಾರದು ಎಂಬ ಉದ್ದೇಶದಿಂದ ಪ್ರತಿ ಆಸ್ಪತ್ರೆಯಲ್ಲೂ ಆಮ್ಲಜನಕ ಘಟಕ ಸ್ಥಾಪಿಸುವ ಚಿಂತನೆ ಇದೆ’ ಎಂದು ವಿವರಿಸಿದರು.

ಖಾಸಗಿ ಆಸ್ಪತ್ರೆ ಒತ್ತಡಕ್ಕೆ ಮಣಿದ ಸರ್ಕಾರ

ಸೇವಾ ಶುಲ್ಕ ಹೆಚ್ಚಳ: ಲಸಿಕೆ ಇನ್ನಷ್ಟು ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಸೇವಾ ಶುಲ್ಕ ಹೆಚ್ಚಳಕ್ಕೆ ಸಂಬಂಧಿಸಿದಂತೆ ಖಾಸಗಿ ಆಸ್ಪತ್ರೆಗಳ ಮನವಿಗೆ ಮಣಿದ ಸರ್ಕಾರ, ಪ್ರತಿ ಡೋಸ್ ಸೇವಾ ಶುಲ್ಕವನ್ನು ₹ 200ಗೆ ಏರಿಕೆ ಮಾಡಿದೆ.

ಸರ್ಕಾರವು ಖಾಸಗಿ ಆಸ್ಪತ್ರೆಗಳಿಗೆ ಪೂರೈಸುವ ಲಸಿಕೆಗೆ ₹ 100 ಸೇವಾ ಶುಲ್ಕ ನಿಗದಿ ಮಾಡಿತ್ತು. ಖಾಸಗಿ ಆಸ್ಪತ್ರೆಗಳಲ್ಲಿ ವಿತರಿಸುವ ‘ಕೋವಿಶೀಲ್ಡ್’ ಮತ್ತು ‘ಕೋವ್ಯಾಕ್ಸಿನ್’ ಲಸಿಕೆಗೆ ₹ 250 ಹಾಗೂ ‘ಸ್ಪುಟ್ನಿಕ್ ವಿ’ ಲಸಿಕೆಗೆ ₹ 300 ಸೇವಾ ಶುಲ್ಕ ನಿಗದಿಮಾಡಬೇಕು ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಸರ್ಕಾರಕ್ಕೆ ಆಗ್ರಹಿಸಿತ್ತು.

ಈ ಸಂಬಂಧ ಅಸೋಸಿಯೇಷನ್ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ಅವರು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಜಾವೇದ್ ಅಖ್ತರ್ ಅವರಿಗೆ ಹಾಗೂ ಕೋವಿಡ್ ಕಾರ್ಯಪಡೆಗೆ ಪತ್ರ ಬರೆದಿದ್ದರು.

‘ಖಾಸಗಿ ಆಸ್ಪತ್ರೆಗಳು ಪ್ರತಿ ಡೋಸ್ ಲಸಿಕೆಗೆ ₹ 100 ಸೇವಾ ಶುಲ್ಕ ಪಡೆಯಬಹುದು ಎಂದು ಸರ್ಕಾರ ಸುತ್ತೋಲೆ ಹೊರಡಿಸಿದೆ. ಆದರೆ, ಇಷ್ಟು ಕಡಿಮೆ ಸೇವಾ ಶುಲ್ಕದಲ್ಲಿ ಲಸಿಕೆ ಒದಗಿಸಿದಲ್ಲಿ ಆಸ್ಪತ್ರೆಗಳ ಮೇಲೆ ಮತ್ತಷ್ಟು ಹೊರೆ ಬೀಳಲಿದೆ. ಹಾಗಾಗಿ, ಈ ದರ ಪರಿಷ್ಕರಿಸಬೇಕು. ಕೋವಿಡ್ ಲಸಿಕೆಯ ದಾಸ್ತಾನು, ರಕ್ಷಣೆ ಮುಂತಾದ ಪ್ರಕ್ರಿಯೆಗೆ ಹೆಚ್ಚಿನ ವೆಚ್ಚ ತಗುಲಲಿದೆ. ಇದರೊಂದಿಗೆ ವೈಯಕ್ತಿಕ ಸುರಕ್ಷಾ ಸಾಧನಗಳ ಬಳಕೆ, ತ್ಯಾಜ್ಯ ನಿರ್ವಹಣೆ, ಲಸಿಕೆ ಸಾಗಣೆ ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಕ್ರಮಗಳಿಗೆ ಹಣ ಖರ್ಚಾಗುತ್ತದೆ. ಹಾಗಾಗಿ, ಸೇವಾ ಶುಲ್ಕ ಹೆಚ್ಚಿಸಬೇಕು’ ಎಂದು ಆಗ್ರಹಿಸಿದ್ದರು.

ಖಾಸಗಿ ಆಸ್ಪತ್ರೆಗಳ ಒಕ್ಕೂಟವು ಸೇವಾ ಶುಲ್ಕವನ್ನು ₹ 300ಗೆ ಏರಿಕೆ ಮಾಡುವಂತೆ ಮನವಿ ಮಾಡಿದೆ. ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಪ್ರತಿ ಡೋಸ್‌ಗೆ ₹ 200 ನಿಗದಿ ಮಾಡಲಾಗಿದೆ. ಇದಕ್ಕಿಂತ ಹೆಚ್ಚಿನ ಸೇವಾ ಶುಲ್ಕ ಪಡೆದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮಕೈಗೊಳ್ಳಲಾಗುವುದು ಎಂದು ಗುರುವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

11,43,878 ▲ ಒಟ್ಟು ಪ್ರಕರಣಗಳು (11,37,929 ನಿನ್ನೆಯ ವಿವರ)

2,06,390 ▼ ಸಕ್ರಿಯ ಪ್ರಕರಣಗಳು

9,25,066 ▲ ಗುಣಮುಖರಾದವರು

12,421 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	5,949	▼
ಗುಣಮುಖ	6,643	▼
ಸಾವು	273	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಆಕ್ಸಿಜನ್ ಆನ್ ವೀಲ್ಸ್’ ಸೌಲಭ್ಯಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೋವಿಡ್ ಸೋಂಕಿತರಿಗೆ ಬಸ್‌ನಲ್ಲಿ ಆಮ್ಲಜನಕ ಸೌಲಭ್ಯ ಕಲ್ಪಿಸುವ ‘ಆಕ್ಸಿಜನ್ ಆನ್ ವೀಲ್ಸ್’ ಸೌಲಭ್ಯಕ್ಕೆ ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ ಅವರು ಬ್ಯಾಟರಾಯನಪುರ ಕ್ಷೇತ್ರದ ದೊಡ್ಡಬೊಮ್ಮಸಂದ್ರದಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಕೊರೊನಾ ಎರಡನೇ ಅಲೆಯಿಂದ ಜನಸಾಮಾನ್ಯರು ಆಮ್ಲಜನಕ ಕೊರತೆಯಿಂದ ಜೀವ ಕಳೆದುಕೊಳ್ಳುತ್ತಿದ್ದಾರೆ. ಆಮ್ಲಜನಕದ ತೊಂದರೆಯಿರುವವರಿಗೆ ಉಪಯೋಗವಾಗಲಿ ಎಂಬ ಉದ್ದೇಶದಿಂದ ಈ ಸೌಲಭ್ಯ ಕಲ್ಪಿಸಲಾಗಿದೆ. ಈ ಆಮ್ಲಜನಕ ಯುಕ್ತ ಬಸ್, 15 ದಿನಗಳಕಾಲ ಕ್ಷೇತ್ರದ ಪ್ರತಿ ವಾರ್ಡ್, ಕೊಳಚೆಪ್ರದೇಶಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಳಿ ಸಂಚರಿಸಲಿದೆ. ಅಗತ್ಯವಿರುವವರು ಇದರ ಸೌಲಭ್ಯ ಪಡೆದುಕೊಳ್ಳಬಹುದು’ ಎಂದು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣ, ಡಾ.ಜಗನ್ನಾಥ್, ಬಿಜೆಪಿ ಮುಖಂಡರಾದ ಸಿ. ಮುನಿಕೃಷ್ಣ, ಅಶ್ವತ್ಥನಾರಾಯಣ ಗೌಡ, ಚೇತನ್, ಆರ್.ಎಸ್. ದಿಲೀಪ್, ಮತ್ತು ಅಂಬರೀಷ್ ಕಾರ್ಯಕ್ರಮದಲ್ಲಿ ಇದ್ದರು.



ದೊಡ್ಡಬೊಮ್ಮಸಂದ್ರದಲ್ಲಿ ‘ಆಕ್ಸಿಜನ್ ಆನ್ ವೀಲ್ಸ್’ ಸೌಲಭ್ಯಕ್ಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ ಚಾಲನೆ ನೀಡಿದರು.

ಹಗಲು ಸೇವಾ ಕೇಂದ್ರ ಆರಂಭ

ಬೆಂಗಳೂರು: ಮಲ್ಲೇಶ್ವರದ ಪ್ರಾಥಮಿಕ ಆರೈಕೆ ಕೇಂದ್ರ, ಬೆಳವಲ್ ಫೌಂಡೇಷನ್, ಇತರ ಸಂಘ– ಸಂಸ್ಥೆಗಳ ಸಹಯೋಗದಲ್ಲಿ ಕಾಡು ಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿನ ಸೇವಾ ಸಮಿತಿ ಸಭಾಂಗಣದಲ್ಲಿ ಹಗಲು ಸೇವಾ ಕೇಂದ್ರ ಆರಂಭವಾಗಿದೆ.

40 ಹಾಸಿಗೆಗಳ ಈ ಕೇಂದ್ರದಲ್ಲಿ ಆಮ್ಲಜನಕ, ಔಷಧ, ಆತ್ಮಸ್ಥೈರ್ಯ ಮತ್ತು ಜಾಗೃತಿ ಬಗ್ಗೆ ಮಾಹಿತಿ ನೀಡುವ ಆಪ್ತ ಸಮಾಲೋಚಕರ ತಂಡ ಈ ಸೇವಾ ಕೇಂದ್ರದಲ್ಲಿ ಇದೆ. ಕೋವಿಡ್ 3ನೇ ಅಲೆ, ಕಪ್ಪು ಶಿಲೀಂದ್ರ ಹಾಗೂ ಇತರ ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗುತ್ತದೆ ಎಂದು ಸಮಿತಿ ತಿಳಿಸಿದೆ.

ಹೆಚ್ಚಿನ ಮಾಹಿತಿ, ಸಹಾಯಕ್ಕಾಗಿ ಬೆಳಿಗ್ಗೆ 9ರಿಂದ ರಾತ್ರಿ 9ರ ತನಕ ದೂರವಾಣಿ ಸಂಖ್ಯೆ 96867-00385ಗೆ ಕರೆ ಮಾಡಬಹುದು ಎಂದು ವಿವರಿಸಿದೆ.

ಆರೈಕೆ ಕೇಂದ್ರಕ್ಕೆ ದಾಖಲಾಗುವಂತೆ ಚರ್ಚ್ ಮುಖ್ಯಸ್ಥರಿಂದ ಮನವೊಲಿಕೆ

ತಟಗುಪ್ಪೆ: ಕೋವಿಡ್ ಸೋಂಕಿತರ ರಂಪಾಟ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಾಗಲು ನಿರಾಕರಿಸಿದ ಸೋಂಕಿತರು ಮನೆಯಲ್ಲೇ ಚಿಕಿತ್ಸೆ ಪಡೆಯುವುದಾಗಿ ರಂಪಾಟ ನಡೆಸಿದ ಘಟನೆ ತಟಗುಪ್ಪೆ ಗ್ರಾಮದಲ್ಲಿ ನಡೆದಿದೆ.

ತರಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಟಗುಪ್ಪೆ ಗ್ರಾಮದಲ್ಲಿ ಮಂಗಳವಾರ ಗಂಟಲು ದ್ರವ ಪರೀಕ್ಷೆ ನಡೆಸಲಾಗಿತ್ತು. 49 ಮಂದಿ ಸೋಂಕಿಗೆ ತುತ್ತಾಗಿರುವುದು ಕಂಡು ಬಂದಿತ್ತು. ಕೊರೊನಾ ಸೋಂಕಿತರನ್ನು ಜ್ಞಾನಭಾರತಿ ಹಾಗೂ ಜನಸೇವಾ ವಿದ್ಯಾಸಂಸ್ಥೆಯಲ್ಲಿರುವ ಕೋವಿಡ್ ಆರೈಕೆ ಕೇಂದ್ರಕ್ಕೆ ಸ್ಥಳಾಂತರಿಸಲು ಆರೋಗ್ಯ ಸಿಬ್ಬಂದಿ ಗ್ರಾಮಕ್ಕೆ ತೆರಳಿದ್ದರು. ಆದರೆ, ಈ ವೇಳೆ ತಕರಾರು ತೆಗೆದ ಕೆಲ ಸೋಂಕಿತರು ಹಾಗೂ ಗ್ರಾಮಸ್ಥರು ಸ್ಥಳದಲ್ಲಿದ್ದ ಆಶಾ ಕಾರ್ಯಕರ್ತರು ಹಾಗೂ ಆರೋಗ್ಯ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸಿದ್ದಾರೆ.

‘ಆರೈಕೆ ಕೇಂದ್ರದಲ್ಲಿ ಯಾವುದೇ ಮೂಲಸೌಕರ್ಯಗಳು ಇರುವುದಿಲ್ಲ. ಅಲ್ಲಿ ನಮ್ಮ ಪ್ರಾಣಕ್ಕೆ ಯಾವುದೇ ರಕ್ಷಣೆ ಇಲ್ಲ’ ಎಂದು ಆರೋಪಿಸಿ ಆಂಬುಲೆನ್ಸ್ ಹತ್ತಲು ನಿರಾಕರಿಸಿದ್ದಾರೆ.

ಇದರಿಂದ ಕೆಲ ಕಾಲ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಗಲಿಬಿಲಿಗೊಂಡ ಆರೋಗ್ಯ ಸಿಬ್ಬಂದಿ ಹಾಗೂ ಗ್ರಾಮಪಂಚಾಯಿತಿ ಅಧಿಕಾರಿಗಳು ಪೊಲೀಸರು ಹಾಗೂ ಹಿರಿಯ ಅಧಿಕಾರಿಗಳಿಗೆ ಕರೆ ಮಾಡಿ ತಿಳಿಸಿದ್ದಾರೆ.

ಸ್ಥಳಕ್ಕೆ ಬಂದ ಸ್ಥಳೀಯ ಪೊಲೀಸ್ ಸಿಬ್ಬಂದಿ ಕೂಡ ಮನವೊಲಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಆದರೂ ಒಪ್ಪದ ಗ್ರಾಮಸ್ಥರು ರಂಪಾಟ ನಡೆಸಿದ್ದಾರೆ. ಕೊನೆಗೆ ಸ್ಥಳೀಯ ಚರ್ಚ್ ಮುಖ್ಯಸ್ಥರು ಗ್ರಾಮಸ್ಥರ ಮನವೊಲಿಸಿ ಕೋವಿಡ್ ಆರೈಕೆ ಕೇಂದ್ರಕ್ಕೆ ತೆರಳುವಂತೆ ಸೂಚಿಸಿದರು. ಬಳಿಕ ಸೋಂಕಿತರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ನಾಗವೇಣಿ ಮಾತನಾಡಿ, 'ಮಂಗಳವಾರ ತಟಗುಪ್ಪೆ ಗ್ರಾಮದಲ್ಲಿ ನಡೆಸಿದ ತಪಾಸಣೆಯಲ್ಲಿ 29 ಮಂದಿ ಹಾಗೂ ಬುಧವಾರ ನಡೆಸಿದ ಪರೀಕ್ಷೆಯಲ್ಲಿ 20 ಮಂದಿಗೆ ಸೋಂಕು ತಗಲಿರುವುದು ದೃಢ ಪಟ್ಟಿತ್ತು. ಕೆಲ ಮನೆಯಲ್ಲಿ 3ರಿಂದ 4 ಮಂದಿಗೆ ಹಾಗೂ ಒಂದೇ ಕುಟುಂಬದಲ್ಲಿ ಒಂಬತ್ತು ಮಂದಿಗೆ ಸೋಂಕು ದೃಢಪಟ್ಟಿತ್ತು. ಮನೆಯಲ್ಲೇ ಚಿಕಿತ್ಸೆ ಪಡೆಯಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಅವರೆಲ್ಲರನ್ನು ಆರೈಕೆ ಕೇಂದ್ರಕ್ಕೆ ಸ್ಥಳಾಂತರಿಸುವುದು ಅನಿವಾರ್ಯವಾಗಿತ್ತು. ಹೀಗಾಗಿ ಸೋಂಕಿತರನ್ನು ಆರೈಕೆ ಕೇಂದ್ರಕ್ಕೆ ದಾಖಲಿಸಲು ಆರೋಗ್ಯ ಸಿಬ್ಬಂದಿ ಸಿದ್ಧತೆ ನಡೆಸಿದ್ದರು. ಆದರೆ. ಕೆಲ ಸ್ಥಳೀಯರು ಹಾಗೂ ಕೆಲ ಸೋಂಕಿತರ ಅಜ್ಞಾನದಿಂದ ಕೆಲ ಕಾಲ ಗೊಂದಲ ಉಂಟಾಯಿತು' ಎಂದರು.

ಗ್ರಾಮದಲ್ಲಿ ಹಲವಾರು ಮಂದಿಗೆ ಸೋಂಕು ದೃಢಪಟ್ಟಿದೆ. ಸೋಂಕಿಗೆ ಒಳಗಾದವರ ಮನವೊಲಿಸಿ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಲಾಗುವುದು ಎಂದು ತರಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭಾರತಿ ತಿಳಿಸಿದರು.



ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಾಗುವಂತೆ ಸೋಂಕಿತರ ಮನವೊಲಿಸುತ್ತಿರುವ ಆರೋಗ್ಯ ಸಿಬ್ಬಂದಿ

ದೇಶದಲ್ಲಿಯೇ ಮೊದಲ ಯತ್ನ • ಪ್ರಾರಂಭಿಕ ಹಂತದಲ್ಲಿ 45 ವಾರ್ಡ್‌ಗಳಲ್ಲಿ ಪ್ರಯೋಗ

ಕೋವಿಡ್: ಕೊಳಚೆ ನೀರು ಪರೀಕ್ಷೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ದಿನಗಳಲ್ಲಿ ಯಾವ ಪ್ರದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಲಿದೆ ಎಂಬುದನ್ನು ತಿಳಿಯಲು ಆ ಪ್ರದೇಶದ ಕೊಳಚೆ ನೀರನ್ನು ಪರೀಕ್ಷಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಪ್ರಾರಂಭಿಕ ಹಂತದಲ್ಲಿ ಬಿಬಿಎಂಪಿಯ 45 ವಾರ್ಡ್‌ಗಳಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸರ್ಕಾರ ಉದ್ದೇಶಿಸಿದೆ.

’ನಗರದ ಶೇ 75 ಜನಸಂಖ್ಯೆಯನ್ನು ಈ ಯೋಜನೆ ಒಳಗೊಳ್ಳಲಿದೆ. 45 ವಾರ್ಡ್‌ಗಳ ಸುಮಾರು 90 ಸ್ಥಳಗಳಲ್ಲಿನ ಕೊಳಚೆ ನೀರನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ ಮಾದರಿ ಕಾರ್ಯ ದೇಶದಲ್ಲಿಯೇ ಮೊದಲು‘ ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ತಿಳಿಸಿದರು.

ಒಂದು ವರ್ಷದ ಯೋಜನೆ



‘ವಿಶ್ವ ಆರೋಗ್ಯ ಸಂಸ್ಥೆ, ರಾಷ್ಟ್ರೀಯ ಸೂಕ್ಷ್ಮ ವೈರಾಣು ಸಂಸ್ಥೆ ಹಾಗೂ ಇತರೆ ಪ್ರಮುಖ ಸಂಸ್ಥೆಗಳ ತಜ್ಞರು ಈ ಕಾರ್ಯಕ್ಕೆ ಕೈಜೋಡಿಸಲಿದ್ದಾರೆ’ ಎಂದು ಪಿಸಿಎಂಎಚ್ ರಿಸ್ಟೋರ್ ಹೆಲ್ತ್ ಅಂಡ್ ವೆಲ್‌ನೆಸ್ ಕಂಪನಿಯ ಸಹಸ್ಥಾಪಕ ಶಾನ್ ವೆಂಕಟ್ ಹೇಳಿದರು.

‘ಮುಂದಿನ ಒಂದು ವರ್ಷದವರೆಗೆ ಈ 45 ವಾರ್ಡ್‌ಗಳ ಕೊಳಚೆ ನೀರಿನಿಂದ ಪ್ರತಿದಿನ ಮಾದರಿ ಸಂಗ್ರಹಿಸಲಾಗುತ್ತದೆ. ವಂಶವಾಹಿ ಅನುಕ್ರಮದ ರಚನೆಯನ್ನೂ (ಜಿನೋಮ್ ಸೀಕ್ವೆನ್ಸಿಂಗ್) ಪತ್ತೆ ಹಚ್ಚಲಾಗುವುದು. ಇದರಿಂದ ಸೋಂಕಿತ ಪ್ರದೇಶವನ್ನು ಪತ್ತೆ ಹಚ್ಚುವುದಷ್ಟೇ ಅಲ್ಲದೆ, ರೂಪಾಂತರ ವೈರಾಣುವಿನ ಪ್ರಮುಖ ಲಕ್ಷಣಗಳನ್ನೂ ಕಂಡುಹಿಡಿಯಬಹುದಾಗಿದೆ’ ಎಂದು ಅವರು ತಿಳಿಸಿದರು.

‘ಪರೀಕ್ಷೆ ವೇಳೆ ಬೇರೆ ತಳಿಯ ಸೋಂಕು ಕಂಡು ಬಂದರೆ ಅದರ ತಡೆಗೆ ನಿರ್ದಿಷ್ಟ ನೀತಿ ನಿರೂಪಣೆ ಕೈಗೊಳ್ಳುವುದಕ್ಕೂ ಸರ್ಕಾರಗಳಿಗೆ ಸಾಧ್ಯವಾಗುತ್ತದೆ. ಪರೀಕ್ಷೆ ವೇಳೆ ಕಂಡು ಬಂದ ಅಂಶಗಳ ಬಗ್ಗೆ ನಾವು ಬಿಬಿಎಂಪಿ ಮುಖ್ಯ ಆಯುಕ್ತರೊಂದಿಗೆ ಚರ್ಚೆ ನಡೆಸಲಿದ್ದೇವೆ’ ಎಂದರು.

‘ಈ ನೀರಿನ ಪರೀಕ್ಷೆಯಿಂದ ಕೋವಿಡ್‌ನ ಪ್ರಭಾವ ಎಷ್ಟಿದೆ ಎಂಬುದನ್ನು ತಿಳಿಯಬಹುದು. ಅಲ್ಲದೆ, ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇರುವ ಪ್ರದೇಶವನ್ನು ಕೋವಿಡ್ ಕ್ಲಸ್ಟರ್ ಗಳನ್ನಾಗಿ ರೂಪಿಸಬಹುದು. ಇಡೀ ನಗರಕ್ಕೆ ಲಾಕ್‌ಡೌನ್ ಘೋಷಿಸುವ ಬದಲು ಸಣ್ಣ ಸಣ್ಣ ಕಂಟೈನ್‌ಮೆಂಟ್ ವಲಯಗಳನ್ನಾಗಿಯೂ ಮಾಡಬಹುದಾಗಿದೆ’ ಎಂದು ಅವರು ಮಾಹಿತಿ ನೀಡಿದರು.

‘ತ್ಯಾಜ್ಯ ನೀರು ಪರೀಕ್ಷೆಯನ್ನು ಅತಿ ಕಡಿಮೆ ವೆಚ್ಚದಲ್ಲಿ ಕೈಗೊಳ್ಳಬಹುದಾಗಿದೆ. ಕೋವಿಡ್ ಪ್ರಭಾವದ ಮುನ್ನೆಚ್ಚರಿಕೆಯು ಪ್ರಾರಂಭದಲ್ಲಿಯೇ ಸಿಕ್ಕರೆ ಅದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳುವುದು ಸುಲಭವಾಗುತ್ತದೆ. ಇದಕ್ಕೆ ನೀತಿಗಳನ್ನು ರೂಪಿಸಲೂ ಅನುಕೂಲವಾಗುತ್ತದೆ‘ ಎಂದರು.

ಪಿಸಿಎಂಎಚ್ ರಿಸ್ಟೋರ್ ಹೆಲ್ತ್ ಅಂಡ್ ವೆಲ್‌ನೆಸ್, ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಯುಎಸ್‌ಎಐಡಿ) ಹಾಗೂ ಸ್ಕಾಲ್ ಫೌಂಡೇಷನ್ ಸಹಯೋಗದಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಮುಖ್ಯಾಂಶಗಳು

- ‘ರೂಪಾಂತರ ವೈರಾಣುವಿನ ಪ್ರಮುಖ ಲಕ್ಷಣಗಳನ್ನೂ ಕಂಡುಹಿಡಿಯಬಹುದು’
- 90 ಸ್ಥಳಗಳ ಕೊಳಚೆ ನೀರು ಪರೀಕ್ಷೆ

ಸಂಕಷ್ಟದಲ್ಲಿ ಮಹಿಳಾ ಉದ್ಯಮಿಗಳು

ಬೆಂಗಳೂರು: ಲಾಕ್‌ಡೌನ್‌ನಿಂದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಿಗೆ ದೊಡ್ಡ ಹೊಡೆತ ಬಿದ್ದಿದೆ. ಆದರೆ, ಸರ್ಕಾರವು ಬೃಹತ್ ಕೈಗಾರಿಕಾ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳತ್ತ ಮಾತ್ರ ಗಮನ ಹರಿಸುತ್ತಿದೆ. ಜತೆಗೆ, ಮಹಿಳಾ ಉದ್ಯಮಿಗಳ ನೆರವಿಗೂ ಸರ್ಕಾರ ಧಾವಿಸಬೇಕು ಎಂದು ಮಹಿಳಾ ಉದ್ಯಮಿಗಳ ಸಂಘ ಒತ್ತಾಯಿಸಿದೆ.

’ರಾಜ್ಯದಲ್ಲಿ ಮಹಿಳೆಯರೇ ನಡೆಸುತ್ತಿರುವ ಉದ್ಯಮಗಳ ಸಂಖ್ಯೆ 9.36 ಲಕ್ಷದಷ್ಟಿವೆ. ಆದರೆ, ಸರ್ಕಾರ ನಮ್ಮ ಕಡೆಗೆ ಗಮನ ಹರಿಸುತ್ತಿಲ್ಲ‘ ಎಂದು ಎಂದು ಭಾರತೀಯ ಮಹಿಳಾ ಉದ್ಯಮಿಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷೆ ರೂಪಾ ರಾಣಿ ಹೇಳಿದರು.

’ಕಳೆದ ವರ್ಷ ಉದ್ಯಮಗಳು ಪಡೆದ ಒಟ್ಟು ಸಾಲದ ಮೊತ್ತದಲ್ಲಿ ಶೇ 10ರಷ್ಟು ಕೋವಿಡ್ ಸಾಲದಂತೆ ನೀಡಲಾಗಿತ್ತು. ಅಂದರೆ, ಬ್ಯಾಂಕುಗಳಿಂದ ₹35 ಲಕ್ಷ ಸಾಲ ಪಡೆದಿದ್ದರೆ, ಕೋವಿಡ್ ಸಾಲವಾಗಿ ₹3.5 ಲಕ್ಷ ನೀಡಲಾಗುತ್ತಿತ್ತು. ಈ ಬಾರಿ ಆ ಸೌಲಭ್ಯವನ್ನೂ ಒದಗಿಸಿಲ್ಲ‘ ಎಂದು ಅವರು ಹೇಳಿದರು.



ರೂಪಾ ರಾಣಿ

’ಉದ್ಯಮಗಳು ಪಡೆಯುವ ವರಮಾನದ ಪ್ರಮಾಣ ಆಧರಿಸಿ ಬ್ಯಾಂಕುಗಳು ಸಾಲ ನೀಡುತ್ತವೆ. 10ರಿಂದ 12 ಜನರನ್ನು ಇಟ್ಟುಕೊಂಡು ಉದ್ಯಮ ನಡೆಸುವ ನಾವು, ಕಂಪನಿಯ ಖಾತೆಯ ಮೂಲಕ ಮಕ್ಕಳ ಶಿಕ್ಷಣಕ್ಕೂ ಸಾಲ ತೆಗೆದುಕೊಳ್ಳುತ್ತಿದ್ದೆವು. ಜಂಟಿ ಖಾತೆಯ ರೂಪದಲ್ಲಿ ಈ ಸೌಲಭ್ಯ ಪಡೆದುಕೊಂಡಿದ್ದೆವು. ಲಾಕ್‌ಡೌನ್‌ನಿಂದ ಯಾವುದೇ ವಹಿವಾಟು ನಡೆಯುತ್ತಿಲ್ಲ. ಸಾಲ ಮರುಪಾವತಿ ಕಷ್ಟವಾಗುತ್ತಿದೆ. ಈಗ ಶೈಕ್ಷಣಿಕ ಸಾಲವನ್ನೂ ಬ್ಯಾಂಕುಗಳು ಒದಗಿಸುತ್ತಿಲ್ಲ‘ ಎಂದು ಅವರು ಅಳಲು ತೋಡಿಕೊಂಡರು.

‘ಸರ್ಕಾರವು ಮಹಿಳಾ ಉದ್ಯಮಿಗಳಿಗೆ ಬಡ್ಡಿರಹಿತ ಸಾಲ ನೀಡಬೇಕು. ಮಹಿಳೆಯರು ನಡೆಸುವ ಉದ್ಯಮಗಳು ಅಸಂಘಟಿತ ವಲಯದಲ್ಲಿವೆ. ಇಲ್ಲಿ ದುಡಿಯುವ ಕಾರ್ಮಿಕರಿಗೆ ಸರ್ಕಾರವೇ ವೇತನವನ್ನು (ಲಾಕ್‌ಡೌನ್ ಅವಧಿ) ನೀಡಬೇಕು’ ಎಂದು ಅವರು ಒತ್ತಾಯಿಸಿದರು.

‘ವಾರಸುದಾರರಿಲ್ಲದ ಹೆಣಗಳ ಅಂತ್ಯಕ್ರಿಯೆಗೆ ನೀತಿ ರೂಪಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಹಲವಾರು ರಾಜ್ಯಗಳ ನದಿಗಳಲ್ಲಿ ಹೆಣಗಳು ತೇಲಿ ಬರುತ್ತಿರುವ ವರದಿಗಳಿವೆ. ಇಂಥ ವಾರಸುದಾರರು ಇಲ್ಲದ ಹೆಣಗಳ ಅಂತ್ಯಸಂಸ್ಕಾರವನ್ನು ಅನಿಲ ಆಧಾರಿತ ಚಿತಾಗಾರಗಳಲ್ಲಿ ನೆರವೇರಿಸುವ ಸಂಬಂಧ ನೀತಿಯೊಂದನ್ನು ರೂಪಿಸುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸಲಹೆ ನೀಡಿದೆ.

ಈ ಸಂಬಂಧ ಕೇಂದ್ರ ಸರ್ಕಾರ, ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ), ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಜ್ಯ ಸರ್ಕಾರಗಳಿಗೆ ಎನ್‌ಜಿಟಿ ನೋಟಿಸ್ ನೀಡಿದೆ.

ಚಂಡೀಗಡ ಮೂಲದ ವಕೀಲ ಎಚ್.ಸಿ.ಅರೋರಾ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಎನ್‌ಜಿಟಿಯ ಅಧ್ಯಕ್ಷ ನ್ಯಾಯಮೂರ್ತಿ ಎ.ಕೆ.ಗೋಯೆಲ್ ನೇತೃತ್ವದ ಪ್ರಧಾನಪೀಠ, ಈ ಆದೇಶ ನೀಡಿತು.

ಮೈಸೂರು ರಸ್ತೆಯಲ್ಲಿ ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ನಡುವೆಯೇ ಮೈಸೂರು ರಸ್ತೆಯಲ್ಲಿ ಗುರುವಾರ ವಾಹನಗಳ ದಟ್ಟಣೆ ಉಂಟಾಯಿತು.

ಅಗತ್ಯ ವಸ್ತುಗಳ ಖರೀದಿಗಾಗಿ ಅವಕಾಶ ಕಲ್ಪಿಸಲಾಗಿದ್ದು, ಅದಕ್ಕಾಗಿ ವಾಹನಗಳನ್ನು ಬಳಸಲು ಅನುಮತಿಯನ್ನೂ ನೀಡಲಾಗಿದೆ. ಜೊತೆಗೆ, ತುರ್ತು ಸೇವೆಗಳ ವಾಹನ ಹಾಗೂ ಗೂಡ್ಸ್ ವಾಹನಗಳ ಸಂಚಾರಕ್ಕೆ ಅವಕಾಶವಿದೆ. ಅನಗತ್ಯವಾಗಿ ಸಂಚರಿಸುವವರ ವಾಹನಗಳನ್ನು ಪೊಲೀಸರು ಜಪ್ತಿ ಮಾಡುತ್ತಿದ್ದಾರೆ.

ಕೆ.ಆರ್. ಮಾರುಕಟ್ಟೆ, ಕಾರ್ಪೊರೇಷನ್ ವೃತ್ತ, ಮೆಜೆಸ್ಟಿಕ್, ಚಾಮರಾಜನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚಿತ್ತು. ದಟ್ಟಣೆ ಉಂಟಾಗಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಬಹುತೇಕ ವಾಹನಗಳ ಮುಂಭಾಗದಲ್ಲಿ ತುರ್ತು ಸೇವೆ ಹಾಗೂ ಅಗತ್ಯ ವಸ್ತುಗಳ ಸಾಗಣೆ ಪತ್ರಗಳನ್ನು ಅಂಟಿಸಲಾಗಿತ್ತು. ದ್ವಿಚಕ್ರ ವಾಹನಗಳ ಸಂಖ್ಯೆಯೂ ಹೆಚ್ಚಿತ್ತು.

ಸ್ಯಾಟ್‌ಲೈಟ್ ಬಳಿ ಪೊಲೀಸರು ವಾಹನಗಳ ತಪಾಸಣೆ ನಡೆಸುತ್ತಿದ್ದರು. ವಾಹನಗಳ ಸಂಖ್ಯೆ ಹೆಚ್ಚಿದ್ದರಿಂದ ದೂರದಿಂದಲೇ ವಾಹನಗಳನ್ನು ನೋಡಿ ಮುಂದಕ್ಕೆ ಕಳುಹಿಸಿದರು. ಅಷ್ಟಾದರೂ ಬೆಳಿಗ್ಗೆ 9ರಿಂದ 11 ಗಂಟೆವರೆಗೂ ದಟ್ಟಣೆ ಕಂಡುಬಂತು. ಮೈಸೂರು ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಇದು ಸಹ ದಟ್ಟಣೆಗೆ ಕಾರಣವಾಯಿತು.



ಮೈಸೂರು ರಸ್ತೆಯಲ್ಲಿ ಗುರುವಾರ ವಾಹನಗಳ ದಟ್ಟಣೆ ಉಂಟಾಯಿತು – ಪ್ರಜಾವಾಣಿ ಚಿತ್ರ

1,083 ವಾಹನ ಜಪ್ತಿ: ನಗರದಲ್ಲಿ ಅನಗತ್ಯವಾಗಿ ಸಂಚರಿಸುತ್ತಿದ್ದವರ 1,083 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

‘ಗುರುವಾರ ಒಂದೇ ದಿನದಲ್ಲೇ 962 ದ್ವಿಚಕ್ರ ವಾಹನ, 55 ಮೂರು ಚಕ್ರ ವಾಹನ ಹಾಗೂ 666 ನಾಲ್ಕು ಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

₹4.22 ಲಕ್ಷ ದಂಡ ಸಂಗ್ರಹ: ಮಾಸ್ಕ್ ಧರಿಸದ ಹಾಗೂ ಅಂತರ ಕಾಯ್ದುಕೊಳ್ಳದವರ ವಿರುದ್ಧ ಗುರುವಾರ 1,747 ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ₹ 4.22 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ: ತೋಂಟದ ಶ್ರೀ

ಗದಗ: ‘ಕೊರೊನಾದಿಂದ ಪೋಷಕರನ್ನು ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಶ್ರೀಮಠವು ಉಚಿತ ಶಿಕ್ಷಣ ನೀಡುವ ಯೋಜನೆ ಹಾಕಿಕೊಂಡಿದೆ’ ಎಂದು ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ ಗುರುವಾರ ತಿಳಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ‘ಶ್ರೀಮಠದಲ್ಲಿ ಅನ್ನದಾಸೋಹ ಇರುತ್ತದೆ. ಅನಾಥ ಮಕ್ಕಳನ್ನು ಹಾಸ್ಟೆಲ್‌ನಲ್ಲಿ ಇರಿಸಿ ಎಲ್‌ಕೆಜಿಯಿಂದ ಎಂಜಿನಿಯರಿಂಗ್ ವರೆಗೆ ಉಚಿತ ಶಿಕ್ಷಣ ನೀಡುವ ಯೋಜನೆ ಇದಾಗಿದೆ. ಮಾಹಿತಿಗಾಗಿ ಮೊಬೈಲ್ ಸಂಖ್ಯೆ 91482 21600 ಸಂಪರ್ಕಿಸಬಹುದು ಎಂದರು.

ಸಂಕಷ್ಟದಲ್ಲಿ ಇರುವವರಿಗೆ ನೆರವಾಗಲು ಹಾವೇರಿಯ ಆಯುರ್ವೇದ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆ ಮಾಡಲಾಗಿದೆ. ಡಂಬಳ ಹಾಗೂ ಇಂಗಳದಲ್ಲಿ ಕೋವಿಡ್ ಕೇರ್ ಸೆಂಟರ್ ತೆರೆಯಲು ಅವಕಾಶ ನೀಡಲಾಗಿದೆ. 500 ಮಂದಿ ಕೋವಿಡ್ ರೋಗಿಗಳಿಗೆ ಪ್ರತಿನಿತ್ಯ ಮಠದಿಂದ ಊಟ ಒದಗಿಸಲು ಸಿದ್ಧತೆ ನಡೆದಿದೆ ಎಂದು ತಿಳಿಸಿದರು.

ಕಪ್ಪು ಶಿಲೀಂಧ್ರ: ಬಾಲಕನಿಗೆ ಸೋಂಕು


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 11 ವರ್ಷದ ಬಾಲಕ ಸೇರಿದಂತೆ 11 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದು ಗುರುವಾರ ದೃಢಪಟ್ಟಿದೆ.

ಕೋವಿಡ್‌ನಿಂದ ಚೇತರಿಸಿಕೊಂಡಿದ್ದ ಮೈಸೂರಿನ ಬಾಲಕನಿಗೆ ಶಿಲೀಂಧ್ರ ಸೋಂಕಿನ ಲಕ್ಷಣಗಳು ಗೋಚರಿಸಿದ್ದವು. ಗುರುವಾರ ಬೌರಿಂಗ್ ಆಸ್ಪತ್ರೆಗೆ ದಾಖಲಾದ ಬಾಲಕನಿಗೆ ಶಿಲೀಂಧ್ರ ಸೋಂಕು ತಗುಲಿರುವುದು ದೃಢಪಟ್ಟಿದೆ.

‘ಬಾಲಕ ಮಧುಮೇಹ ಸಮಸ್ಯೆಯನ್ನು ಕೂಡ ಎದುರಿಸುತ್ತಿದ್ದು, ಶಿಲೀಂಧ್ರ ಸೋಂಕು ಕಾಯಿಲೆ ಮೂರನೇ ಹಂತದಲ್ಲಿದೆ. ಗಂಭೀರವಾಗಿ ಅಸ್ವಸ್ಥನಾಗಿದ್ದು, ನೇತ್ರ ಸೇರಿದಂತೆ ವಿವಿಧ ವಿಭಾಗದ ತಜ್ಞರು ಪರಿಶೀಲನೆ ನಡೆಸುತ್ತಿದ್ದಾರೆ. ಮಿದುಳಿಗೆ ಸೋಂಕು ವ್ಯಾಪಿಸಿಕೊಂಡಿರುವ ಬಗ್ಗೆ ಕೂಡ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ’ ಎಂದು ವೈದ್ಯರು ತಿಳಿಸಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಾಲ್ಕು ಮಂದಿಗೆ ಹೊಸದಾಗಿ ಸೋಂಕು ತಗುಲಿರುವುದು ದೃಢಪಟ್ಟಿದೆ. ಸದ್ಯ ಅಲ್ಲಿ 64 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೌರಿಂಗ್ ಆಸ್ಪತ್ರೆಗೆ ಹೊಸದಾಗಿ 7 ಸೋಂಕಿತರು ದಾಖಲಾಗಿದ್ದು, 85 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ದೊರೆಸ್ವಾಮಿ ಚಿತಾಭಸ್ಮ ಮರದಡಿ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ): ಸ್ವಾತಂತ್ರ್ಯ ಸೇನಾನಿ ಎಚ್.ಎಸ್. ದೊರೆಸ್ವಾಮಿ ಅವರ ಚಿತಾಭಸ್ಮಕ್ಕೆ ಇಲ್ಲಿನ ರಾಮನಾಥಪುರದ ರಾಮೇಶ್ವರ ದೇವಾಲಯದ ಬಳಿಯ ವಹ್ನಿ ಪುಷ್ಕರಿಣಿಯಲ್ಲಿ ಕಾವೇರಿ ಜಲ ಪ್ರೋಕ್ಷಿಸಿ, ಆಬಳಿಕ ತೆಂಗಿನ ಮರದಡಿ ವಿಸರ್ಜಿಸಲಾಯಿತು.

‘ಹೋರಾಟಗಾರರ ಒತ್ತಾಯದ ಮೇರೆಗೆ ಈ ಕಾರ್ಯ ಮಾಡಿದ್ದೇನೆ. ಜಲ ಮೂಲಗಳಲ್ಲಿ ಚಿತಾಭಸ್ಮವನ್ನು ಬಿಟ್ಟು, ಕಲುಷಿತಗೊಳಿಸಬಾರದು ಎಂಬ ಉದ್ದೇಶದಿಂದ, ಕಾವೇರಿ ನೀರು ಪ್ರೋಕ್ಷಿಸಿ ತೆಂಗಿನ ಮರದ ಬುಡದಲ್ಲಿ ಮಣ್ಣು ಮಾಡಲಾಯಿತು’ ಎಂದ ಅರಕಲಗೂಡು ಶಾಸಕ ಎ.ಟಿ.ರಾಮಸ್ವಾಮಿ, ದೊರೆಸ್ವಾಮಿ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹೇಮಲತಾ ಸಣ್ಣಸ್ವಾಮಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರವಿಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಮನಮೋಹನ್, ಸಬ್ ಇನ್‌ಸ್ಪೆಕ್ಟರ್ ಅಜಯ್ ಕುಮಾರ್, ವಲಯ ಅರಣ್ಯಾಧಿಕಾರಿ ಅರುಣ್, ತಾಲ್ಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಜನಾರ್ದನ ಗುಪ್ತ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಜಯಕುಮಾರ್, ಕಂದಾಯ ನಿರೀಕ್ಷಕ ಸಿ.ಸ್ವಾಮಿ ಭಾಗವಹಿಸಿದ್ದರು.



ರಾಮನಾಥಪುರದ ಕಾವೇರಿ ನದಿ ದಂಡೆಯಲ್ಲಿ ಎಚ್.ಎಸ್.ದೊರೆಸ್ವಾಮಿಯವರ ಚಿತಾಭಸ್ಮಕ್ಕೆ ಪೂಜೆ ಸಲ್ಲಿಸಿದ ಶಾಸಕ ಎ.ಟಿ.ರಾಮಸ್ವಾಮಿ

‘ಮಕ್ಕಳಿಗೆ ಲಸಿಕೆ: ವೈಜ್ಞಾನಿಕ ಆಧಾರದಡಿ ನಿರ್ಧಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಪ್ರಸಾರವಾಗುವ ‘ಗಾಬರಿ ಹುಟ್ಟಿಸುವ ಸಂದೇಶಗಳು, ರಾಜಕೀಯ ಹಿನ್ನೆಲೆಯ ಬೇಡಿಕೆಗಳನ್ನು ಆಧರಿಸಿ ದೇಶದ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಕುರಿತು ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ’ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿ.ಕೆ.ಪೌಲ್ ಗುರುವಾರ ಹೇಳಿದ್ದಾರೆ.



‘ಹಲವು ಹಂತದ ಕ್ಲಿನಿಕಲ್ ಟ್ರಯಲ್ ನಡೆಯಬೇಕು. ನಂತರ, ಲಭ್ಯವಾಗುವ ವೈಜ್ಞಾನಿಕ ಮಾಹಿತಿಯ ಆಧಾರದ ಮೇಲೆಯೇ ಮಕ್ಕಳಿಗೆ ಲಸಿಕೆ ನೀಡುವ ಕುರಿತು ನಿರ್ಧಾರ ಕೈಗೊಳ್ಳಬೇಕಾಗುತ್ತದೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘12 ವರ್ಷದೊಳಗಿನ ಮಕ್ಕಳಿಗೆ ಯಾವ ದೇಶದಲ್ಲಿಯೂ ಲಸಿಕೆ ನೀಡುತ್ತಿಲ್ಲ. ಈ ವಯೋಮಾನದ ಮಕ್ಕಳಿಗೆ ಲಸಿಕೆ ನೀಡುವಂತೆ ವಿಶ್ವ ಆರೋಗ್ಯ ಸಂಸ್ಥೆ ಸಹ ಶಿಫಾರಸು ಮಾಡಿಲ್ಲ‘ ಎಂದೂ ಹೇಳಿದ್ದಾರೆ.

ತೇಜಸ್ವಿ ಸೂರ್ಯ ನಡೆಗೆ ಟ್ವಿಟರ್‌ನಲ್ಲಿ ಸಾರ್ವಜನಿಕರಿಂದ ಟೀಕಾಪ್ರಹಾರ

ಲಸಿಕೆ: ಸಂಸದರ ಪ್ರಚಾರ ರಾಯಭಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (ಪಿಎಚ್‌ಸಿ) ಲಸಿಕೆ ಸಿಗುತ್ತಿಲ್ಲ. ಬಿಬಿಎಂಪಿಗೆ ಲಸಿಕೆ ಕೊಡಿಸಲು ನೆರವಾಗುವ ಬದಲು ಸಂಸದ ತೇಜಸ್ವಿ ಸೂರ್ಯ ₹ 900 ಪಡೆದು ಲಸಿಕೆ ನೀಡುವ ಖಾಸಗಿ ಆಸ್ಪತ್ರೆ ಕಾರ್ಯಕ್ಕೆ ಪ್ರಚಾರ ನೀಡುತ್ತಿದ್ದಾರೆ. ಈ ಕಾರ್ಯಕ್ಕೆ ಎಷ್ಟು ಪರ್ಸೆಂಟ್ ಕಮಿಷನ್ ಸಿಗುತ್ತದೆ’ ಎಂದು ಟ್ವಿಟರ್‌ನಲ್ಲಿ ಕೆಲವು ಸಾರ್ವಜನಿಕರು ಪ್ರಶ್ನಿಸಿದ್ದಾರೆ.



ತೇಜಸ್ವಿ ಸೂರ್ಯ

ಇನ್ನು ಕೆಲವರು ಖಾಸಗಿ ಆಸ್ಪತ್ರೆಗಳ ಮೂಲಕ ಲಸಿಕೆ ಕೊಡಿಸಿದ್ದಕ್ಕೆ ಸಂಸದರಿಗೆ ಧನ್ಯವಾದವನ್ನೂ ಅರ್ಪಿಸಿದ್ದಾರೆ.

ಖಾಸಗಿ ನರ್ಸಿಂಗ್ ಹೋಂಗಳಿಗೆ ಹಾಗೂ ಸಣ್ಣ ಮಟ್ಟದ ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಕೋವಿಡ್ ಲಸಿಕೆ ಪಡೆದವರನ್ನು ಮಾತನಾಡಿರುವ ವಿಡಿಯೋವನ್ನು ತೇಜಸ್ವಿ ಸೂರ್ಯ ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಅದನ್ನು ಟ್ಯಾಗ್ ಮಾಡಿರುವ ವೈಟ್‌ಫೀಲ್ಡ್ ರೈಸಿಂಗ್ ಸಂಘಟನೆ, ‘ನೀವು ಖಾಸಗಿಯವರತ್ತ ಗಮನ ಕೇಂದ್ರೀಕರಿಸುತ್ತಿರುವುದು ಏಕೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೂರೈಸಲು ರಾಜ್ಯವು ಲಸಿಕೆ ಪಡೆಯುವತ್ತ ಹಾಗೂ ವ್ಯಾಪಕವಾಗಿ ಲಸಿಕೆ ಶಿಬಿರಗಳನ್ನು ಹಮ್ಮಿಕೊಳ್ಳುವತ್ತ ನಿಮ್ಮ ಗಮನ ಕೇಂದ್ರೀಕೃತ ಆಗಬೇಕಲ್ಲವೇ’ ಎಂದು ಪ್ರಶ್ನಿಸಿದೆ.


‘ಮಹದೇವಪುರ ಆಸುಪಾಸಿನಲ್ಲಿ ಪಿಎಚ್‌ಸಿಗಳು ನಿತ್ಯ 10– 20 ಲಸಿಕೆ ಪಡೆಯುವುದಕ್ಕೂ ಪರದಾಡುತ್ತಿವೆ’ ಎಂದೂ ಸಂಘಟನೆ ಟ್ವೀಟ್‌ನಲ್ಲಿ ತಿಳಿಸಿದೆ.

ತೇಜಸ್ವಿ ಸೂರ್ಯ ಖಾತೆ ಮೂಲಕ ಹಂಚಿಕೊಂಡ ಇನ್ನೊಂದು ವಿಡಿಯೊವನ್ನು ಟ್ಯಾಗ್ ಮಾಡಿರುವ ಅನಂತ ಮಹಾಜನ್, ‘ಮಹಾಶಯರೇ, ತಾವು ಉದ್ಯಮಿಯಾಗುತ್ತಿರುವುದಕ್ಕೆ ಹೆಮ್ಮೆಯಾಗುತ್ತಿದೆ. 1,200 ಡೋಸ್‌ಗಳಿಗೆ ತಲಾ ₹ 900ರಂತೆ ದಿನಕ್ಕೆ ₹ 10.80 ಲಕ್ಷ. ಮುಂದಿನ ವಾರ 15 ಸಾವಿರ ಜನರು. ಅಂದರೆ ₹ 1.35 ಕೋಟಿ. ಒಟ್ಟು ₹ 1.45 ಕೋಟಿ. ಈ ದಲ್ಲಾಳಿ ಕೆಲಸಕ್ಕೆ ನಿಮಗೆ ಸಿಗುವ ಭಕ್ಷೀಸು ಎಷ್ಟು. ದಯವಿಟ್ಟು ಅದನ್ನೂ ಪ್ರಕಟ ಮಾಡುತ್ತೀರಾ’ ಎಂದು ವ್ಯಂಗ್ಯವಾಗಿ ಪ್ರಶ್ನೆ ಮಾಡಿದ್ದಾರೆ.

‘ಸಾಮಾನ್ಯ ಕನ್ನಡ’ ಎಂಬ ಟ್ವಿಟರ್ ಖಾತೆಯು, ‘ಜಯನಗರದ ಬಿಬಿಎಂಪಿ ಉಚಿತ ಕೇಂದ್ರದ ಹೊರಗೆ ತೇಜಸ್ವಿ ಸೂರ್ಯ ಚಿತ್ರವಿರುವ, ಹಣ ಪಾವತಿಸಿ ಲಸಿಕೆ ಪಡೆಯುವ ಜಾಹೀರಾತುಗಳು ಗೋಚರಿಸುತ್ತವೆ. ಆದರೆ, ಜಯನಗರದ ಬಿಬಿಎಂಪಿ ಕೇಂದ್ರದಲ್ಲಿ ಯಾವುದೇ ಉಚಿತ ಲಸಿಕೆಗಳು ಲಭ್ಯವಿಲ್ಲ. ಇದು ವಿಪರ್ಯಾಸ. ಇಂತಹ ಸಂಸದರು ಬೇಕಾ ನಮಗೆ’ ಎಂದು ಪ್ರಶ್ನೆ ಮಾಡಿದೆ.

‘₹ 150ರ ಲಸಿಕೆಗೆ ₹ 900 ಏಕೆ‘ ಎಂದು ಚಂದ್ರು ಹೆತ್ತೂರು ಪ್ರಶ್ನೆ ಮಾಡಿದ್ದಾರೆ.

ಜನವಾದಿ ಮಹಿಳಾ ಸಂಘಟನೆ ಖಂಡನೆ



ಕುಮಾರಸ್ವಾಮಿ ಬಡಾವಣೆಯ ವಾಸವಿ ಆಸ್ಪತ್ರೆಯವರು 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯನ್ನು ₹ 900ಕ್ಕೆ ಮಾರಾಟ ಮಾಡುವುದಕ್ಕೆ ತೇಜಸ್ವಿ ಸೂರ್ಯ ಹಾಗೂ ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಪ್ರಚಾರ ನೀಡುವುದಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡನೆ ವ್ಯಕ್ತಪಡಿಸಿದೆ.

‘18 ವರ್ಷ ಮೇಲ್ಪಟ್ಟವರಿಗೆ ಮೇ 1ರಿಂದ ಲಸಿಕೆ ನೀಡಲು ‘ಲಸಿಕೆ ಉತ್ಸವ’ ಹಮ್ಮಿಕೊಳ್ಳುತ್ತೇವೆ ಎಂದು ಸರ್ಕಾರದ ಹಣ ವೆಚ್ಚ ಮಾಡಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಚಾರ ಗಿಟ್ಟಿಸಿಕೊಂಡಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಸಿಗದ ಪರಿಸ್ಥಿತಿ ಇದೆ. ಹಾಗಿರುವಾಗ ಖಾಸಗಿ ಆಸ್ಪತ್ರೆಗಳು ಮಾರಾಟ ಮಾಡಲು ಲಸಿಕೆ ಎಲ್ಲಿಂದ ಸಿಗುತ್ತಿದೆ’ ಎಂದು ಸಂಘಟನೆ ಪ್ರಶ್ನೆ ಮಾಡಿದೆ.

‘ಲಾಕ್‌ಡೌನ್‌ನಿಂದ ಜನ ಒಪ್ಪೊತ್ತಿನ ಊಟಕ್ಕೂ ಪರದಾಡುತ್ತಿದ್ದಾರೆ. ಲಸಿಕೆ ಜೀವರಕ್ಷಕ ಆಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಸಂಸದರು ಮತ್ತು ಶಾಸಕರು ತಮ್ಮ ಭಾವಚಿತ್ರ ಹಾಕಿಕೊಂಡು ವಾಸವಿ ಆಸ್ಪತ್ರೆಯ ಮೂಲಕ ಲಸಿಕೆ ಮಾರಾಟದಲ್ಲಿ ತೊಡಗಿರುವುದು ಜನದ್ರೋಹದ ಕೆಲಸ. ಸರ್ಕಾರ ಖಾಸಗಿ ಆಸ್ಪತ್ರೆಗಳ ಜೊತೆ ಶಾಮೀಲಾಗಿರುವುದಕ್ಕೆ ಇದು ಉದಾಹರಣೆ’ ಎಂದು ಸಂಘಟನೆಯ ಸಂಚಾಲಕರಾದ ಬಸಮ್ಮ ಹಾಗೂ ಸೆಲ್ವಿ ಟೀಕಿಸಿದ್ದಾರೆ.

ಮುಖ್ಯಾಂಶಗಳು

- ಖಾಸಗಿ ಆಸ್ಪತ್ರೆಗಳ ಬಗ್ಗೆ ಗಮನ ಹರಿಸಿರುವುದಕ್ಕೆ ಜನರ ಆಕ್ರೋಶ
- ಲಸಿಕಾ ಶಿಬಿರಗಳನ್ನು ಹಮ್ಮಿಕೊಳ್ಳಲು ಸಾರ್ವಜನಿಕರ ಸಲಹೆ

ಯೋಧರಿಗಾಗಿ ಶೋಧ: ಅಮೆರಿಕ ಒಪ್ಪಂದ

ಅಹಮದಾಬಾದ್: ಎರಡನೇ ಜಾಗತಿಕ ಯದ್ಧದ ಸಂದರ್ಭದಲ್ಲಿ ನಾಪತ್ತೆಯಾಗಿರುವ ತನ್ನ 400 ಜನ ಯೋಧರ ‘ಪತ್ತೆ ಹಾಗೂ ಗುರುತಿಸುವ’ ಕಾರ್ಯದಲ್ಲಿ ನೆರವು ಬಯಸಿ ಅಮೆರಿಕದ ರಕ್ಷಣಾ ಇಲಾಖೆಯು ಗುಜರಾತ್‌ನ ನ್ಯಾಷನಲ್ ಫೋರೆನ್ಸಿಕ್ ಸೈನ್ಸಸ್ ಯೂನಿವರ್ಸಿಟಿ (ಎನ್‌ಎಫ್‌ಎಸ್‌ಯು) ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.

ಯುದ್ಧದ ಸಂದರ್ಭದಲ್ಲಿ ದೇಶದ ಈಶಾನ್ಯ ಭಾಗದಲ್ಲಿ ಜಪಾನ್ ಸೇನೆ ದಾಳಿ ನಡೆಸಿತ್ತು. ಹೋರಾಟದ ವೇಳೆ ಯೋಧರು ನಾಪತ್ತೆಯಾಗಿದ್ದಾರೆ. ಯೋಧರ ಮೃತದೇಹಗಳನ್ನು ಪತ್ತೆ ಹಚ್ಚಿ, ಅವರ ಗುರುತು ಕಂಡುಹಿಡಿದು ಕುಟುಂಬಸ್ಥರಿಗೆ ಮಾಹಿತಿ ನೀಡುವ ಸಂಬಂಧ ಅಮೆರಿಕ ಸರ್ಕಾರ ಈ ಒಪ್ಪಂದ ಮಾಡಿಕೊಂಡಿದೆ ಎಂದು ಮೂಲಗಳು ಹೇಳಿವೆ.

‘ನಾಪತ್ತೆಯಾಗಿರುವ 400 ಯೋಧರ ಡಿಎನ್‌ಎ ಮಾಹಿತಿ ಅಮೆರಿಕದ ರಕ್ಷಣಾ ಇಲಾಖೆ ಬಳಿ ಇದೆ. ಈ ಡಿಎನ್‌ಎಗೆ ಸರಿಹೊಂದಬಹುದಾದ ಯೋಧರಿಗೆ ಸಂಬಂಧಿಸಿದ ಮಾಹಿತಿಗಾಗಿ ಇಲಾಖೆ ಯತ್ನಿಸುತ್ತಿದೆ’ ಎಂದು ಎನ್‌ಎಫ್‌ಎಸ್‌ಯು ಅಧಿಕಾರಿಗಳು ಹೇಳಿದ್ದಾರೆ.

ಹಾಸಿಗೆ ಬ್ಲಾಕಿಂಗ್; ಬಂಧಿತರ ಸಂಖ್ಯೆ 12ಕ್ಕೆ ಏರಿಕೆ

ವಾರ್ ರೂಮ್ ನೌಕರ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಹೆಸರಿನಲ್ಲಿ ಹಾಸಿಗೆ ಬ್ಲಾಕ್ ಮಾಡಿಸಿ ಮಾರಾಟ ಮಾಡುತ್ತಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ಕೋವಿಡ್ ವಾರ್ ರೂಮ್ ನೌಕರ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.



ಬಿಬಿಎಂಪಿ ದಕ್ಷಿಣ ವಲಯದ ‘ಕೋವಿಡ್ ವಾರ್ ರೂಮ್’ ನೌಕರ ಎಸ್. ವರುಣ್ ಹಾಗೂ ಆತನ ಸ್ನೇಹಿತನಾದ ಬನಶಂಕರಿ 3ನೇ ಹಂತದ ಎಂ. ಯಶವಂತಕುಮಾರ್ ಬಂಧಿತರು. ಪ್ರಕರಣದಲ್ಲಿ ಭಾಗಿಯಾಗಿದ್ದ ಬಾಬುನನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು. ತಾನು ಬಿಜೆಪಿ ಶಾಸಕ ಸತೀಶ್ ರೆಡ್ಡಿ ಆಪ್ತ ಎಂದು ಆರೋಪಿ ಹೇಳಿಕೊಂಡಿದ್ದ. ಇದೀಗ ಮತ್ತಿಬ್ಬರನ್ನು ಸೆರೆ ಹಿಡಿಯಲಾಗಿದ್ದು, ಈ ಮೂಲಕ ಬಂಧಿತರ ಸಂಖ್ಯೆ 12ಕ್ಕೆ ಏರಿಕೆ ಆಗಿದೆ.

‘ಖಾಸಗಿ ಆಸ್ಪತ್ರೆಗಳಲ್ಲಿ ಗುಣಮುಖರಾದ ಹಾಗೂ ಮೃತರಾದ ಕೊರೊನಾ ಸೋಂಕಿತ ಹಾಸಿಗೆಗಳ ಬಗ್ಗೆ ವರುಣ್ ಮಾಹಿತಿ ಪಡೆಯುತ್ತಿದ್ದ. ವಾರ್ ರೂಮ್‌ಗೆ ಕರೆ ಮಾಡಿ ಹಾಸಿಗೆ ಬಗ್ಗೆ ವಿಚಾರಿಸುತ್ತಿದ್ದ ಸೋಂಕಿತರ ವಿಳಾಸ ಹಾಗೂ ಸಂಪರ್ಕ ಸಂಖ್ಯೆ ದಾಖಲಿಸಿಕೊಳ್ಳುತ್ತಿದ್ದ’ ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ವರುಣ್



ಯಶವಂತ ಕುಮಾರ್

‘ತನ್ನ ಬಳಿಯ ಮಾಹಿತಿಯನ್ನು ಸ್ನೇಹಿತ ಯಶವಂತ್‌ಗೆ ನೀಡುತ್ತಿದ್ದ. ರೋಗಿಗಳನ್ನು ಸಂಪರ್ಕಿಸುತ್ತಿದ್ದ ಯಶವಂತ್, ‘ವಾರ್ ರೂಮ್‌ನಿಂದ ನಿಮಗೆ ಹಾಸಿಗೆ ಸಿಗಲು ಹೆಚ್ಚಿನ ಸಮಯವಾಗುತ್ತದೆ. ಹಣ ಕೊಟ್ಟರೆ, ಆಮ್ಲಜನಕ ಹಾಗೂ ತೀವ್ರ ನಿಗಾ ಘಟಕ (ಐಸಿಯು) ಸೌಲಭ್ಯವಿರುವ ಹಾಸಿಗೆಯನ್ನು ತ್ವರಿತವಾಗಿ ವ್ಯವಸ್ಥೆ ಮಾಡಲಾಗುವುದು’ ಎನ್ನುತ್ತಿದ್ದ. ಜೀವ ಉಳಿದರೆ ಸಾಕು ಎಂಬ ಪರಿಸ್ಥಿತಿಯಲ್ಲಿರುತ್ತಿದ್ದ ಸೋಂಕಿತರು ಹಾಗೂ ಅವರ ಸಂಬಂಧಿಕರು, ಆರೋಪಿ ಕೇಳಿದಷ್ಟು ಹಣವನ್ನು ಬ್ಯಾಂಕ್ ಖಾತೆಗೆ ಹಾಕುತ್ತಿದ್ದರು. ಹಣ ಬಂದ ನಂತರ ಆರೋಪಿಗಳು, ಖಾಸಗಿ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಹಾಸಿಗೆ ಕೊಡಿಸುತ್ತಿದ್ದರು’ ಎಂದೂ ಅಧಿಕಾರಿ ತಿಳಿಸಿದರು.

ಬಾಬು ಜೊತೆ ಒಡನಾಟ

‘ಬಾಬು ಜೊತೆ ಆರೋಪಿ ವರುಣ್ ಒಡನಾಟವಿಟ್ಟುಕೊಂಡಿದ್ದ ಮಾಹಿತಿ ಇದೆ. ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ’ ಎಂದೂ ಸಿಸಿಬಿ ಮೂಲಗಳು ಹೇಳಿವೆ.

‘ಆರೋಪಿ ಯಶವಂತ್ ನಿರ್ವಹಣೆ ಮಾಡುತ್ತಿದ್ದ ಖಾತೆಯಲ್ಲಿ ಹಣ ಪತ್ತೆಯಾಗಿದ್ದು, ಖಾತೆ ವಹಿವಾಟು ಬಗ್ಗೆ ಬ್ಯಾಂಕ್‌ನಿಂದ ಮಾಹಿತಿ ಪಡೆಯಲಾಗಿದೆ. ಜೊತೆಗೆ, ಆರೋಪಿಗಳು ಇದುವರೆಗೂ ಹಲವರಿಗೆ ಹಾಸಿಗೆ ಕೊಡಿಸಿರುವ ಸಂಗತಿಯೂ ಪತ್ತೆಯಾಗಿದೆ’ ಎಂದೂ ತಿಳಿಸಿವೆ.

ವಿಮ್ಸ್: ಕೇಕ್ ಕತ್ತರಿಸಿ ಸಂಭ್ರಮಿಸಿದ ವೈದ್ಯ ಸಿಬ್ಬಂದಿ!

35 ದಿನ, 300 ಸೋಂಕಿತರು ಗುಣಮುಖ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಇಲ್ಲಿನ ವಿಮ್ಸ್ ದಂತ ವೈದ್ಯಕೀಯ ಕಾಲೇಜಿನ ಜಿಲ್ಲಾಮಟ್ಟದ ಕೋವಿಡ್ ಆರೋಗ್ಯ ಕೇಂದ್ರದಲ್ಲಿ 35 ದಿನದಲ್ಲಿ 300 ಕೊರೊನಾ ಸೋಂಕಿತರು ಗುಣಮುಖರಾಗಿದ್ದಾರೆ.

ಇದೇ ಕಾರಣಕ್ಕೆ ವೈದ್ಯ ಸಿಬ್ಬಂದಿಯು, ಗುಣಮುಖರಾಗಿ ಶುಕ್ರವಾರ ಮನೆಗೆ ತೆರಳಲಿರುವವರ ಜೊತೆಗೆ ಗುರುವಾರ ಕೇಕ್ ಕತ್ತರಿಸಿ ಸಂಭ್ರಮಿಸಿದರು. ತಾವೇ ಕೇಕ್ ತಿನ್ನಿಸಿ ಭರವಸೆಯನ್ನೂ ಮೂಡಿಸಿದರು.

ವಿಮ್ಸ್ ಆಸ್ಪತ್ರೆ ಆವರಣದ ವಿವಿಧ ಕಟ್ಟಡಗಳಲ್ಲಿ ಟ್ರಯಾಜ್ ಕೇರ್ ಸೆಂಟರ್, ವೈದ್ಯಕೀಯ ಆಮ್ಲಜನಕ ಸೌಲಭ್ಯವುಳ್ಳ ಕೋವಿಡ್ ಕೇರ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿವೆ. ದಂತ ವೈದ್ಯಕೀಯ ಕಾಲೇಜಿನ ಹೊಸ ಕಟ್ಟಡದಲ್ಲಿ ಸದ್ಯ ಆಮ್ಲಜನಕ ಸೌಲಭ್ಯವುಳ್ಳ 41 ಹಾಸಿಗೆಯ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಈ ಕೇಂದ್ರದಲ್ಲಿ ಬಹುತೇಕ ಹಾಸಿಗೆಗಳು ಭರ್ತಿಯಾಗಿರುತ್ತವೆ.



ವಿಮ್ಸ್ ಆಸ್ಪತ್ರೆಯ ಕೋವಿಡ್ ಕೇರ್ ಸೆಂಟರ್‌ನಲ್ಲಿ ಗುಣಮುಖರಾದ ಸೋಂಕಿತರೊಬ್ಬರಿಗೆ ಡಾ.ಅನೀಶ್ ಕೇಕ್ ತಿನ್ನಿಸಿದರು

‘ಏಪ್ರಿಲ್ 20ರಿಂದ ಮೇ 26ರವರೆಗೆ ಈ ಕೇಂದ್ರದಲ್ಲಿ 300 ಮಂದಿ ಗುಣಮುಖರಾಗಿರುವುದು ಒಂದು ದಾಖಲೆ. ಕೇಂದ್ರದ ಎಲ್ಲ ಸಿಬ್ಬಂದಿಯ ಪರಿಶ್ರಮ ಅದಕ್ಕೆ ಕಾರಣ’ ಎಂದು ಕೇಂದ್ರದ ಉಸ್ತುವಾರಿ ಡಾ.ಅನೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೇರ್ ಸೆಂಟರ್‌ನಲ್ಲಿಯೇ ಸೋಂಕಿತರ ಜೊತೆಗೂಡಿ ಕೇಕ್ ಕತ್ತರಿಸಿದೆವು. ಹೊರಗೂ ವೈದ್ಯ–ಸಿಬ್ಬಂದಿ ಎಲ್ಲರೂ ಮತ್ತೊಂದು ಕೇಕ್ ಕತ್ತರಿಸಿ ಹಂಚಿ ಸಂಭ್ರಮಿಸಿದೆವು. ಸೋಂಕಿತರಲ್ಲಿ ಆತ್ಮಸ್ಥೈರ್ಯ ತುಂಬುವುದೇ ಇದರ ಉದ್ದೇಶವಾಗಿತ್ತು’ ಎಂದರು.

‘ಸೋಂಕಿನಿಂದ ಸಾವಿಗೀಡಾಗುವವರ ಪ್ರಮಾಣ ಜಿಲ್ಲೆಯಲ್ಲಿ ಹೆಚ್ಚಿದೆ ಎಂಬ ಚರ್ಚೆಗೇ ಹೆಚ್ಚು ಆದ್ಯತೆ ದೊರಕಿದೆ. ಆದರೆ, ಈಗ ಗುಣಮುಖರಾಗುವವರ ಸಂಖ್ಯೆಯೂ ಹೆಚ್ಚಿದೆ. ಅದಕ್ಕಾಗಿ ವೈದ್ಯ–ಸಿಬ್ಬಂದಿ ನಿರಂತರ ಶ್ರಮಿಸುತ್ತಿದ್ದಾರೆ’ ಎಂದು ಹೇಳಿದರು.

‘ಜಿಲ್ಲೆಯಲ್ಲಿ ಸೋಂಕಿನಿಂದ ಗುಣಮುಖರಾಗುವವರಲ್ಲಿ ಬಹಳ ಮಂದಿಗೆ ಮತ್ತೆ ಸೋಂಕಿನ ನಂತರದ ಅನಾರೋಗ್ಯದ ಲಕ್ಷಣಗಳು ಕಂಡು ಬಾರದೇ ಇರುವುದು ಇನ್ನೊಂದು ವಿಶೇಷ’ ಎಂದು ಅವರು ಹೇಳಿದರು.

ಜಲ್ ಜೀವನ್ ಮಿಷನ್: 4,647 ಗ್ರಾಮೀಣ ಜನವಸತಿಗಳ 51 ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರು

₹6,769 ಕೋಟಿ ಯೋಜನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗದ ಕುಟುಂಬಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಜಲ್‌ಜೀವನ್ ಮಿಷನ್ ಬಹುಗ್ರಾಮ ಯೋಜನೆಯಡಿ 4 ಜಿಲ್ಲೆಗಳು ಮತ್ತು ಎರಡು ತಾಲ್ಲೂಕುಗಳ ಐದು ಯೋಜನೆಗಳಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದ್ದು, ಇದರ ಅಂದಾಜು ವೆಚ್ಚ ₹6,768.85 ಕೋಟಿ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಈ ಮಾಹಿತಿ ನೀಡಿದರು.

ಈ ಯೋಜನೆಯಿಂದ 4,647 ಗ್ರಾಮೀಣ ಜನವಸತಿಗಳ 51 ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲಾಗುವುದು. ಅಲ್ಲದೆ, 27 ನಗರ ಪ್ರದೇಶಗಳ 6 ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುವುದು. ಈ ಯೋಜನೆ ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವದಲ್ಲಿ ಜಾರಿ ಆಗಲಿದೆ ಎಂದರು.

ಕಾರ್ಯಾರಂಭಗೊಂಡ 24 ರಿಂದ 30 ತಿಂಗಳಲ್ಲಿ ಯೋಜನೆ ಪೂರ್ಣಗೊಳ್ಳಲಿದೆ. ಇಷ್ಟು ದೊಡ್ಡ ಮೊತ್ತದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡುತ್ತಿರುವುದು ಇದೇ ಮೊದಲು ಎಂದು ಹೇಳಿದರು.



ಬಸವರಾಜ ಬೊಮ್ಮಾಯಿ

ಯಾವ ಜಿಲ್ಲೆಗಳಿಗೆ ಯೋಜನೆಗಳು: ನಬಾರ್ಡ್‌ನ ಮೂಲ ಸೌಕರ್ಯ ಅಭಿವೃದ್ಧಿ ನಿಧಿ (ಎನ್‌ಐಡಿಎ) ಯೋಜನೆಯಡಿ ರಾಯಚೂರು ಜಿಲ್ಲೆಗೆ ₹1,988.01 ಕೋಟಿ, ವಿಜಯಪುರ ಜಿಲ್ಲೆ ಯೋಜನೆ-1 ರ ಅಡಿ ₹1,431.48 ಕೋಟಿ, ವಿಜಯಪುರ ಜಿಲ್ಲೆ ಯೋಜನೆ-2 ರ ಅಡಿ ₹954.51 ಕೋಟಿ, ಮಂಡ್ಯ ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ₹690.36 ಕೋಟಿ, ಧಾರವಾಡ ಜಿಲ್ಲೆಯ ಯೋಜನೆಗೆ ₹1,032.44 ಕೋಟಿ. ನಬಾರ್ಡ್‌ನ ಆರ್‌ಐಡಿಎಫ್ ಯೋಜನೆಯಡಿ ಹೊಳಲ್ಕೆರೆ(ಚಿತ್ರದುರ್ಗ ಜಿಲ್ಲೆ) ಯೋಜನೆಗೆ ₹276 ಕೋಟಿ, ಬೈಂದೂರು (ಉಡುಪಿ ಜಿಲ್ಲೆ) ಯೋಜನೆಗೆ ₹396 ಕೋಟಿ. ಇವೆರಡೂ ಯೋಜನೆಗಳಿಗೆ ಒಟ್ಟು ₹6,768.85 ಕೋಟಿ ವೆಚ್ಚವಾಗಲಿದೆ.

ಸಂಪುಟ ಸಭೆಯ ಇತರ ಪ್ರಮುಖ ನಿರ್ಣಯಗಳು:

- ಕರ್ನಾಟಕ ವಿದ್ಯುತ್ ಚಾಲಿತ ವಾಹನ ಮತ್ತು ಇಂಧನ ಶೇಖರಣೆ ನೀತಿ 2017 ಕ್ಕೆ ತಿದ್ದುಪಡಿಗೆ ಒಪ್ಪಿಗೆ. ಇದರಡಿ ಗರಿಷ್ಠ 50 ಎಕರೆಯಲ್ಲಿ ವಿದ್ಯುತ್ ಚಾಲಿತ ವಾಹನ ತಯಾರಿಕಾ ಘಟಕ ಸ್ಥಾಪಿಸಿದವರಿಗೆ ಐದು ಕಂತುಗಳಲ್ಲಿ ಶೇ 15 ರಷ್ಟು ಬಂಡವಾಳ ಸಹಾಯಧನ
- ಹಾಸನ ವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ ಕೋರ್ಸ್‌ಗೆ 52 ಸೀಟುಗಳ ಹೆಚ್ಚಳ. ಇಲ್ಲಿ ವಿದ್ಯಾರ್ಥಿಗಳ ಹಾಸ್ಟೆಲ್ ನಿರ್ಮಾಣಕ್ಕೆ ₹46.20 ಕೋಟಿ, ಉಪಕರಣಗಳ ಖರೀದಿಗೆ ₹12.02 ಕೋಟಿಗೆ ಆಡಳಿತಾತ್ಮಕ ಅನುಮೋದನೆ
- ದೊಡ್ಡಬಳ್ಳಾಪುರ ತಾಲ್ಲೂಕಿನ ಆದಿ-ನಾರಾಯಣಹಳ್ಳಿಯಲ್ಲಿ ಹೋಂಡಾ ಆಕ್ಟಿವಾ ಕಂಪನಿಯ ಘಟಕ ಸ್ಥಾಪನೆಗೆ 18.07 ಎಕರೆ ಗೋಮಾಳ ಜಮೀನು
- ಅಣ್ಣಿಗೆರೆ, ಸುರಪುರ, ಶಹಾಪುರ, ಶಿವಮೊಗ್ಗ, ಹೊನ್ನಾಳಿಯಲ್ಲಿ ಕುಡಿಯುವ ನೀರು ಯೋಜನೆಗೆ ₹770 ಕೋಟಿ
- ಸಿಂಗಸಂದ್ರದಲ್ಲಿ ₹75 ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಮುಚ್ಚಯ ನಿರ್ಮಾಣ
- ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮೈಸೂರು ರಸ್ತೆಯಿಂದ ಉತ್ತರಹಳ್ಳಿ ರಸ್ತೆವರೆಗೆ ₹25.7 ಕೋಟಿ ವೆಚ್ಚದಲ್ಲಿ ವೈಟ್‌ಟಾಪಿಂಗ್
- ಹಾಸನ ನಗರದಲ್ಲಿರುವ ಚನ್ನಪಟ್ಟಣ ಕೆರೆ ಸೇರಿ ಪ್ರಮುಖ ಕೆರೆಗಳ ಅಭಿವೃದ್ಧಿ ಮತ್ತು ಮೂಲಸೌಕರ್ಯ ಕಲ್ಪಿಸಲು ₹144 ಕೋಟಿ ಕಾಮಗಾರಿಯ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ

ಅನಾಥ ಮಕ್ಕಳಿಗೂ ಪ್ಯಾಕೇಜ್ ಚರ್ಚೆ

ಕೋವಿಡ್ ಸಂದರ್ಭದಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ ವಿಶೇಷ ಪ್ಯಾಕೇಜ್ ನೀಡುವ ವಿಚಾರ ಸಂಪುಟದಲ್ಲಿ ಚರ್ಚೆ ನಡೆದಿದೆ.

ಕೇಂದ್ರದಿಂದ ಈ ಸಂಬಂಧ ಮಾರ್ಗಸೂಚಿ ಬರಲಿದ್ದು, ಆ ಬಳಿಕ ಅಂತಿಮ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

'ಎಲ್ಲ ವರ್ಗದ ಬಡವರಿಗೂ ಪ್ಯಾಕೇಜ್ ಅಡಿ ಪರಿಹಾರ ಸಿಕ್ಕಿಲ್ಲ. ಸಂಕಷ್ಟದಲ್ಲಿರುವ ಇತರರಿಗೆ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳಬೇಕು' ಎಂದು ಹಲವು ಸಚಿವರು ಸಭೆಯಲ್ಲಿ ಪ್ರತಿಪಾದಿಸಿದರು.

ಇದಕ್ಕೆ ಸಮ್ಮತಿಸಿದ ಮುಖ್ಯಮಂತ್ರಿ ಯಡಿಯೂರಪ್ಪ, ಹಣಕಾಸು ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಎಲ್ಲ ಜಿಲ್ಲೆಗಳಲ್ಲಿ ಮಕ್ಕಳ ವಿಶೇಷ ವಾರ್ಡ್

ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳಿಗೆ ಅಪಾಯವಿದೆ ಎಂದು ತಜ್ಞರು ಎಚ್ಚರಿಕೆ ನೀಡಿರುವ ಕಾರಣ ಎಲ್ಲ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಮಕ್ಕಳ ವಿಶೇಷ ವಾರ್ಡ್‌ಗಳನ್ನು ತೆರೆಯಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ವಿಶೇಷ ವಾರ್ಡ್‌ಗಳ ಜತೆಗೆ ತುರ್ತು ನಿಗಾ ಘಟಕಗಳನ್ನೂ ಸ್ಥಾಪಿಸಲಾಗುವುದು. ಕಪ್ಪು ಶಿಲೀಂಧ್ರ ಪ್ರಕರಣಗಳು ಹೆಚ್ಚುತ್ತಿದ್ದು ಹೆಚ್ಚು ಪ್ರಮಾಣದಲ್ಲಿ ವರದಿಯಾಗುತ್ತಿರುವುದರಿಂದ, ಇದಕ್ಕೆ ಸಂಬಂಧಿಸಿದ ಔಷಧಿಯನ್ನು ಅಗತ್ಯ ಪ್ರಮಾಣದಲ್ಲಿ ಕಳುಹಿಸಲು ತೀರ್ಮಾನಿಸಲಾಗಿದೆ ಎಂದರು.

ಸನ್ನಡತೆ: 125 ಕೈದಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ 18 ಮಹಿಳಾ ಕೈದಿಗಳು ಸೇರಿದಂತೆ 125 ಕೈದಿಗಳನ್ನು ಸನ್ನಡತೆ ಆಧಾರದ ಮೇಲೆ ಬುಧವಾರ ಬಿಡುಗಡೆ ಮಾಡಲಾಗಿದೆ.

'ಕೊರೊನಾ ಸೋಂಕು ಹೆಚ್ಚುತ್ತಿರುವುದರಿಂದ ಯಾವುದೇ ಕಾರ್ಯಕ್ರಮ ಆಯೋಜಿಸದೇ ರಾಜ್ಯದ ಎಲ್ಲ ಕಾರಾಗೃಹಗಳ ಅರ್ಹ ಕೈದಿಗಳನ್ನು ಸುರಕ್ಷಿತವಾಗಿ ಸಾರಿಗೆ ವ್ಯವಸ್ಥೆಯೊಂದಿಗೆ ಬೀಳ್ಕೊಡಲಾಯಿತು' ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರ್ಗಿ, ಧಾರವಾಡ, ವಿಜಯಪುರ ಹಾಗೂ ಬಳ್ಳಾರಿ ಕೇಂದ್ರ ಕಾರಾಗೃಹಗಳಲ್ಲಿ ಬುಧವಾರ ಅಧಿಕಾರಿಗಳೇ ಪ್ರಮಾಣ ಪತ್ರ ನೀಡಿ ಅಂತರ ಕಾಯ್ದುಕೊಂಡು ಕೈದಿಗಳನ್ನು ಕಳುಹಿಸಿಕೊಟ್ಟಿದ್ದಾರೆ.

ಉತ್ತಮ ನಡತೆ ತೋರಿದ್ದ ಕೈದಿಗಳ ಬಿಡುಗಡೆಗಾಗಿ ಕಾರಾಗೃಹಗಳ ಸ್ಥಾಯಿ ಸಲಹಾ ಮಂಡಳಿಗಳ ವರದಿ ಸಮೇತ ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಲಾಗಿತ್ತು. ಕೈದಿಗಳ ಬಿಡುಗಡೆಗೆ ಅನುಮೋದನೆ ನೀಡಿದ್ದ ಸರ್ಕಾರ, ರಾಜ್ಯಪಾಲರಿಗೆ ಪಟ್ಟಿ ಕಳುಹಿಸಿತ್ತು. ಅದನ್ನು ಪರಿಸೀಲಿಸಿದ್ದ ರಾಜ್ಯಪಾಲರು, 125 ಕೈದಿಗಳ ಬಿಡುಗಡೆಗೆ ಒಪ್ಪಿಗೆ ನೀಡಿದ್ದರು.

ಮುತ್ತತ್ತಿ ಅರಣ್ಯ ಪ್ರದೇಶ: ಮೇ 25ರವರೆಗೆ ಒಂದೂ ಪ್ರಕರಣ ಇರಲಿಲ್ಲ

ಕಾಡಂಚಿನ ಹಳ್ಳಿಗಳಿಗೂ ಹಬ್ಬಿದ ಸೋಂಕು

ಪ್ರಜಾವಾಣಿ ವಾರ್ತೆ

ಹಲಗೂರು (ಮಂಡ್ಯ ಜಿಲ್ಲೆ): ಕೊರೊನಾ ಸೋಂಕಿನಿಂದ ಇದುವರೆಗೆ ಮುಕ್ತವಾಗಿದ್ದ ಇಲ್ಲಿಯ ಮುತ್ತತ್ತಿ ಅರಣ್ಯ ಪ್ರದೇಶದ ಹಳ್ಳಿಗಳಿಗೂ ಈಗ ಸೋಂಕು ವ್ಯಾಪಿಸಿದೆ. ಕಾಡಂಚಿನ ವಿವಿಧ ಗ್ರಾಮಗಳಲ್ಲಿ 20ಕ್ಕೂ ಹೆಚ್ಚು ಮಂದಿಗೆ ಸೋಂಕು ತಗುಲಿದೆ.

ಅರಣ್ಯದ ನಡುವೆ ಇರುವ ಮುತ್ತತ್ತಿ ಗ್ರಾಮದಲ್ಲೇ 10 ಮಂದಿಗೆ ಸೋಂಕು ದೃಢಪಟ್ಟಿದೆ. ಮೊದಲ ಅಲೆ ಹಾಗೂ 2ನೇ ಅಲೆಯಲ್ಲಿ ಮೇ 25ರವರೆಗೂ ಒಂದೂ ಕೋವಿಡ್ ಪ್ರಕರಣ ಇರಲಿಲ್ಲ. ಇಲ್ಲಿಯ ಜನರು ಸ್ವಚ್ಛಂದವಾಗಿ ಓಡಾಡಿಕೊಂಡಿದ್ದರು.

ಈಗ ಜನರಲ್ಲಿ ಜ್ವರ, ನೆಗಡಿ ಕಾಣಿಸಿಕೊಳ್ಳುತ್ತಿದೆ. ಆರೋಗ್ಯ ಇಲಾಖೆ ಸಿಬ್ಬಂದಿ ಗ್ರಾಮಗಳಿಗೆ ತೆರಳಿ ಕೋವಿಡ್ ಪರೀಕ್ಷೆ ನಡೆಸುತ್ತಿದ್ದಾರೆ. ಹಲವು ಹಳ್ಳಿಗಳಲ್ಲಿ ನಿಷೇಧಿತ ವಲಯ ಘೋಷಿಸಲಾಗಿದೆ. ವಿವಿಧ ಸಂಘಟನೆಗಳ ಸದಸ್ಯರು ಅಗತ್ಯ ವಸ್ತು ಪೂರೈಕೆ ಮಾಡುತ್ತಿದ್ದಾರೆ.



ಮುತ್ತತ್ತಿ ಗ್ರಾಮದ ಜನರಿಗೆ ಕೋವಿಡ್ ಪರೀಕ್ಷೆ ನಡೆಸಲಾಯಿತು

ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದ ಒಂದೇ ಕುಟುಂಬದ ನಾಲ್ವರಿಗೆ ಸೋಂಕು ದೃಢಪಟ್ಟಿತ್ತು. ನಂತರ ಪ್ರಾಥಮಿಕ ಸಂಪರ್ಕಿತರಿಗೆ ಆರ್‌ಟಿಪಿಸಿಆರ್ ಮಾಡಿಸಲಾಗಿತ್ತು, ಗುರುವಾರ ಫಲಿತಾಂಶ ಬಂದಿದ್ದು ಮತ್ತೆ 13 ಮಂದಿಗೆ ಸೋಂಕು ದೃಢಪಟ್ಟಿದೆ, ಅವರಲ್ಲಿ ಒಂದೇ ಕುಟುಂಬದ 6 ಮಂದಿ ಇದ್ದಾರೆ.

'ಈವರೆಗೆ ನಮ್ಮ ಹಳ್ಳಿಯಲ್ಲಿ ಕೊರೊನಾ ಮಾತೇ ಇರಲಿಲ್ಲ. ಮಾಸ್ಕ್ ಹಾಕುವ ಅಗತ್ಯವೂ ಇರಲಿಲ್ಲ. ಈಗ ವೈದ್ಯರು, ಪೊಲೀಸರು ಮಾಸ್ಕ್ ಹಾಕಿ ಎನ್ನುತ್ತಿದ್ದಾರೆ. ಇದ್ದಕ್ಕಿದ್ದಂತೆ ಏನಾಯಿತೋ ಗೊತ್ತಿಲ್ಲ' ಎನ್ನುತ್ತಾರೆ ಮುತ್ತತ್ತಿ ನಿವಾಸಿ ಶರತ್.

ಭೀಮೇಶ್ವರಿಯಲ್ಲಿರುವ ಕಾವೇರಿ ಫಿಷಿಂಗ್ ಕ್ಯಾಂಪ್ (ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್) ಸಿಬ್ಬಂದಿಗೂ ಜ್ವರ ಕಾಣಿಸಿಕೊಂಡಿತ್ತು. ಕೋವಿಡ್ ಪರೀಕ್ಷೆ ನಡೆಸಿದ ನಂತರ 7 ಮಂದಿಗೆ ಕೋವಿಡ್–19 ದೃಢಪಟ್ಟಿದೆ.

'ಶುಕ್ರವಾರ ಮುತ್ತತ್ತಿ ಗ್ರಾಮದ ಎಲ್ಲರಿಗೂ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗುವುದು. ಸೋಂಕಿತರನ್ನು ವಡ್ಡರಹಳ್ಳಿ ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆಯ ಕೋವಿಡ್ ಕೇರ್ ಕೇಂದ್ರಕ್ಕೆ ದಾಖಲಿಸಲಾಗಿದೆ. ಮುತ್ತತ್ತಿ ಸಮೀಪವೇ ವಸತಿ ಶಾಲೆಯಲ್ಲಿ ಶೀಘ್ರವೇ 100 ಹಾಸಿಗೆಯ ಆರೈಕೆ ಕೇಂದ್ರ ತೆರೆಯಲಾಗುವುದು' ಎಂದು ಮಳವಳ್ಳಿ ತಹಶೀಲ್ದಾರ್ ವಿಜಿಯಣ್ಣ ತಿಳಿಸಿದರು.

'ಮೇಕೆದಾಟು: ಎನ್‌ಜಿಟಿ ಆದೇಶ ಪ್ರಶ್ನಿಸಲು ನಿರ್ಧಾರ'

ಬೆಂಗಳೂರು: 'ಮೇಕೆದಾಟು ಯೋಜನೆಯಲ್ಲಿ ಪರಿಸರ ನಾಶ ವಿಷಯಕ್ಕೆ ಸಂಬಂಧ ಪರಿಶೀಲಿಸಲು ಸಮಿತಿ ರಚಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಆದೇಶವನ್ನು ಪ್ರಶ್ನಿಸುವ ಮೂಲಕ ಕಾನೂನು ಹೋರಾಟ ನಡೆಸಲು ತೀರ್ಮಾನಿಸಲಾಗಿದೆ' ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮುಖ್ಯಮಂತ್ರಿ ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯ ಬಳಿಕ ಮಾತನಾಡಿದ ಅವರು, 'ಯೋಜನೆ ಪ್ರದೇಶದ ವ್ಯಾಪ್ತಿಯ ಕಚ್ಚಾ ರಸ್ತೆ ಕುರಿತು ತಮಿಳುನಾಡಿನ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿದೆ. ಅದರ ಆಧಾರದಲ್ಲಿ ಎನ್‌ಜಿಟಿ ಸಮಿತಿ ರಚಿಸಿದೆ. ಇದು ಸಮಂಜಸವಾದ ಕ್ರಮವಲ್ಲ. ಈ ಆದೇಶವನ್ನು ಎನ್‌ಜಿಟಿ ಮುಂದೆಯೇ ಪ್ರಶ್ನಿಸಲಿದ್ದೇವೆ' ಎಂದರು.

ಸಾರಿಗೆ ನೌಕರರ ವೇತನಕ್ಕೆ ಅನುದಾನ

ಬೆಂಗಳೂರು: ಸಾರಿಗೆ ಸಂಸ್ಥೆಗಳ ನೌಕರರಿಗೆ ಏಪ್ರಿಲ್ ತಿಂಗಳ ಶೇ 50ರಷ್ಟು ಮತ್ತು ಮೇ ತಿಂಗಳ ಶೇ 75ರಷ್ಟು ವೇತನ ಪಾವತಿಗೆ ರಾಜ್ಯ ಸರ್ಕಾರ ₹325 ಕೋಟಿ ಬಿಡುಗಡೆ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಯಾವುದೇ ರಿಯಾಯಿತಿ ಅಥವಾ ಉಚಿತ ಬಸ್ ಪಾಸ್‌ಗಳಿಗೆ ಸಹಾಯಧನ ಒದಗಿಸುವುದಿಲ್ಲ ಎಂದು ಇದೇ ವೇಳೆ ಸ್ಪಷ್ಟಪಡಿಸಿದೆ.

ವೇತನಕ್ಕೆ ಅನುದಾನ ಹಂಚಿಕೆ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದ್ದು, 8 ಷರತ್ತು ವಿಧಿಸಿದೆ. 'ವೇತನ ಹೊರತುಪಡಿಸಿ ಆರ್ಥಿಕ ಸೌಲಭ್ಯ, ಬಾಟಾ ಸೇರಿ ಯಾವುದೇ ಭತ್ಯೆ ಪಾವತಿಸಬಾರದು. ಸಂಸ್ಥೆಯ ಸ್ವಂತ ನಿಧಿಯಡಿ ಯಾವುದೇ ಕಾಮಗಾರಿ ಕೈಗೊಳ್ಳುವಂತಿಲ್ಲ. ಹೊಸದಾಗಿ ಬಸ್‌ಗಳ ಖರೀದಿ ಮಾಡ ಬಾರದು' ಎಂದು ತಿಳಿಸಿದೆ.

'ಪ್ರಸಕ್ತ ವರ್ಷ ಶಾಲಾ-ಕಾಲೇಜು ಆರಂಭವಾಗಿ ಉಚಿತ ಅಥವಾ ರಿಯಾಯಿತಿ ಪಾಸ್‌ಗಳನ್ನು ವಿತರಿಸಿದರೆ ಅದರ ವೆಚ್ಚವನ್ನು ಸಂಸ್ಥೆ ಅಥವಾ ವಿದ್ಯಾರ್ಥಿಗಳಿಂದಲೇ ಭರಿಸಿಕೊಳ್ಳಬೇಕು. ಸರ್ಕಾರದಿಂದ ಸಹಾಯಧನ ಒದಗಿಸುವುದಿಲ್ಲ. ಇತರೆ ಯಾವುದೇ ರಿಯಾಯಿತಿ ಬಸ್ ಪಾಸ್ ಕೂಡಾ ಈ ಸಾಲಿನಲ್ಲಿ ಲಭ್ಯವಾಗುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

'ರಿಯಾಯಿತಿ ಬಸ್ ಪಾಸ್‌ಗೆ ತಲಾ ಶೇ 25ರಷ್ಟನ್ನು ವಿದ್ಯಾರ್ಥಿಗಳು ಮತ್ತು ಸಾರಿಗೆ ಸಂಸ್ಥೆಗಳು ಒದಗಿಸುತ್ತಿದ್ದವು. ಉಳಿದ ಶೇ 50ರಷ್ಟನ್ನು ಸರ್ಕಾರ ಭರಿಸುತ್ತಿತ್ತು. ವೇತನ ಬಿಡುಗಡೆ ಮಾಡುವ ಸಂದರ್ಭದಲ್ಲಿ ಈ ರೀತಿಯ ಷರತ್ತುಗಳನ್ನು ಸರ್ಕಾರ ವಿಧಿಸುತ್ತಿದೆ. ಇದು ಸರಿಯಾದ ಬೆಳವಣಿಗೆ ಅಲ್ಲ' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ಸಿಐಟಿಯು) ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್ ಹೇಳಿದರು.

'ನೌಕರರ ವೇತನದಲ್ಲೂ ಕಡಿತ ಮಾಡಲಾಗಿದೆ. ಹೀಗೆ ಮಾಡಿದರೆ ಜೀವನ ನಿರ್ವಹಣೆ ಕಷ್ಟವಾಗಲಿದೆ. ನೌಕರರಿಗೆ ಪೂರ್ಣ ಪ್ರಮಾಣದ ವೇತನ ಬಿಡಗಡೆ ಮಾಡಬೇಕು' ಎಂದು ಆಗ್ರಹಿಸಿದರು.

ಜಿಂದಾಲ್‌ಗೆ ಭೂಮಿ: ಸರ್ಕಾರದ ತೀರ್ಮಾನ ವಾಪಸ್

ಒಂದನೇ ಪುಟದಿಂದ

ಆಗ ಆಡಳಿತ ಪಕ್ಷದ ಭಾಗವಾಗಿದ್ದ ಕಾಂಗ್ರೆಸ್ ಶಾಸಕರೂ ವಿರೋಧ ವ್ಯಕ್ತಪಡಿಸಿದ್ದರು. ಕೊನೆಗೆ ಸರ್ಕಾರ ಹಿಂದೆ ಸರಿದಿತ್ತು.

ಯಡಿಯೂರಪ್ಪ ಮುಖ್ಯಮಂತ್ರಿಯಾದ ಒಂದು ವರ್ಷದ ಬಳಿಕ ಮತ್ತೆ ಜಿಂದಾಲ್‌ಗೆ ಭೂಮಿ ನೀಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿತ್ತು. ಇದನ್ನು ವಿರೋಧಿಸಿ ಬಿಜೆಪಿಯ ಕೆಲವು ಶಾಸಕರು ಮುಖ್ಯಮಂತ್ರಿ ಮತ್ತು ಪಕ್ಷದ ವರಿಷ್ಠರಿಗೆ ಪತ್ರ ಬರೆದು ಅತೃಪ್ತಿ ಹೊರಹಾಕಿದ್ದರು. ವಕೀಲರಾದ ದೊರೆರಾಜು ಮತ್ತಿತರರು ಸೇರಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನೂ ದಾಖಲಿಸಿದ್ದರು. ಹೈಕೋರ್ಟ್ ನಿರ್ದೇಶನದ ಅನ್ವಯ ಸಚಿವ ಸಂಪುಟದ ಎಲ್ಲ ಸದಸ್ಯರಿಗೂ ನೋಟಿಸ್ ಜಾರಿ ಮಾಡಲಾಗಿತ್ತು.

ಈ ವಿಷಯ ಚರ್ಚಿಸಲು ಶಾಸಕಾಂಗ ಪಕ್ಷದ ಸಭೆ ಕರೆದು, ಅಲ್ಲಿ ತೀರ್ಮಾನವನ್ನು ವಿವರಣೆ ನೀಡಬೇಕು ಎಂದು ಕೆಲವು ಶಾಸಕರು ಒತ್ತಡ ಹೇರಿದ್ದರು. ಇದು ನಾಯಕತ್ವ ಬದಲಾವಣೆಯ ಚರ್ಚೆಗೂ ದಾರಿ ಮಾಡಿಕೊಟ್ಟಿತ್ತು.

ಜಿಂದಾಲ್‌ಗೆ ಇಷ್ಟು ಬೃಹತ್ ಪ್ರಮಾಣದ ಭೂಮಿ ನೀಡುವ ಅವಶ್ಯ ಏನಿದೆ ಎಂದು ಪಕ್ಷದ ವರಿಷ್ಠರು, ಯಡಿಯೂರಪ್ಪ ಅವರಿಂದ ವಿವರಣೆ ಕೇಳಿದ್ದರು ಎಂದೂ ಹೇಳಲಾಗುತ್ತಿದೆ.

ಕೋವಿಡ್: ಮೃತಪಟ್ಟ 130 ಶಿಕ್ಷಕರ ಅವಲಂಬಿತರಿಗೆ ನೌಕರಿ

ಬೆಂಗಳೂರು: ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಕೋವಿಡ್‌ನಿಂದ ಮೃತಪಟ್ಟ 130 ಶಿಕ್ಷಕ ಸಿಬ್ಬಂದಿಯ ಅವಲಂಬಿತರ ಪೈಕಿ ತಲಾ ಒಬ್ಬರಿಗೆ ಅನುಕಂಪದ ಆಧಾರದಲ್ಲಿ ಹುದ್ದೆ ನೀಡಿ ಸಾರ್ವಜನಿಕ ಶಿಕ್ಷಣ ಇಲಾಖೆ ಗುರುವಾರ ನೇಮಕಾತಿ ಪತ್ರ ನೀಡಿದೆ.

ಸರ್ಕಾರಿ ಕರ್ತವ್ಯದಲ್ಲಿರುವಾಗ ಮೃತಪಟ್ಟ ನೌಕರರ ಕುಟುಂಬದ ಅವಲಂಬಿತ ಸದಸ್ಯರಲ್ಲಿ ಒಬ್ಬರನ್ನು, ಅವರ ವಿದ್ಯಾರ್ಹತೆ ಪರಿಗಣಿಸಿ 'ಸಿ' ವೃಂದದ ಪ್ರಥಮ ದರ್ಜೆ ಸಹಾಯಕ ಹುದ್ದೆಗಿಂತ ಮೇಲ್ಪಟ್ಟದ್ದಲ್ಲದ ಯಾವುದಾದರೂ ಹುದ್ದೆಗೆ ನೇಮಕಾತಿಗೆ ಅವಕಾಶವಿದೆ. ಅದರನ್ವಯ, 53 ಮಂದಿಗೆ ಪ್ರಥಮ ದರ್ಜೆ ಸಹಾಯಕ, 31 ಮಂದಿಗೆ ದ್ವಿತೀಯ ದರ್ಜೆ ಸಹಾಯಕ, 46 ಮಂದಿಗೆ ಗ್ರೂಪ್ 'ಡಿ' ಹುದ್ದೆ ನೀಡಲಾಗಿದೆ.

ನೇಮಕಗೊಂಡವರಿಗೆ ಆದೇಶ ಪತ್ರ ನೀಡಿ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, 'ಕೊರೊನಾ ಸೋಂಕಿನಿಂದ ಶಿಕ್ಷಣ ಪರಿವಾರದ ಅನೇಕರು ಮೃತಪಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಶಿಕ್ಷಕರ ಕುಟುಂಬಗಳಿಗೆ ತಕ್ಷಣವೇ ಸ್ಪಂದಿಸುವ ಸಲುವಾಗಿ ಅನುಕಂಪದ ನೇಮಕಾತಿ ನೀಡಲಾಗಿದೆ' ಎಂದರು.



‘ಟಗರು ಪುಟ್ಟಿ’ ಎಂದೇ ಖ್ಯಾತಿ ಪಡೆದಿರುವ ನಟಿ ಮಾನ್ವಿತಾ ಕಾಮತ್ ಲಾಕ್‌ಡೌನ್‌ನಲ್ಲಿ ತಮ್ಮ ಬರವಣಿಗೆ ಹವ್ಯಾಸವನ್ನು ಒರೆಗೆ ಹಚ್ಚಿದ್ದು, ನಾಲ್ಕೈದು ಕಥೆಗಳ ಸಾರಾಂಶವನ್ನು ಸಿದ್ಧಪಡಿಸಿಕೊಂಡಿದ್ದಾರೆ. ಜೊತೆಗೆ 8 ತಿಂಗಳು ವೈಟ್ ಟ್ರೈನಿಂಗ್, ಪಥ್ಯಕ್ರಮದ ಮುಖಾಂತರ ತೂಕ ಇಳಿಸಿಕೊಂಡು, ಮುಂದಿನ ಸಿನಿಮಾ ಪ್ರಾಜೆಕ್ಟ್‌ಗಳಿಗೆ ಸಜ್ಜಾಗಿದ್ದಾರೆ ‘ಮಾನ್ವಿತಾ 2.0’. ಇವೆಲ್ಲವನ್ನೂ ವಿವರಿಸುತ್ತಾ ಲಾಕ್‌ಡೌನ್ ಅನುಭವ, ಸಿನಿಮಾ ಪಯಣದ ಕುರಿತು ‘ಸಿನಿಮಾ ಪುರವಣಿ’ ಜೊತೆ ಮಾತಿಗಿಳಿದರು.

ಮಾನ್ವಿತಾ ಕಾಮತ್

ತೆರೆಯ ಮೇಲೆ ‘ಮಾನ್ವಿತಾ 2.0’

ಸಂದರ್ಶನ

ಅಭಿಲಾಷ್ ಪಿ.ಎಸ್.

• ಲಾಕ್‌ಡೌನ್‌ನಲ್ಲಿ ಮಾನ್ವಿತಾ ಏನ್ಮಾಡುತ್ತಿದ್ದಾರೆ?

ಚಿತ್ರೀಕರಣವೆಲ್ಲ ಸ್ಥಗಿತವಾಗಿದ್ದು, ಮನೆಯಲ್ಲೇ ಇದ್ದೇನೆ. ಬೆಳಗ್ಗೆ ಯೋಗ ಮತ್ತು ಒಂದಿಷ್ಟು ಫಿಸಿಕಲ್ ಆ್ಯಕ್ಟಿವಿಟೀಸ್. ಕಲಾವಿದರಿಗೆ, ನಮ್ಮಲ್ಲಿರುವ ಹವ್ಯಾಸಗಳನ್ನು ಮತ್ತಷ್ಟು ಒರೆಗೆ ಹಚ್ಚುವ ಅವಧಿ ಇದು. ಸುಮ್ಮನೆ ಕುಳಿತಿರುವುದಕ್ಕಿಂತ ಮುಂದಿನ ಸಿನಿಮಾ ಯೋಜನೆಗಳಿಗೆ ಸಿದ್ಧವಾಗುವುದು ಮುಖ್ಯ. ಅದು ನಟನೆ ಆಗಿರಲಿ ಅಥವಾ ಚಿತ್ರಕಥೆಯೇ ಆಗಿರಲಿ. ಈ ಹಿಂದೆ ಚಿತ್ರೀಕರಣಕ್ಕೆ ಮುನ್ನ ಪೂರ್ವಸಿದ್ಧತೆಗೆ ಸಮಯ ಸಿಗುತ್ತಿರಲಿಲ್ಲ. ಇದೀಗ ಮುಂದಿನ ಸಿನಿಮಾ ಪ್ರೊಜೆಕ್ಟ್‌ಗಳಿಗಾಗಿ ನನ್ನನ್ನು ನಾನು ಸಿದ್ಧಪಡಿಸಿಕೊಂಡಿದ್ದೇನೆ.

ಹಲವು ಭಾಷೆಯ ಸಿನಿಮಾಗಳನ್ನು ನೋಡುತ್ತಿದ್ದೇನೆ. ಇದರ ಪ್ರೇರಣೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಒಟಿಟಿಯಲ್ಲಿ ಕನ್ನಡ ಕಂಟೆಂಟ್‌ಗಳೇ ಇಲ್ಲ. ಕನ್ನಡ ಚಿತ್ರರಂಗಕ್ಕೆ ಕೆಜಿಎಫ್ ಚಿತ್ರ ಒಳ್ಳೆಯ ಹೆಸರು ತಂದುಕೊಟ್ಟಿತು. ಒಳ್ಳೆಯ ವೇದಿಕೆಯನ್ನು ಈ ಚಿತ್ರ ಒದಗಿಸಿದೆ. ನಾವು ಮುಂದೆ ಯಾವ ಮಾದರಿಯ ಕಂಟೆಂಟ್ ಅಭಿವೃದ್ಧಿಪಡಿಸಬಹುದು ಎನ್ನುವುದನ್ನು ಯೋಚನೆ ಮಾಡುವುದು ಮುಖ್ಯ. ಮಲಯಾಳಂನಲ್ಲಿ ಅತ್ಯುತ್ತಮ ಸಿನಿಮಾಗಳು ಬರುತ್ತಿವೆ. ಅವರಿಗೆ ಚಿತ್ರಕಥೆಯೇ ಹೀರೋ. ಒಟಿಟಿಗಳಲ್ಲಿ ಬೇರೆ ಭಾಷೆಯ ಹಳೆಯ ಸಿನಿಮಾಗಳ ಸಂಗ್ರಹ ಇದ್ದರೂ, ಕನ್ನಡದ ಹಳೆಯ ಸಿನಿಮಾಗಳು ಹೆಚ್ಚು ಇಲ್ಲ. ಕನ್ನಡದ ಎಲ್ಲ ಹಳೆಯ ಸಿನಿಮಾಗಳೂ ಒಟಿಟಿಯಲ್ಲಿ ಲಭ್ಯವಾಗಬೇಕು. ನಾವು ಪ್ರಿಪ್ರೊಡಕ್ಷನ್‌ಗೆ ಹೆಚ್ಚಿನ ಒತ್ತು ನೀಡುತ್ತಿರಲಿಲ್ಲ. ಈ ಅವಧಿಯನ್ನು ಅದಕ್ಕಾಗಿ ವಿನಿಯೋಗಿಸಬೇಕು. ವೆಬ್ ಮುಂದಿನ ಭವಿಷ್ಯ ಎನ್ನುತ್ತಿದ್ದಾರೆ. ಇದಕ್ಕಾಗಿ ಯಾವ ರೀತಿ ವಿಷಯಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವುದನ್ನೂ ಯೋಚಿಸುತ್ತಿದ್ದೇನೆ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುತ್ತಿಲ್ಲ.

• ಮಾನ್ವಿತಾ ಬದಲಾಗಿದ್ದಾರೆ. ಏನಿದರ ಹಿಂದಿನ ಗುಟ್ಟು?

ಪರಿವರ್ತನೆ ಎಲ್ಲರಿಗೂ ಅಗತ್ಯ. ನಮ್ಮನ್ನು ನಾವು ಅಪ್‌ಗ್ರೇಡ್ ಮಾಡಿಕೊಳ್ಳುವುದು ಮುಖ್ಯ. ಇದಾಗದಿದ್ದರೆ ಸಿನಿಮಾ ರಂಗದಲ್ಲಿ ಬೆಳೆಯಲು ಸಾಧ್ಯವಿಲ್ಲ. ವೈಟ್ ಟ್ರೈನಿಂಗ್, ಪಥ್ಯಕ್ರಮದ ಮುಖಾಂತರ ತೂಕ ಇಳಿಸಿಕೊಂಡಿದ್ದೇನೆ. ಈಗ ಚಿತ್ರರಂಗಕ್ಕೆ ಬರುವ ಕಲಾವಿದರು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡೇ ಬರುತ್ತಿದ್ದಾರೆ. ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಜ್ಜಾಗಿರುತ್ತಾರೆ. ಪ್ರತಿ ಸಿನಿಮಾದಲ್ಲೂ ಒಂದೊಂದು ಲುಕ್. ‘ಕೆಂಡಸಂಪಿಗೆ’ಯಲ್ಲಿ ಇದ್ದ ಹಾಗೆ ನಾನು ‘ಟಗರು’ ಚಿತ್ರದಲ್ಲಿ ಇರಲಿಲ್ಲ. ‘ಇಂಡಿಯಾ ವರ್ಸಸ್ ಇಂಗ್ಲೆಂಡ್’ ಸಿನಿಮಾದಲ್ಲಿ ಇದ್ದಂತೆಯೇ ಮುಂದಿನ ಸಿನಿಮಾಗಳಲ್ಲೂ ಕಾಣಿಸಿಕೊಳ್ಳಲು ನನಗೆ ಇಷ್ಟವಿಲ್ಲ. ‘ಅಪ್‌ಗ್ರೇಡೆಡ್ ವರ್ಷನ್ ಆಫ್’ ಮಾನ್ವಿತಾ ನೋಡಬೇಕು. ಆ್ಯಪ್‌ಗಳು ಅಪ್‌ಡೇಟ್ ಆಗುತ್ತಿರುವಂತೆ ನಾವೆಲ್ಲರೂ ಅಪ್‌ಡೇಟ್ ಆಗಬೇಕು. ದೈಹಿಕವಾಗಿ ಫಿಟ್ ಆಗಿ ಕಾಣಿಸಬೇಕು ಎಂದರೆ ಊಟದಿಂದ ಹಿಡಿದು ವರ್ಕ್‌ಔಟ್‌ನಲ್ಲೂ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

• ಚಿತ್ರಕಥೆ ಬರೆಯುತ್ತಿದ್ದೀರಂತೆ?

ಒಬ್ಬ ಕಲಾವಿದೆಯಾಗಿ, ನನ್ನೊಳಗಿನ ಬರಹಗಾರ್ತಿಯನ್ನು ನಾನು ಕಂಡುಕೊಳ್ಳುತ್ತಿದ್ದೇನೆ. ಬರವಣಿಗೆಗೆ ಅಂತ್ಯವಿಲ್ಲ. ನನಗೆ ಸಿನಿಮಾ ಎಂದರೆ ಪ್ರೀತಿ. ಇದಕ್ಕಾಗಿ ಯಾವುದಾದರೂ ಕೊಡುಗೆ ನೀಡಬೇಕು. ಯಾವ ರೀತಿಯ ಚಿತ್ರಕಥೆ ಮಾಡಬಹುದು, ಪಾತ್ರಗಳು ಯಾವ ರೀತಿ ಇರಬೇಕು ಎನ್ನುವುದನ್ನು ಶೋಧನೆ ಮಾಡುತ್ತಿದ್ದೇನೆ. ಹೀರೋ ಕೇವಲ ಪೊಲೀಸ್ ಅಧಿಕಾರಿ, ವೈದ್ಯ, ಉದ್ಯಮಿಯಾಗಿರಬೇಕಿಲ್ಲ. ಆತ ನಮ್ಮ ಅಕ್ಕಪಕ್ಕದಲ್ಲೇ ಇರುವ ಒಬ್ಬ ಬ್ಯಾಂಕ್ ನೌಕರ, ಪತ್ರಕರ್ತ ಆಗಿರಬಹುದು. ನಾಲ್ಕೈದು ಚಿತ್ರಕಥೆಗಳ ಸಾರಾಂಶವನ್ನು ಬರೆದಿದ್ದೇನೆ. ಪೂರ್ಣ ಪ್ರಮಾಣದ ಚಿತ್ರಕಥೆ ಬರೆಯುವಷ್ಟು ಸಾಮರ್ಥ್ಯ ನನಗಿಲ್ಲ. ಚಿತ್ರಕಥೆ ಬರೆಯಲು ಹಲವು ಆ್ಯಪ್ ಇದೆ ಎನ್ನುತ್ತಾರೆ. ಆದರೆ, ಇದನ್ನು ಬಳಸಿದರೆ ನಮ್ಮ ಸ್ವಂತಿಕೆ ಏನೂ ಇರುವುದಿಲ್ಲ. ಲಾಕ್‌ಡೌನ್ ಮುಗಿದ ಬಳಿಕ, ಒಂದು ತಂಡ ಮಾಡಿಕೊಂಡು, ಒಂದಿಷ್ಟು ನಿರ್ದೇಶಕರನ್ನು ಮಾತನಾಡಿಸಿ, ಈ ಕುರಿತು ಚರ್ಚೆ ನಡೆಸಬೇಕಾಗಿದೆ.

• ‘ಶಿವ 143’ಯಲ್ಲಿ ನಿಮ್ಮ ಪಾತ್ರದ ಬಗ್ಗೆ?

ನಟಿಯಾಗಿ ಈ ಚಿತ್ರದಲ್ಲಿನ ಪಾತ್ರ ನನಗೆ ಬಹಳ ಸವಾಲಿನದ್ದಾಗಿತ್ತು. ಬೋಲ್ಡ್, ಡೇರಿಂಗ್ ಪಾತ್ರವಿದು, ಮಾನ್ವಿತಾ ಈ ರೀತಿಯ ಪಾತ್ರವನ್ನು ನಿಭಾಯಿಸಿದ್ದಾಳಾ ಎಂದು ಪ್ರೇಕ್ಷಕರೇ ಪ್ರಶ್ನಿಸಿಕೊಳ್ಳುವ ರೀತಿಯಲ್ಲಿದೆ. ಕ್ಲೈಮ್ಯಾಕ್ಸ್‌ನಲ್ಲಿ ಸ್ವಲ್ಪ ನೆಗೆಟಿವ್ ಶೇಡ್ ಕೂಡಾ ಈ ಪಾತ್ರಕ್ಕಿದೆ. ನಟಿಯಾಗಿ ಆ ಪಾತ್ರಕ್ಕೆ ನ್ಯಾಯ ಒದಗಿಸಿದ್ದೇನೆ. ಜನರು ಹೇಗೆ ತೆಗೆದುಕೊಳ್ಳುತ್ತಾರೆ ನೋಡಬೇಕು. ಈ ಚಿತ್ರದ ಚಿತ್ರೀಕರಣ, ಡಬ್ಬಿಂಗ್ ಎಲ್ಲವೂ ಮುಗಿದಿದೆ. ಲಾಕ್‌ಡೌನ್ ಆದ ಕಾರಣ, ಚಿತ್ರಮಂದಿರಗಳೆಲ್ಲವೂ ಮುಚ್ಚಿವೆ. ರಾಜ್‌ಕುಮಾರ್ ಅವರ ಮೊಮ್ಮಗನಾಗಿರುವ ಧೀರೇನ್ ಅವರ ಚೊಚ್ಚಲ ಚಿತ್ರವಾಗಿರುವ ಕಾರಣ ತಂಡವು ಚಿತ್ರಮಂದಿರದಲ್ಲೇ ಚಿತ್ರ ಬಿಡುಗಡೆಗೆ ಕಾಯುತ್ತಿದೆ.

ವಿಭಿನ್ನ ಪಾತ್ರಗಳನ್ನು ಮಾಡುವ ಆಸೆ ನನಗಿದೆ. ‘ರಾಜಸ್ಥಾನ್ ಡೈರೀಸ್’ ಚಿತ್ರದ ಚಿತ್ರೀಕರಣವೂ ಮುಗಿದಿದ್ದು, ಇದು ದ್ವಿಭಾಷಾ ಚಿತ್ರ. ಈ ಚಿತ್ರದ ತಂಡವೂ ಚಿತ್ರಮಂದಿರದಲ್ಲೇ ಚಿತ್ರ ಬಿಡುಗಡೆ ಮಾಡಲು ಕಾಯುತ್ತಿದೆ. ಇದೀಗ ಈ ಚಿತ್ರವನ್ನು ಒಟಿಟಿಯಲ್ಲಿ ಬಿಡುಗಡೆ ಮಾಡುವ ಕುರಿತೂ ಚರ್ಚೆ ನಡೆಯುತ್ತಿದೆ. ❖



ಕಿರಣ್ ರಾಜ್

ನೊಂದವರಿಗೆ ಆಶಾ‘ಕಿರಣ’

ರೇಷ್ಮಾ

‘ಕನ್ನಡತಿ’ ಧಾರಾವಾಹಿಯ ನಾಯಕ ಹರ್ಷ ಇನ್ನೊಬ್ಬರ ನೋವಿಗೆ ಮಿಡಿಯುವವನು. ಬೇರೆಯವರ ಕಷ್ಟಕ್ಕೆ ಹೆಗಲಾಗುವ ಮನೋಭಾವದವನು. ಅಂತಹ ಪಾತ್ರಕ್ಕೆ ಜೀವ ತುಂಬಿದವರು ಕಿರಣ್‌ರಾಜ್. ಅವರು ನಿಜ ಜೀವನದಲ್ಲೂ ಜನಾನುರಾಗಿ. ಜನರ ಕಷ್ಟಕ್ಕೆ ಸ್ಪಂದಿಸುವ ಇವರು ಕೊರೊನಾ ಸಂದರ್ಭದಲ್ಲಿ ಬಡವರು, ನಿರ್ಗತಿಕರು ಹಾಗೂ ಸ್ಲಮ್‌ಗಳಲ್ಲಿ ವಾಸಿಸುವವರಿಗೆ ಊಟ ನೀಡುವ ಜೊತೆಗೆ ಅನಿವಾರ್ಯತೆ ಇರುವವರಿಗೆ ಫುಡ್ ಕಿಟ್‌ಗಳನ್ನು ವಿತರಿಸುತ್ತಿದ್ದಾರೆ. ಇಷ್ಟೇ ಅಲ್ಲದೇ ಕಿರಣ್‌ರಾಜ್ ಫೌಂಡೇಶನ್ ಮೂಲಕ 2016ರಿಂದ ನೊಂದವರಿಗೆ ನೆರವಾಗುತ್ತಿದ್ದಾರೆ.

ಸಮಾಜಸೇವೆಗೆ ಸ್ಫೂರ್ತಿ

‘ಅಸಹಾಯಕರಿಗೆ ನನ್ನಿಂದಾಗುವ ಸಹಾಯ ಮಾಡಬೇಕು ಎನ್ನುವ ಮನಸ್ಸು ಮೊದಲಿನಿಂದಲೂ ನನ್ನಲ್ಲಿತ್ತು. ಆದರೆ ಇನ್ನೊಬ್ಬರಿಗೆ ಸಹಾಯ ಮಾಡುವ ಮೊದಲು ನಾವು ಸಮರ್ಥರಾಗಿರಬೇಕು. ಹಾಗಾಗಿ ನಾನು ಸಮರ್ಥವಾಗಿ ದುಡಿಯಲು ಆರಂಭಿಸಿದ ಮೇಲೆ ಜನರಿಗೆ ಸಹಾಯ ಮಾಡಲು ಆರಂಭಿಸಿದೆ. ನನ್ನ ನಟನೆಯ ಆರಂಭದ ದಿನಗಳಿಂದಲೂ ದುಡಿಮೆಯ ಶೇ 40 ರಷ್ಟು ಭಾಗವನ್ನು ಕಿರಣ್‌ರಾಜ್ ಫೌಂಡೇಶನ್‌ಗೆ ನೀಡಿ ಅದರ ಮೂಲಕ ಜನರಿಗೆ ನೆರವು ಒದಗಿಸುತ್ತಿದ್ದೇನೆ. ಹಾಗೆ ನೆರವು ನೀಡುವಾಗ ಫೌಂಡೇಶನ್ ಮಾನಸಿಕ ಅಸ್ವಸ್ಥರು, ಅನಾಥಶ್ರಮ, ವೃದ್ಧಾಶ್ರಮ ಹಾಗೂ ಸರ್ಕಾರಿ ಶಾಲೆ ಮಕ್ಕಳಿಗೆ ಆದ್ಯತೆ ನೀಡುತ್ತದೆ’ ಎಂದು ಹೇಳುತ್ತಾರೆ.

ಅಯ್ಯೋ ಪಾಪ ಅನ್ನಬೇಡಿ

‘ನಮ್ಮ ತಂದೆ ಮಿಲಿಟರಿಯಲ್ಲಿದ್ದರು. ನಾವು ಚಿಕ್ಕ ವಯಸ್ಸಿನಿಂದಲೂ ಬೇರೆಯವರ ಕಷ್ಟಗಳನ್ನು ನೋಡಿದಾಗ ಮನಸ್ಸು ಮರುಗುತಿತ್ತು. ಸಹಾಯ ಮಾಡಬೇಕು ಎಂಬ ಹಂಬಲ ಮೂಡುತ್ತಿತ್ತು. ನಮ್ಮ ತಂದೆಯವರು ಕೂಡ ಚಿಕ್ಕಂದಿನಿಂದಲೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು ಎಂಬ ಮಾತು ಹೇಳುತ್ತಿದ್ದರು. ಜನರ ಕಷ್ಟವನ್ನು ನೋಡಿ ಅಯ್ಯೋ ಪಾಪ ಎನ್ನುವುದಕ್ಕಿಂತ ನಮ್ಮಿಂದಾದಷ್ಟು ಸಹಾಯ ಮಾಡಬೇಕು’ ಎಂಬ ಕಿವಿಮಾತು ಹೇಳುತ್ತಾರೆ.

ಕೊರೊನಾ ಸಮಯದಲ್ಲಿ ನೆರವು

ಕಳೆದ ವರ್ಷದ ಕೊರೊನಾ ಸಮಯದಿಂದ ನಿತ್ಯ ಸಾವಿರಾರು ಜನರಿಗೆ ಊಟದ ವ್ಯವಸ್ಥೆ ಮಾಡುತ್ತಿದ್ದಾರೆ ಕಿರಣ್. ಬೆಂಗಳೂರಿನ ನಾಗರಬಾವಿ, ಉಲ್ಲಾಳ, ಸಿರ್ಸಿ ಸರ್ಕಲ್ ಮುಂತಾದ ಕಡೆ ಇರುವ ಸ್ಲಮ್‌ಗಳ ಜನರಿಗೆ ಊಟ ಹಾಗೂ ರೇಷನ್ ಕಿಟ್‌ಗಳನ್ನು ನೀಡುವ ಮೂಲಕ ನೆರವಾಗುತ್ತಿದ್ದಾರೆ. ಅಲ್ಲದೇ, ಕಿರುತೆರೆ ಹಾಗೂ ಹಿರಿತೆರೆ ಕ್ಷೇತ್ರದಲ್ಲಿ ಪರದೆ ಹಿಂದೆ ದುಡಿಯುವ ಕೈಗಳಿಗೆ, ಕೊರೊನಾದಿಂದ ಹೋಂ ಕ್ವಾರಂಟೈನ್ ಆದವರಿಗೆ ರೇಷನ್ ಕಿಟ್ ನೀಡುವ ವ್ಯವಸ್ಥೆ ಮಾಡುತ್ತಿದ್ದಾರೆ.

ಕಿರಣ್‌ರಾಜ್ ಫೌಂಡೇಶನ್ ಭವಿಷ್ಯದ ಕನಸು

‘ನಮ್ಮ ಫೌಂಡೇಶನ್ ವತಿಯಿಂದ ಒಂದಷ್ಟು ಜನರಿಗೆ ಉದ್ಯೋಗ ಸಿಗುವಂತೆ ಮಾಡಬೇಕು, ಸ್ವಯಂ ಉದ್ಯಮ ರೂಪಿಸಲು ಸಹಾಯ ಮಾಡಬೇಕು. ಒಂದು ಕುಟುಂಬದಲ್ಲಿ ಒಬ್ಬ ಸ್ವತಂತ್ರನಾದರೂ ಅವನಿಂದ 10 ಜನರಿಗೆ ಸಹಾಯವಾಗುತ್ತದೆ. ಈ ರೀತಿಯ ಯೋಚನೆಗಳೆಲ್ಲಾ ನನ್ನ ತಲೆಯಲ್ಲಿವೆ. ಮುಂದೆ ನೋಡಬೇಕು ಏನೆಲ್ಲಾ ಆಗುತ್ತದೆ’ ಎನ್ನುತ್ತಾ ಭವಿಷ್ಯದ ಯೋಜನೆಗಳನ್ನು ಹಂಚಿಕೊಳ್ಳುತ್ತಾರೆ.

ಆತ್ಮತೃಪ್ತಿ ಇದೆ

‘ನಾನು ಮಾಡಿದ ಸಹಾಯದಿಂದ ನಾಲ್ಕಾರು ಮಂದಿ ಚೆನ್ನಾಗಿದ್ದಾರೆ ಎಂದು ತಿಳಿದಾಗ ಖುಷಿ ಆಗುತ್ತದೆ. ಅಲ್ಲದೇ ಸಹಾಯ ಪಡೆದು ಯಾರೋ ನನಗೆ ಕರೆ ಮಾಡಿ ಕೃತಜ್ಞತೆ ತಿಳಿಸಿದಾಗ ಆತ್ಮತೃಪ್ತಿ ಸಿಗುತ್ತದೆ’ ಎನ್ನುತ್ತಾ ಮಾತು ಮುಗಿಸುತ್ತಾರೆ. ❖

ಬೊರೋಖುನ್‌ನಲ್ಲಿ ಮೈಸೂರಿನ ಯುವಕ

ಸಿನಿ ಸಂಕ್ಷಿಪ್ತ


ಅಮೆರಿಕದ ನ್ಯೂಯಾರ್ಕ್‌ನಲ್ಲಿ ಜೂನ್ 4ರಿಂದ ಜೂನ್ 13ರವರೆಗೆ ನಡೆಯಲಿರುವ ಇಂಡಿಯನ್ ಚಿತ್ರೋತ್ಸವಕ್ಕೆ ಅಸ್ಸಾಮಿ ಚಿತ್ರ ‘Songs for Rain’ (ಬೊರೋಖುನ್) ಆಯ್ಕೆಯಾಗಿದ್ದು, ಈ ಚಿತ್ರದಲ್ಲಿ ಡೈರೆಕ್ಟರ್ ಆಫ್ ಫೋಟೋಗ್ರಫಿ (ಡಿಒಪಿ) ಆಗಿ ಮೈಸೂರಿನ ಯುವಕ ಎನೋಷ್ ಒಲಿವೇರ ಕಾರ್ಯನಿರ್ವಹಿಸಿದ್ದಾರೆ.

ಕೊಲ್ಕತ್ತದ ಸತ್ಯಜಿತ್ ರೇ ಫಿಲ್ಮ್ ಮತ್ತು ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ಎನೋಷ್ ಛಾಯಾಗ್ರಹಣ ಪದವಿ ಪಡೆದಿದ್ದರು. ಕಳೆದ ವರ್ಷ ಲಾಕ್‌ಡೌನ್‌ಗಿಂತ ಒಂದು ತಿಂಗಳ ಮುಂಚೆ ಅಸ್ಸಾಂನಲ್ಲಿ ಈ ಚಿತ್ರದ ಚಿತ್ರೀಕರಣ ನಡೆದಿತ್ತು. ನಿರ್ದೇಶಕ ಕೃಷ್ಣಕಾಂತ್ ಬೊರ ಈ ಚಿತ್ರವನ್ನು ನಿರ್ದೇಶಿಸಿದ್ದರು. ❖



ಎನೋಷ್ ಒಲಿವೇರ

ಟಾಲಿವುಡ್‌ಗೆ ‘ದಿಯಾ’ ಖ್ಯಾತಿಯ ದೀಕ್ಷಿತ್ ಶೆಟ್ಟಿ



ದೀಕ್ಷಿತ್ ಶೆಟ್ಟಿ ಹಾಗೂ ತ್ರಿಷಾ ಶರ್ಮಾ

‘ದಿಯಾ’ ಸಿನಿಮಾ ಮುಖಾಂತರ ಚಂದನವನದಲ್ಲಿ ಹೆಸರು ಮಾಡಿದ್ದ ನಟ ದೀಕ್ಷಿತ್ ಶೆಟ್ಟಿ, ಟಾಲಿವುಡ್‌ಗೆ ಕಾಲಿರಿಸಿದ್ದಾರೆ. ‘ಆಣಿ ಮುತ್ತುಗಳು’ ಚಿತ್ರದಲ್ಲಿ ನಾಯಕರಾಗಿ ದೀಕ್ಷಿತ್ ವಿಶೇಷ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಇದು ತೆಲುಗಿನಲ್ಲಿ ಸಿದ್ಧವಾಗಿರುವ ಕಾಮಿಡಿ ಮತ್ತು ಸಸ್ಪೆನ್ಸ್ ಥ್ರಿಲ್ಲರ್ ಶೈಲಿಯ ಸಿನಿಮಾವಾಗಿದೆ. ಈ ಚಿತ್ರವು ಕನ್ನಡಕ್ಕೂ ಡಬ್ ಆಗಿದೆ.

ಚಿತ್ರಮಂದಿರ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಅಚ್ಯುತ್ ರಾಮರಾವ್ ನಿರ್ಮಾಣ ಮಾಡಿರುವ ಆಣಿ ಮುತ್ತುಗಳು ಚಿತ್ರವನ್ನು ಅಭಿಷೇಕ್ ರೆಡ್ಡಿ ನಿರ್ದೇಶನ ಮಾಡಿದ್ದಾರೆ. ಮೂಗ, ಕಿವುಡ ಮತ್ತು ಕುರುಡ ಈ ಮೂವರ ಹಿನ್ನೆಲೆಯಲ್ಲಿ ಇಡೀ ಚಿತ್ರ ಸಾಗಲಿದ್ದು, ಇದರಲ್ಲಿ ಮೂಗನ ಪಾತ್ರದಲ್ಲಿ ದೀಕ್ಷಿತ್ ಶೆಟ್ಟಿ ನಟಿಸಿದ್ದಾರೆ. ಇನ್ನುಳಿದಂತೆ ಕಿವುಡನ ಪಾತ್ರದಲ್ಲಿ ಶ್ರೀನಿವಾಸ್ ರೆಡ್ಡಿ, ಕುರುಡನ ಪಾತ್ರದಲ್ಲಿ ಅಚ್ಯುತ್ ರಾಮರಾವ್ ನಟಿಸಿದ್ದಾರೆ.

ಕಾಮಿಡಿ ಜೊತೆಗೆ ರೋಚಕ ತಿರುವುಗಳುಳ್ಳ ಸಸ್ಪೆನ್ಸ್ ಕಥೆಯೂ ಈ ಚಿತ್ರದಲ್ಲಿದೆ. ಪೊಲೀಸ್ ತನಿಖೆ, ಕೊಲೆ, ಹುಡುಕಾಟ ಇವೆಲ್ಲದರ ನಡುವೆ ಮುದ್ದಾದ ಪ್ರೇಮ ಕಥೆಯೂ ಸಿನಿಮಾದಲ್ಲಿದೆ ಎನ್ನುತ್ತಾರೆ ನಿರ್ದೇಶಕರು. ಕಿವಿ ಕೇಳಿಸದ, ಮಾತು ಬಾರದ ಮತ್ತು ಕಣ್ಣು ಕಾಣದ ಮೂವರು ಈ ಚಿತ್ರದಲ್ಲಿ ಸ್ನೇಹಿತರಾಗಿ ಕಾಣಿಸಿಕೊಂಡಿದ್ದಾರೆ. ತ್ರಿಷಾ ಶರ್ಮಾ ನಾಯಕಿಯಾಗಿ ನಟಿಸಿದ್ದು, ದೀಕ್ಷಿತ್ ಶೆಟ್ಟಿಗೆ ಜೋಡಿಯಾಗಿದ್ದಾರೆ. ನಟಿ ಶ್ವೇತಾ ವರ್ಮಾ ಸಹ ಪ್ರಮುಖ ಪಾತ್ರದಲ್ಲಿದ್ದಾರೆ.

ಇನ್ನುಳಿದಂತೆ ಅಪ್ಪಾರ್ಲ ಸಾಯಿ ಕಲ್ಯಾಣ್ ಕಥೆ, ಚಿತ್ರಕಥೆ ಬರೆದರೆ, ಗರುಡವೇಗ ಅಂಜಿ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ಸುರೇಶ್ ಬೊಬ್ಬಿ ಸಂಗೀತ ನೀಡಿದ್ದಾರೆ. ಈಗಾಗಲೇ ಚಿತ್ರತಂಡವು ಚಿತ್ರಬಿಡುಗಡೆಗಿದ್ದ ಬಹುತೇಕ ಎಲ್ಲ ಕೆಲಸಗಳನ್ನು ಮುಗಿಸಿಕೊಂಡಿದ್ದು, ಲಾಕ್ಡೌನ್ ಸಡಿಲವಾಗಿ, ಸಿನಿಮಾ ಬಿಡುಗಡೆಗೆ ಅವಕಾಶ ಸಿಗುತ್ತಿದ್ದಂತೆ ಚಿತ್ರ ಕನ್ನಡ ಮತ್ತು ತೆಲುಗಿನಲ್ಲಿ ತೆರೆ ಕಾಣಲಿದೆ. ❖


ಹೈದರಾಬಾದ್‌ನಲ್ಲಿ ಕಿರುತೆರೆ ಬಿಡಾರ!

ಲಾಕ್‌ಡೌನ್‌ನಿಂದಾಗಿ ರಾಜ್ಯದಲ್ಲಿ ಸಿನಿಮಾ ಹಾಗೂ ಕಿರುತರೆ ಚಿತ್ರೀಕರಣ ಸಂಪೂರ್ಣ ಸ್ತಬ್ಧವಾಗಿದೆ. ಲಾಕ್‌ಡೌನ್ ಜೂನ್ 7ರವರೆಗೂ ವಿಸ್ತರಣೆಯಾಗಿರುವ ಕಾರಣ, ಇದೀಗ ವಾಹಿನಿಗಳಿಗೆ ಸಂಚಿಕೆಗಳ ಸಂಗ್ರಹದ(ಬ್ಯಾಂಕಿಂಗ್) ಸಮಸ್ಯೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಜೀ ಕನ್ನಡ ಹಾಗೂ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುವ ಹಲವು ಧಾರಾವಾಹಿಗಳ ತಂಡವು ಚಿತ್ರೀಕರಣಕ್ಕಾಗಿ ಹೈದರಾಬಾದ್‌ನತ್ತ ಮುಖಮಾಡಿವೆ.

ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆಯಾದಾಗ ಕೆಲ ಧಾರಾವಾಹಿ ತಂಡಗಳು ರೆಸಾರ್ಟ್‌ನಲ್ಲಿದ್ದುಕೊಂಡು ಚಿತ್ರೀಕರಣಕ್ಕೆ ಸಿದ್ಧತೆ ನಡೆಸಿದ್ದವು. ಇದಕ್ಕೆ ವಿರೋಧ ವ್ಯಕ್ತವಾದ ಕಾರಣ, ಈ ಚಿಂತನೆಯನ್ನು ತಂಡಗಳು ಕೈಬಿಟ್ಟಿದ್ದವು. ಇದೀಗ ರಾಜ್ಯದಲ್ಲಿ ಸತತ 29 ದಿನ ಲಾಕ್‌ಡೌನ್ ಇರಲಿದ್ದು, ಕೋವಿಡ್ ನಿಯಂತ್ರಣಕ್ಕೆ ಬರದೇ ಇದ್ದರೆ ಮತ್ತೆ ವಿಸ್ತರಣೆಯಾಗುವ ಸಾಧ್ಯತೆ ಇದೆ. ಹೀಗಾಗಿ, ಹೈದರಾಬಾದ್‌ನಲ್ಲಿ ಚಿತ್ರೀಕರಣಕ್ಕೆ ಅನುಮತಿ ಇರುವುದರಿಂದ ಸಣ್ಣ ತಂಡದೊಂದಿಗೆ ‘ನಾಗಿಣಿ-2’, ‘ಸತ್ಯ’, ‘ನನ್ನರಸಿ ರಾಧೆ’, ‘ಜೊತೆ ಜೊತೆಯಲಿ’ ಮುಂತಾದ ಧಾರಾವಾಹಿ ತಂಡಗಳು ಅಲ್ಲಿಗೆ ತೆರಳಿವೆ. ‘ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಕೆಲ ಧಾರಾವಾಹಿಗಳ ಬ್ಯಾಂಕಿಂಗ್ ಈ ತಿಂಗಳಾಂತ್ಯದವರೆಗಷ್ಟೇ ಇದೆ. ಲಾಕ್‌ಡೌನ್ ವಿಸ್ತರಣೆಯಾದರೆ ಸಮಸ್ಯೆ ಎದುರಾಗಲಿದೆ, ಹೀಗಾಗಿ ಆ ತಂಡಗಳು ಹೈದರಾಬಾದ್‌ಗೆ ತೆರಳಿವೆ’ ಎಂದು ಮೂಲಗಳು ತಿಳಿಸಿವೆ.

‘ಗಿಣಿರಾಮ’ ಧಾರಾವಾಹಿ ಬ್ಯಾಂಕಿಂಗ್ ಕೊರತೆಯಿಂದಾಗಿ ಕಳೆದ ವಾರ ಸಂಚಿಕೆಗಳನ್ನು ಸ್ಥಗಿತಗೊಳಿಸಿತ್ತು. ಇದೀಗ ಈ ತಂಡವೂ ಮತ್ತೆ ಚಿತ್ರೀಕರಣ ಆರಂಭಿಸಿದ್ದು, ಗುರುವಾರದಿಂದ(ಮೇ 27) ಸಂಚಿಕೆಗಳು ಪುನರಾರಂಭವಾಗಿವೆ. ❖

ಬರಗೂರರಿಗೆ ಪ್ರಶಸ್ತಿ ತಂದ ‘ಅಮೃತಮತಿ’



ಬರಗೂರು ರಾಮಚಂದ್ರಪ್ಪ

ಬರಗೂರು ರಾಮಚಂದ್ರಪ್ಪ ನಿರ್ದೇಶನದ ‘ಅಮೃತಮತಿ’ ಚಿತ್ರವು ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದಿದೆ. ಕನ್ನಡ ಚಿತ್ರವೊಂದು ಇಷ್ಟೊಂದು ಮನ್ನಣೆ ಗಳಿಸುತ್ತಿರುವುದು ಇದೇ ಮೊದಲು.

ಜೊತೆಗೆ ಚಿತ್ರಕಥೆ (ಸ್ಕ್ರಿಪ್ಟ್) ರಚನೆಗಾಗಿ ನಿರ್ದೇಶಕ ಬರಗೂರು ರಾಮಚಂದ್ರಪ್ಪ ವೈಯಕ್ತಿಕ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಕವಿ ಜನ್ನನಿಂದ ರಚಿತವಾದ ‘ಯಶೋಧರ ಚರಿತೆ’ ಕಾವ್ಯವನ್ನು ಆಧರಿಸಿ ರಚಿಸಿದ ಈ ಚಿತ್ರವು, ಹತ್ತು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಇತ್ತೀಚಿನ ದಿನಗಳಲ್ಲಿ ಆಯ್ಕೆಯಾಗಿದೆ.

‘ನಾನು ನಿರ್ದೇಶಿಸಿದ ಕೆಲವು ಚಿತ್ರಗಳು ‘ಉತ್ತಮ ಚಿತ್ರ’ ಪ್ರಶಸ್ತಿ ಪಡೆದಿವೆ. ನಿರ್ದೇಶನಕ್ಕಾಗಿ ನೀಡುವ ರಾಜ್ಯದ ಉನ್ನತ ಮನ್ನಣೆಯಾದ ‘ಪುಟ್ಟಣ್ಣ ಕಣಗಾಲ್’ಪ್ರಶಸ್ತಿಯೂ ನನಗೆ ಲಭಿಸಿದೆ. ನಾನು ರಚಿಸಿದ ಕತೆ, ಗೀತೆ, ಸಂಭಾಷಣೆಗಳಿಗೂ ಪ್ರಶಸ್ತಿಗಳು ಲಭಿಸಿವೆ. ಆದರೆ, ಇಲ್ಲಿಯವರೆಗೆ ನನ್ನ ಚಿತ್ರಕಥೆಗೆ ಪ್ರಶಸ್ತಿ ಬಂದಿರಲಿಲ್ಲ. ಮೊತ್ತಮೊದಲ ಬಾರಿಗೆ ಚಿತ್ರಕಥೆಗಾಗಿ ನನಗೆ ಪ್ರಶಸ್ತಿ ಬಂದಿರುವುದು ಸಂತೋಷವಾಗಿದೆ’ ಎಂದು ಪ್ರತಿಕ್ರಿಯಿಸುತ್ತಾರೆ ಬರಗೂರು.

‘ಈ ಪ್ರಶಸ್ತಿಯನ್ನು ಚಿತ್ರತಂಡಕ್ಕೆ ಅರ್ಪಿಸುತ್ತೇನೆ. ಈ ಮೂಲಕ ಇಡೀ ಚಿತ್ರತಂಡದ ಸಹಕಾರವನ್ನು ಗೌರವಿಸುತ್ತೇನೆ. ಮುಂಬೈನ ಸಂಸ್ಥೆಯೊಂದು ಪ್ರದರ್ಶನದ ಹಕ್ಕುಗಳನ್ನು ಪಡೆದಿದ್ದು, ಕೋವಿಡ್ ಪರಿಸ್ಥಿತಿ ತಿಳಿಯಾದ ಬಳಿಕ ಮೇಲೆ ಚಿತ್ರವು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ’ ಎಂದು ಅವರು ಹೇಳುತ್ತಾರೆ.

ಚಿತ್ರವು ‘ಇಂಚರ ಪುಟ್ಟಣ್ಣ ಪ್ರೊಡಕ್ಷನ್’ ಸಂಸ್ಥೆಯ ಪುಟ್ಟಣನವರಿಂದ ನಿರ್ಮಾಣಗೊಂಡಿದ್ದು, ಚಿತ್ರದಲ್ಲಿ ಯಶೋಧರನ ಪಾತ್ರದಲ್ಲಿ ನಟ ಕಿಶೋರ್ ನಟಿಸಿದ್ದಾರೆ. ಹಿರಿಯ ನಟ ಸುಂದರ್ ರಾಜ್, ಪ್ರಮೀಳಾ ಜೋಷಾಯ್, ತಿಲಕ್, ಸುಪ್ರಿಯಾ ರಾವ್, ವತ್ಸಲಾ ಮೋಹನ್, ಅಂಬರೀಷ್ ಸಾರಂಗಿ, ಭೂಮಿಕಾ ಲಕ್ಷ್ಮಿನಾರಾಯಣ ತಾರಾಗಣವಿದೆ. ❖

ಕಿರುತೆರೆ



ಜೀ ಕನ್ನಡದಲ್ಲಿ ವಾರಾಂತ್ಯದ ‘ಮಹಾಸಂಭ್ರಮ’

ಲಾಕ್‌ಡೌನ್‌ನಿಂದಾಗಿ ಮನೆಯಲ್ಲೇ ಇರುವ ಜನರಿಗೆ ಮನರಂಜನೆಯ ಭರಪೂರ ಔತಣ ನೀಡಲು ಜೀ ಕನ್ನಡ ವಾಹಿನಿ ಸಜ್ಜಾಗಿದ್ದು, ಇದೇ ಶನಿವಾರ ಹಾಗೂ ಭಾನುವಾರ ಸಂಜೆ 7.30ಕ್ಕೆ ತನ್ನ ಜನಪ್ರಿಯ ರಿಯಾಲಿಟಿ ಶೋಗಳಾದ ‘ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್’ ಹಾಗೂ ‘ಕಾಮಿಡಿ ಕಿಲಾಡಿಗಳು’ ಎರಡೂ ಕಾರ್ಯಕ್ರಮಗಳ ‘ಮಹಾಸಂಭ್ರಮ’ ಪ್ರಸಾರವಾಗಲಿದೆ.

ಲಾಕ್‌ಡೌನ್ ಕಾರಣದಿಂದಾಗಿ ಬಹುತೇಕ ವಾಹಿನಿಗಳಲ್ಲಿ ಧಾರಾವಾಹಿಗಳ ಮರುಪ್ರಸಾರವಾಗುತ್ತಿದೆ. ‘ಜೀ ಕನ್ನಡ ಆರಂಭದಿಂದಲೂ ವೀಕ್ಷಕರಿಗೆ ವಿಶೇಷ ಮನರಂಜನೆಯ ಕಾರ್ಯಕ್ರಮಗಳನ್ನು ನೀಡುತ್ತಿದೆ. ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್‌ನ ಅದ್ಭುತ ನೃತ್ಯ, ಸರಿಗಮಪದ ಅದ್ಭುತ ಸಂಗೀತ ಕಾರ್ಯಕ್ರಮ ಹಾಗೂ ವಿನೋದಮಯ ಕಾಮಿಡಿ ಕಿಲಾಡಿಗಳು ವೀಕ್ಷಕರನ್ನು ರಂಜಿಸಿವೆ. ಪ್ರತೀ ವಾರ ವಿನೂತನ ಬಗೆಯ ಕಾರ್ಯಕ್ರಮಗಳನ್ನು ರೂಪಿಸುವ ವಾಹಿನಿಯು ಈ ಬಾರಿ ಮೂರು ಜನಪ್ರಿಯ ರಿಯಾಲಿಟಿ ಶೋಗಳ ಪ್ರತಿಭೆಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿದೆ’ ಎಂದು ತಂಡವು ತಿಳಿಸಿದೆ.


ವಾರಾಂತ್ಯದ ಭರಪೂರ ರಂಜನೆಗೆ ಅನುಶ್ರೀ ಹಾಗೂ ಆನಂದ್ ಅವರ ನಿರೂಪಣೆ ಮೆರುಗು ಹೆಚ್ಚಿಸಲಿದೆ. ಲಾಕ್‌ಡೌನ್ ಸಮಯದಲ್ಲಿ ಮನೆಯಲ್ಲಿ ಕಾಲ ಕಳೆಯುತ್ತಿರುವ ಜನರಿಗೆ ಭರ್ಜರಿ ಮನರಂಜನೆಯ ಭರವಸೆಯನ್ನು ವಾಹಿನಿಯು ನೀಡಿದೆ. ❖

ಬಿಡುಗಡೆಗೆ ಮುನ್ನವೇ ‘ಫ್ಯಾಮಿಲಿ ಮ್ಯಾನ್ 2’ ವಿವಾದ

ವಾರದ ಹಿಂದೆಯಷ್ಟೇ ಅಮೆಜಾನ್ ಪ್ರೈಂ ತನ್ನ ಅತ್ಯಂತ ಯಶಸ್ವಿ ವೆಬ್‌ಸರಣಿ ರಾಜ್ ಮತ್ತು ಡಿ.ಕೆ ನಿರ್ದೇಶನದ ‘ದಿ ಫ್ಯಾಮಿಲಿ ಮ್ಯಾನ್’ ಎರಡನೇ ಭಾಗದ ಟ್ರೇಲರ್ ಬಿಡುಗಡೆಗೊಳಿಸಿತು. ಈ ಟ್ರೇಲರ್ ಬಿಡುಗಡೆಯಾದ ನಾಲ್ಕೇ ದಿನಕ್ಕೆ ಯೂಟ್ಯೂಬ್‌ನಲ್ಲಿ 4 ಕೋಟಿ ವ್ಯೂವ್ಸ್ ಪಡೆದಿತ್ತು. ಜೂನ್ 4ರಂದು ಬಿಡುಗಡೆಯಾಗಲಿರುವ ಈ ವೆಬ್‌ಸರಣಿಗೆ ಜನ ಎಷ್ಟರ ಮಟ್ಟಿಗೆ ಕಾಯುತ್ತಿದ್ದಾರೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿತ್ತು. ಇಷ್ಟೊಂದು ನಿರೀಕ್ಷೆಯ ಮನೋಜ್ ಬಾಜಪೇಯಿ, ಪ್ರಿಯಾಮಣಿ ಹಾಗೂ ಸಮಂತಾ ಅಭಿನಯದ ಈ ವೆಬ್‌ಸರಣಿಗೆ ಇದೀಗ ನಿಷೇಧದ ಭೀತಿ ಎದುರಾಗಿದೆ.

‘ದಿ ಫ್ಯಾಮಿಲಿ ಮ್ಯಾನ್’ 2ನೇ ಭಾಗದ ವೆಬ್‌ಸರಣಿಯಲ್ಲಿ ಈಲಂ ತಮಿಳರನ್ನು ಅತ್ಯಂತ ಆಕ್ಷೇಪಾರ್ಹ ರೀತಿಯಲ್ಲಿ ಬಿಂಬಿಸಲಾಗಿದೆ. ಈ ಕಾರಣದಿಂದ ಈ ವೆಬ್‌ಸರಣಿಯ ಬಿಡುಗಡೆಯನ್ನು ತಕ್ಷಣವೇ ತಡೆಯಬೇಕು ಅಥವಾ ನಿಷೇಧಿಸಬೇಕು’ ಎಂದು ಕೋರಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ. ಜೊತೆಗೆ ತಮಿಳುನಾಡಿನ ಹಲವು ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳು ಈ ವೆಬ್‌ಸರಣಿಯನ್ನು ವಿರೋಧಿಸಿವೆ.

‘ಈ ವೆಬ್‌ಸರಣಿಯಲ್ಲಿ ಖಂಡನಾರ್ಹ, ಅಸಂಬದ್ಧ ಹಾಗೂ ದ್ವೇಷಪೂರ್ಣವಾದ ವಿಷಯಗಳಿದ್ದು, ಶ್ರೀಲಂಕಾದಲ್ಲಿ ಈಲಂ ತಮಿಳರ ಐತಿಹಾಸಿಕ ಸಂಘರ್ಷಕ್ಕೆ ಕಳಂಕ ತರುವ ಹಾಗೂ ಅದನ್ನು ತಿರುಚುವ ಗುರಿಯೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಈ ಟ್ರೇಲರ್ ಬಿಡುಗಡೆಗೊಳಿಸಲಾಗಿದೆ’ ಎಂದು ತಮಿಳುನಾಡು ಐ.ಟಿ ಸಚಿವ ಟಿ.ಮನೋ ತಂಗರಾಜ್ ಹೇಳಿದ್ದಾರೆ.



‘ದಿ ಫ್ಯಾಮಿಲಿ ಮ್ಯಾನ್’ ಪೋಸ್ಟರ್

‘ಈ ಸರಣಿಯು ಈಲಂ ತಮಿಳರ ಭಾವನೆಗಳಿಗೆ ಧಕ್ಕೆ ತಂದಿರುವುದಲ್ಲದೆ ತಮಿಳುನಾಡು ಜನತೆಯ ಭಾವನೆಗಳನ್ನೂ ನೋಯಿಸಿದೆ. ಈ ಸರಣಿಯ ಪ್ರಸಾರಕ್ಕೆ ಅವಕಾಶ ನೀಡಿದರೆ, ರಾಜ್ಯದಲ್ಲಿನ ಸಾಮರಸ್ಯಕ್ಕೆ ಘಾತಕವಾಗಲಿದೆ’ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಅವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಆದರೆ, ಈ ಎಲ್ಲ ಆರೋಪಗಳನ್ನು ಅಲ್ಲಗಳೆದಿರುವ ‘ದಿ ಫ್ಯಾಮಿಲಿ ಮ್ಯಾನ್’ ನಿರ್ದೇಶಕರು, ‘ಟ್ರೇಲರ್‌ನಲ್ಲಿರುವ ಕೆಲ ದೃಶ್ಯಗಳನ್ನಷ್ಟೇ ಆಧಾರವಾಗಿರಿಸಿಕೊಂಡು ಕೆಲ ಊಹೆ ಹಾಗೂ ಅನಿಸಿಕೆಗಳನ್ನು ವ್ಯಕ್ತಪಡಿಸಲಾಗಿದೆ. ಈ ಸರಣಿಯಲ್ಲಿನ ಬಹುತೇಕ ಪ್ರಮುಖ ಕಲಾವಿದರು ಹಾಗೂ ಕ್ರಿಯೇಟಿವ್ ಮತ್ತು ಚಿತ್ರಕತೆ ತಂಡದಲ್ಲಿ ಇರುವವರು ತಮಿಳುನಾಡಿನವರು. ತಮಿಳು ಭಾಷಿಗರ ಭಾವನೆ ಹಾಗೂ ಅಲ್ಲಿನ ಸಂಸ್ಕೃತಿಯ ಬಗ್ಗೆ ನಮಗೆ ಅರಿವಿದೆ. ಜೊತೆಗೆ ತಮಿಳುನಾಡಿನ ಜನರ ಬಗ್ಗೆ ಅಪಾರ ಗೌರವವಿದೆ. ಈ ಸರಣಿಗಾಗಿ ಹಲವು ವರ್ಷಗಳ ಶ್ರಮವನ್ನು ಹಾಕಿದ್ದೇವೆ. ಈ ಚಿತ್ರಕತೆಯನ್ನು ವೆಬ್‌ಸರಣಿಯಾಗಿ ಪ್ರೇಕ್ಷಕರ ಮುಂದೆ ತರಲು ಹಲವು ಸಂಕಷ್ಟಗಳನ್ನು ಎದುರಿಸಿದ್ದೇವೆ. ಈ ವೆಬ್‌ಸರಣಿ ಬಿಡುಗಡೆಗೆ ಕಾಯಿರಿ ಹಾಗೂ ಅದನ್ನು ವೀಕ್ಷಿಸಿ. ಇದನ್ನು ವೀಕ್ಷಿಸಿದ ಬಳಿಕ ಖಂಡಿತವಾಗಿಯೂ ಮೆಚ್ಚಿಕೊಳ್ಳುತ್ತೀರಿ’ ಎಂದು ಹೇಳಿದ್ದಾರೆ. ❖



❦ ಸುಭಾಷಿತ ❦

ನೀವು ಶಾಂತಿಯಿಂದ ಸ್ವಾತಂತ್ರ್ಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಏಕೆಂದರೆ ಸ್ವಾತಂತ್ರ್ಯ ಇಲ್ಲದಿದ್ದರೆ ಯಾರಾದರೂ ಶಾಂತಿಯಿಂದ ಇರುವುದು ಅಸಾಧ್ಯ.

-ಮ್ಯಾಲ್ಕಮ್ ಎಕ್ಸ್

ಟ್ವಿಟರ್ ಮೇಲೆ ಒತ್ತಡ ಹೇರಿಕೆ ಸರ್ವಾಧಿಕಾರಿ ಧೋರಣೆ ಸಲ್ಲದು

ಸರ್ಕಾರ ಮತ್ತು ಅಧಿಕಾರಸ್ಥ ಪಕ್ಷದ ನಾಯಕರು ತಮ್ಮ ಇಚ್ಛೆಯಂತೆಯೇ ಎಲ್ಲವೂ ನಡೆಯಬೇಕು ಎಂದು ಹಟ ಹಿಡಿಯಲು ತೊಡಗಿದರೆ ವ್ಯವಸ್ಥೆಯು ನಿರಂಕುಶ ಆಧಿಪತ್ಯವಾಗುತ್ತದೆ. ನೋಟು ರದ್ದತಿ, ಪೌರತ್ವ ತಿದ್ದುಪಡಿ ಕಾಯ್ದೆ, ಕೃಷಿ ಕಾಯ್ದೆಗಳು, ರೈತರ ಪ್ರತಿಭಟನೆ, ಇದಕ್ಕೆ ಸಂಬಂಧಿಸಿ ಪ್ರಕಟವಾದ ಟೂಲ್‌ಕಿಟ್ ಸೇರಿ ಹಲವು ವಿಚಾರಗಳಲ್ಲಿ ಕೇಂದ್ರ ಸರ್ಕಾರವು ಹಟಮಾರಿ ಧೋರಣೆ ಪ್ರದರ್ಶಿಸಿದೆ. 'ಕಾಂಗ್ರೆಸ್ ಟೂಲ್‌ಕಿಟ್' ವಿಷಯದಲ್ಲಿಯೂ ಕೇಂದ್ರ ಸರ್ಕಾರ ಮತ್ತು ಬಿಜೆಪಿಯು ಎಲ್ಲವೂ ತಮ್ಮ ಮೂಗಿನ ನೇರಕ್ಕೇ ಇರಲಿ ಎಂಬಂತೆ ನಡೆದುಕೊಂಡಿವೆಯೇ ಎಂಬ ಅನುಮಾನ ಮೂಡುತ್ತದೆ. ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು 'ಕಾಂಗ್ರೆಸ್ ಟೂಲ್‌ಕಿಟ್' ಅನ್ನು ಲಗತ್ತಿಸಿ ಮಾಡಿರುವ ಟ್ವೀಟ್‌ಗೆ 'ತಿರುಚಿದ ದಾಖಲೆ' ಎಂಬ ಹಣೆಪಟ್ಟಿಯನ್ನು ಟ್ವಿಟರ್ ಅಂಟಿಸಿದೆ. ಸಾಮಾಜಿಕ ಜಾಲತಾಣ ಸಂಸ್ಥೆ ಟ್ವಿಟರ್ ಇಂತಹ ಕ್ರಮ ಕೈಗೊಂಡಿದ್ದು ಇದೇ ಮೊದಲೇನೂ ಅಲ್ಲ. ಸುಳ್ಳು ಮತ್ತು ಆಕ್ಷೇಪಾರ್ಹವಾದ ಟ್ವೀಟ್‌ಗಳನ್ನು ಅಳಿಸಿ ಹಾಕಿದ, ಹಣೆಪಟ್ಟಿ ಅಂಟಿಸಿದ ಹಲವು ಪ್ರಕರಣಗಳು ಇವೆ. ಖಾತೆಯನ್ನು ಶಾಶ್ವತವಾಗಿ ಸ್ಥಗಿತಗೊಳಿಸಿದ ಉದಾಹರಣೆಯೂ ಇದೆ. ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ಕುಗ್ಗಿಸಲು ಮತ್ತು ಸರ್ಕಾರದ ಕೋವಿಡ್ ನಿರ್ವಹಣೆಯನ್ನು ಟೀಕಿಸುವುದಕ್ಕಾಗಿ ಕಾಂಗ್ರೆಸ್ ಪಕ್ಷವು ರೂಪಿಸಿದೆ ಎನ್ನಲಾದ ಟೂಲ್‌ಕಿಟ್ ಅನ್ನು ಪಾತ್ರಾ ಅವರು ಇದೇ 18ರಂದು ಟ್ವೀಟ್‌ಗೆ ಲಗತ್ತಿಸಿದ್ದರು. ತಂತ್ರಜ್ಞಾನ ಬಳಸಿ ನಡೆಸಿದ ಆಂತರಿಕ ತನಿಖೆ ಮತ್ತು ಹೊರಗಿನ ಪರಿಣತರ ಅಭಿಪ್ರಾಯ ಪಡೆದುಕೊಂಡು ಈ ಟೂಲ್‌ಕಿಟ್ ನಕಲಿ ಎಂದು ಟ್ವಿಟರ್ ಕಂಡುಕೊಂಡಿದೆ. ಕಾಂಗ್ರೆಸ್ ಪಕ್ಷವು ನೀಡಿದ ದೂರಿನಂತೆ ಪಾತ್ರಾ ಮತ್ತು ರವಿ ಅವರ ಟ್ವೀಟ್‌ಗಳನ್ನು 'ತಿರುಚಿದ ಮಾಹಿತಿ' ವರ್ಗಕ್ಕೆ ಸೇರಿಸಿದೆ. ಜಾಲತಾಣಗಳಲ್ಲಿ ಪ್ರಕಟವಾಗುವ ವಿಚಾರಗಳ ಸತ್ಯಾಸತ್ಯತೆ ಪರಿಶೀಲಿಸುವ ಹಲವು ವೇದಿಕೆಗಳು ಕೂಡ 'ಟೂಲ್‌ಕಿಟ್ ನಕಲಿ' ಎಂಬ ತೀರ್ಮಾನಕ್ಕೆ ಬಂದಿವೆ.



ಸಹಿಷ್ಣುತೆಯ ವಿಚಾರದಲ್ಲಿ ಸರ್ಕಾರ ಮತ್ತು ಆಡಳಿತ ಪಕ್ಷವು ಇತರರಿಗೆ ಮಾದರಿಯಾಗಬೇಕು

ಆದರೆ, ಸರ್ಕಾರ ಇದು ಯಾವುದನ್ನೂ ಗಣನೆಗೆ ತೆಗೆದುಕೊಂಡಿಲ್ಲ. ತಿರುಚಿದ ಮಾಹಿತಿ ಎಂಬ ಹಣೆಪಟ್ಟಿಯನ್ನು ತೆಗೆಯಿರಿ ಎಂದು ಟ್ವಿಟರ್ ಮೇಲೆ ಒತ್ತಡ ಹೇರಿದ ಸರ್ಕಾರದ ಕ್ರಮ ಸರಿಯಾದುದಲ್ಲ. ಬಳಿಕ, ಟೂಲ್‌ಕಿಟ್ 'ತಿರುಚಿದ ಮಾಹಿತಿ' ಎಂಬ ನಿರ್ಧಾರಕ್ಕೆ ಬರಲು ಕಾರಣವೇನು ತಿಳಿಸಿ ಎಂದು ದೆಹಲಿ ಪೊಲೀಸರು ಟ್ವಿಟರ್‌ಗೆ ನೋಟಿಸ್ ನೀಡಿದ್ದಾರೆ. ದೆಹಲಿ ಮತ್ತು ಗುರುಗ್ರಾಮದಲ್ಲಿರುವ ಟ್ವಿಟರ್ ಕಚೇರಿಗೆ ಪೊಲೀಸರ ತಂಡವು ಭೇಟಿ ಕೊಟ್ಟು ನೋಟಿಸ್ ನೀಡಿದೆ. ಕಚೇರಿಯಲ್ಲಿ ಶೋಧ ನಡೆಸಲಾಗಿದೆ ಎಂದೂ ಹೇಳಲಾಗುತ್ತಿದೆ. 'ಪೊಲೀಸರ ಹೆದರಿಸುವ ತಂತ್ರ'ದ ಬಗ್ಗೆ ಟ್ವಿಟರ್ ಕಳವಳ ವ್ಯಕ್ತಪಡಿಸಿದೆ. ತನ್ನ ಗ್ರಾಹಕರ ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಬಗ್ಗೆ ಆತಂಕ ಇದೆ ಎಂದಿದೆ. ಜಾಗತಿಕ ಮಟ್ಟದಲ್ಲಿ ಅನುಸರಿಸಲಾಗುತ್ತಿರುವ ನಿಯಮಗಳ ಜಾರಿಗೆ ಅಡ್ಡಿಪಡಿಸಿರುವುದು ಕಳವಳ ಮೂಡಿಸಿದೆ ಎಂದು ಹೇಳಿದೆ. ಸರ್ಕಾರದ ನಡವಳಿಕೆಯ ಹಿನ್ನೆಲೆಯಲ್ಲಿ ನೋಡಿದರೆ ಟ್ವಿಟರ್‌ನ ಈ ಹೇಳಿಕೆಯಲ್ಲಿ ಉತ್ಪ್ರೇಕ್ಷೆ ಇದೆ ಎಂದು ಅನ್ನಿಸುವುದಿಲ್ಲ. ಸರ್ಕಾರದ ನಡವಳಿಕೆಯು ಜಾಗತಿಕ ಮಟ್ಟದಲ್ಲಿ ಭಾರತದ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಬಹುದು. ಸಹಿಷ್ಣುತೆಯ ವಿಚಾರದಲ್ಲಿ ಸರ್ಕಾರ ಮತ್ತು ಆಡಳಿತ ಪಕ್ಷವು ಇತರರಿಗೆ ಮಾದರಿಯಾಗಬೇಕು. ಆದರೆ, ತನ್ನತ್ತ ಬೆರಳು ತೋರಿದವರನ್ನು ನುಂಗಿ ಬಿಡುವ ಮನೋಭಾವ ಪ್ರದರ್ಶನವು ದೇಶದಲ್ಲಿ ಭೀತಿಯ ವಾತಾವರಣ ಸೃಷ್ಟಿಸುತ್ತದೆ ಎಂಬ ಎಚ್ಚರ ಸರ್ಕಾರ ನಡೆಸುವವರಿಗೆ ಬೇಕು. ಅಷ್ಟಕ್ಕೂ ಇದು ಪ್ರಜಾಪ್ರಭುತ್ವವೇ ಹೊರತು ಏಕಚಕ್ರಾಧಿಪತ್ಯ ಅಲ್ಲ. ಇನ್ನೂ ಒಂದು ವಿಚಾರ. ಇದು ಟೂಲ್‌ಕಿಟ್ ಮತ್ತು ಟ್ವಿಟರ್ ಎಂದು ಹೇಳಿಕೊಂಡು ಆಟವಾಡಿಕೊಂಡಿರಬಹುದಾದ ಸಂದರ್ಭವೇ ಅಲ್ಲ. ಕೋವಿಡ್–19 ಪಿಡುಗಿನಿಂದ ದೇಶದ ಜನರು ತಲ್ಲಣಿಸಿದ್ದಾರೆ. ಜನರ ಜೀವ, ಜೀವನೋಪಾಯ ರಕ್ಷಣೆಯ ಬಗ್ಗೆಯೇ ಸರ್ಕಾರ ಹಗಲಿರುಳು ಯೋಚಿಸಬೇಕು. ಇಂತಹ ಹೊತ್ತಿನಲ್ಲಿಯೂ ವಿರೋಧ ಪಕ್ಷವನ್ನು ಹಣಿಯಬೇಕು, ಸಾಮಾಜಿಕ ಜಾಲತಾಣ ಸಂಸ್ಥೆಗಳು ತಾನು ಹೇಳಿದಂತೆ ಕುಣಿಯಬೇಕು ಎಂಬುದರತ್ತಲೇ ಸರ್ಕಾರವು ಗಮನ ಕೇಂದ್ರೀಕರಿಸುವುದು ಪ್ರಮಾದ. ಸುಭಿಕ್ಷದ ಕಾಲದಲ್ಲಿಯೂ ತೋರಬಾರದ ನಡವಳಿಕೆಯನ್ನು ಈಗಿನ ವಿಷಮ ಕಾಲಘಟ್ಟದಲ್ಲಿ ಸರ್ಕಾರ ತೋರಬಾರದು.

ದಿನದ ಟ್ವೀಟ್

ಸಂಪನ್ಮೂಲ ಒದಗಿಸಿ



ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಭಾರತೀಯ ಭಾಷೆಗಳಲ್ಲಿ ಕಲಿಸಲು ಸರ್ಕಾರ ಮುಂದಾಗಿರುವುದು ಬಹಳ ಒಳ್ಳೆಯ ಉಪಕ್ರಮ. ಆದರೆ ನಿಯಮ ರೂಪಿಸಿ, ಅಂಗೀಕರಿಸಿದರಷ್ಟೇ ಸಾಲದು. ಏಕೆಂದರೆ ಈ ಕ್ಷೇತ್ರವು ಇತರ ಕ್ಷೇತ್ರಗಳಂತೆ ಅಲ್ಲ. ಇದನ್ನು ಜಾರಿಗೆ ತರುವ ಮುನ್ನ ಸರ್ಕಾರವು ಸಂಪನ್ಮೂಲಗಳನ್ನು ಒದಗಿಸಬೇಕು ಮತ್ತು ಇತರ ಹೊಣೆಗಾರಿಕೆಗಳನ್ನು ನಿರ್ವಹಿಸಬೇಕು.

ವೇದಮೂರ್ತಿ, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 28-5-1996

• **ವಿಶ್ವಾಸ ನಿರ್ಣಯ: ಇಂದು ಮತದಾನ**

ನವದೆಹಲಿ, ಮೇ 27 (ಪಿಟಿಐ)– ಹನ್ನೊಂದು ದಿನಗಳ ಹಿಂದೆ ಅಧಿಕಾರಕ್ಕೆ ಬಂದ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಇಂದು ಲೋಕಸಭೆಯಲ್ಲಿ ವಿಶ್ವಾಸಮತ ನಿರ್ಣಯ ಮಂಡಿಸಿತು. ನಿರ್ಣಯದ ಮೇಲಿನ ಚರ್ಚೆ ಅಪೂರ್ಣಗೊಂಡಿದ್ದು ನಾಳೆ ಮಧ್ಯಾಹ್ನ 1.30ಕ್ಕೆ ಇದನ್ನು ಮತಕ್ಕೆ ಹಾಕುವುದರೊಂದಿಗೆ ಬಿಜೆಪಿ– ಶಿವಸೇನೆ ನೇತೃತ್ವದ ಸರ್ಕಾರದ ಭವಿಷ್ಯ ನಿರ್ಧಾರವಾಗಲಿದೆ.

ತಮ್ಮ ಸರ್ಕಾರಕ್ಕೆ ಸದನದಲ್ಲಿ ಅಗತ್ಯ ಸಂಖ್ಯಾಬಲ ಇಲ್ಲ ಎಂಬುದನ್ನು ಪ್ರಧಾನಿ ವಾಜಪೇಯಿ ಒಪ್ಪಿಕೊಂಡರೆ, ಸರ್ಕಾರವನ್ನು ಸಾಧ್ಯವಾದಷ್ಟು ಬೇಗ ಪದಚ್ಯುತಗೊಳಿಸುವ ತನ್ನ ದೃಢ ನಿರ್ಧಾರವನ್ನು ಸಂಯುಕ್ತ ರಂಗ ಪುನರುಚ್ಚರಿಸಿದೆ.

• **ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ?**

ನವದೆಹಲಿ, ಮೇ 27– ಕರ್ನಾಟಕದ ಹಣಕಾಸು ಸಚಿವ ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗುವ ಬಗ್ಗೆ ರಾಜಕೀಯ ವಲಯದಲ್ಲಿ ತೀವ್ರ ಮಾತುಕತೆ ನಡೆದಿದೆ.

ದೆಹಲಿ ಕರ್ನಾಟಕ ಭವನದಲ್ಲಿ ಇಂದು ತೀವ್ರ ರಾಜಕೀಯ ಚಟುವಟಿಕೆ. ನಾಳೆ ಎಚ್.ಡಿ.ದೇವೇಗೌಡ ಅವರು ಪ್ರಧಾನ ಮಂತ್ರಿಗಳಾಗುವ ವಿಷಯ ಖಚಿತವಾಗುತ್ತಿದ್ದಂತೆಯೇ, ಚಿತ್ತವು ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಯಾರು ಎಂಬುದರ ಕಡೆ ಹೊರಳಿತು. ಎಂ.ಪಿ. ಪ್ರಕಾಶ್ ಉಪಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ.

50 ವರ್ಷಗಳ ಹಿಂದೆ

ಶುಕ್ರವಾರ, 28-5-1971

• **ಗರ್ಭಪಾತ ಕಾನೂನುಬದ್ಧ ರಾಜ್ಯಸಭೆ ಅಂಗೀಕಾರ**

ನವದೆಹಲಿ, ಮೇ 27– ಗರ್ಭಪಾತವನ್ನು ಕಾನೂನುಬದ್ಧವಾಗಿ ಮಾಡುವ ಮಸೂದೆಯನ್ನು ರಾಜ್ಯಸಭೆ ಇಂದು ಅಂಗೀಕರಿಸಿತು.

ಮಸೂದೆಯು ಸಭೆಯಲ್ಲಿ ಜನಸಂಘ ಮತ್ತು ಸ್ವತಂತ್ರ ಪಕ್ಷಗಳನ್ನು ಬಿಟ್ಟು ಮಿಕ್ಕ ಎಲ್ಲಾ ವರ್ಗದವರ ಬೆಂಬಲ ಗಳಿಸಿತು.

ಮಸೂದೆ ಮೇಲೆ ನಡೆದ ಚರ್ಚೆ ಸಮಯದಲ್ಲಿ ಶ್ರೀ ಎ.ಡಿ.ಮಣಿ (ಪಕ್ಷೇತರ ಸದಸ್ಯ) ಅವರು ಮಾತನಾಡುತ್ತ, ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಗರ್ಭಪಾತ ಚಿಕಿತ್ಸೆ ನಡೆಸಬೇಕೆಂದು ತಿಳಿಸಿದರು.

ಶ್ರೀಮತಿ ಪೂರಬಿ ಮುಖರ್ಜಿ (ಆಡಳಿತ ಕಾಂಗ್ರೆಸ್) ಅವರು, ಕುಟುಂಬ ಯೋಜನೆಯ ಕ್ರಮವಾಗಿ ಗರ್ಭಪಾತ ಚಿಕಿತ್ಸೆ ನಡೆಸುವುದರ ವಿರುದ್ಧ ಎಚ್ಚರಿಕೆ ನೀಡಿದರು. ಕಾನೂನಿಗೆ ಬದ್ಧವಾಗಿರಲು ಒಪ್ಪಿಕೊಂಡ ಪಕ್ಷದಲ್ಲಿ ಖಾಸಗಿ ಆಸ್ಪತ್ರೆಗಳಿಗೂ ಗರ್ಭಪಾತ ಚಿಕಿತ್ಸೆ ನಡೆಸಲು ಅವಕಾಶ ನೀಡಬೇಕೆಂದರು.

• **ರಾಜ್ಯಪಾಲರ ನೇಮಕ: ರಾಜ್ಯ ಸಂಪುಟ ಸಮಾಲೋಚನೆಗೆ ಸಲಹೆ**

ಮದ್ರಾಸ್, ಮೇ 27– ರಾಜ್ಯ ಸಂಪುಟ ಮತ್ತು ರಾಜ್ಯದ ಉನ್ನತ ಅಧಿಕಾರಿಯ ನಡುವೆ ಸೌಹಾರ್ದಯುತ ಸಂಬಂಧ ಇರುವಂತೆ ಮಾಡಲು ರಾಜ್ಯಪಾಲರ ನೇಮಕದ ವಿಚಾರದಲ್ಲಿ ರಾಜ್ಯ ಸಂಪುಟದ ಜೊತೆ ಸಮಾಲೋಚಿಸುವುದು ಸೂಕ್ತ ಮತ್ತು ಅಗತ್ಯ ಎಂದು ತಮಿಳುನಾಡು ಸರ್ಕಾರ ರಚಿಸಿದ ಕೇಂದ್ರ–ರಾಜ್ಯಗಳ ಸಂಬಂಧ ಕುರಿತ ಸಮಿತಿ ಶಿಫಾರಸು ಮಾಡಿದೆ.

ಅಥವಾ ಉನ್ನತಾಧಿಕಾರಿ ಸಮಿತಿಯೊಂದಿಗೆ ರಾಷ್ಟ್ರಪತಿಗಳು ಸಮಾಲೋಚಿಸಿದ ನಂತರ ನೇಮಿಸಬೇಕು ಎಂದೂ ಸಮಿತಿಯು ಸಲಹೆ ಮಾಡಿದೆ.

ಪ್ಯಾಲೆಸ್ಟೀನ್– ಇಸ್ರೇಲ್ ಸಮಸ್ಯೆಗೆ ಶಾಂತಿಯುತ ಸಹಬಾಳ್ವೆಯಿಂದಷ್ಟೇ ಶಾಶ್ವತ ಪರಿಹಾರ

ಇಸ್ರೇಲ್: ಸತ್ಯಕ್ಕೆ ಎರಡು ಮುಖ



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಇಸ್ರೇಲ್ ಅಸಾಮಾನ್ಯ ರಾಷ್ಟ್ರ. ಅದರ ಭೌಗೋಳಿಕ ಕ್ಷೇತ್ರ ವ್ಯಾಪ್ತಿಯು ಕರ್ನಾಟಕದ ಎಂಟನೇ ಒಂದು ಭಾಗ ಮಾತ್ರ. ಜನಸಂಖ್ಯೆಯು ಬೆಂಗಳೂರಿನ ಜನಸಂಖ್ಯೆಗಿಂತ ಕಡಿಮೆ. ಆದರೂ ಕೃಷಿ, ಉದ್ಯೋಗ, ವಿಜ್ಞಾನ- ತಂತ್ರಜ್ಞಾನದಲ್ಲಿ ಅದರ ಯಶಸ್ಸು ಭಾರತಕ್ಕೂ ಮೀರಿದ್ದು. ಇದುವರೆಗೆ ಇಸ್ರೇಲ್ ಗಳಿಸಿದ ನೊಬೆಲ್ ಪಾರಿತೋಷಕಗಳು 12. ಜನಜೀವನದ ಎಲ್ಲ ಕ್ಷೇತ್ರಗಳಲ್ಲೂ ಹೈಟೆಕ್ ಸೌಲಭ್ಯ. ಅರಬ್ ದೇಶಗಳ ಪೈಕಿ ಒಟ್ಟು ಪಿಎಚ್.ಡಿ ಪಡೆದವರ ಸಂಖ್ಯೆ ಏಕಮೇವ ಇಸ್ರೇಲ್‌ನಲ್ಲಿನ ಪಿಎಚ್.ಡಿ ಪದವೀಧರರಿಗಿಂತ ಕಡಿಮೆ. ಈ ಪುಟ್ಟ ದೇಶದ ಮಹಾನ್ ಸಾಧನೆಗಳಿಂದಾಗಿ ಅದನ್ನು ನಾವು ಮೆಚ್ಚಲೇಬೇಕು.

ಆದರೆ ಇಂದು ಭಾರತದಲ್ಲಿ, ವಿಶೇಷವಾಗಿ ಸಂಘ ಪರಿವಾರದವರಲ್ಲಿ ಇಸ್ರೇಲ್ ಬಗ್ಗೆ ವ್ಯಕ್ತವಾಗುತ್ತಿರುವ ಪ್ರಶಂಸೆ ಕೇವಲ ಈ ಕಾರಣಗಳಿಗಾಗಿ ಅಲ್ಲ. ಅದರ ಸರ್ಕಾರ ಮತ್ತು ಸೇನೆಯು ಸ್ವರಕ್ಷಣೆಗಾಗಿ ಯಾವುದೇ ಹಿಂಜರಿಕೆಯಿಲ್ಲದೇ ಯಾವುದೇ ಸಂಧಾನಕ್ಕೆ ಮುಂದಾಗದೇ ತಪ್ಪು-ಒಪ್ಪುಗಳ ಬಗ್ಗೆ ಯೋಚನೆ ಮಾಡದೇ ಪ್ಯಾಲೆಸ್ಟೀನಿನ ಮುಸ್ಲಿಂ ಸಮುದಾಯವನ್ನು ಹತ್ತಿಕ್ಕಲು ಮಾಡಿರುವ ದೃಢ ಸಂಕಲ್ಪವೇ ಅದಕ್ಕೆ ಮುಖ್ಯ ಕಾರಣ.

'ಭಾರತವೂ ಇದೇ ರೀತಿ ರಾಷ್ಟ್ರೀಯ ಸುರಕ್ಷಾ ನೀತಿಯನ್ನು ಅಳವಡಿಸಿಕೊಳ್ಳಬೇಕು...' ಎಂಬುದು ಇಸ್ರೇಲ್ ಸಮರ್ಥಕರಲ್ಲಿ ಹೆಚ್ಚಿನವರ ಮನದಾಸೆಯಾಗಿರುವುದು ಶೋಚನೀಯ.

ಇಸ್ರೇಲ್- ಅರಬ್, ವಿಶೇಷವಾಗಿ ಇಸ್ರೇಲ್- ಪ್ಯಾಲೆಸ್ಟೀನ್ ನಡುವಿನ ಸಮಸ್ಯೆ ಇಂದು ನಿನ್ನೆಯದಲ್ಲ. ಎರಡನೇ ಮಹಾಯುದ್ಧದ ಕಾಲದಿಂದ ಅದು ನಡೆದು ಬಂದಿದೆ. ಈ ಸಮಸ್ಯೆಯ ಮೂಲ ಇರುವುದು, ಇಸ್ರೇಲ್ ಅನ್ಯಾಯವಾದ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದ ಬಗೆಯಲ್ಲಿ. ಈ ರಾಷ್ಟ್ರ ಜನ್ಮ ತಳೆದದ್ದು 1948ರಲ್ಲಿ. ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ಸುಮಾರು 60 ಲಕ್ಷ ಯಹೂದಿಯರನ್ನು ನರಸಂಹಾರ ಮಾಡಿದ ನಂತರ ತಮ್ಮದೇ ಆದ ಸ್ವತಂತ್ರ ರಾಷ್ಟ್ರ ವಿರಬೇಕು ಎಂಬ ಸಂಕಲ್ಪದಿಂದ, ಜಗತ್ತಿನ ಬೇರೆ ಬೇರೆ ಮೂಲೆಗಳಿಂದ ವಲಸೆ ಬಂದವರು ಇಸ್ರೇಲ್‌ನ ಸ್ಥಾಪನೆ ಮಾಡಿದರು. ಆದರೆ ಅವರು ಅದಕ್ಕಾಗಿ ಆಯ್ದುಕೊಂಡ ನೆಲದಲ್ಲಿ ಪ್ರಮುಖವಾಗಿ ಅರಬ್ಬರು (ಪ್ಯಾಲೆಸ್ಟೀನಿಯನ್ನರು) ಕಾಲಾಂತರದಿಂದ ವಾಸಿಸುತ್ತಿದ್ದರು. ಆಗ ಯಹೂದಿಯರು ಅಲ್ಲಿ ಅಲ್ಪಸಂಖ್ಯಾತರಾಗಿದ್ದರು. ಹಂತಹಂತವಾಗಿ ಅರಬ್ಬರನ್ನು ಹೊರಕ್ಕೆ ಹಾಕುತ್ತ ಇಸ್ರೇಲ್ ತನ್ನ ಪ್ರದೇಶವನ್ನು ವಿಸ್ತರಿಸಿಕೊಳ್ಳುತ್ತಾ ಹೋಯಿತು. ಈಗ ಪ್ಯಾಲೆಸ್ಟೀನಿಯನ್ನರಿಗೆ ವಾಸಿಸಲು ಇರುವುದು ಎರಡು ಪರಸ್ಪರ ಲಗತ್ತಾಗದ ತುಂಡುಗಳು ಮಾತ್ರ- ವೆಸ್ಟ್ ಬ್ಯಾಂಕ್ ಮತ್ತು ಗಾಜಾ ಪಟ್ಟಿ.

ಈ ಸಮಸ್ಯೆಯನ್ನು ಇನ್ನೂ ಗಂಭೀರಗೊಳಿಸಿರುವ ಸಂಗತಿಯೆಂದರೆ, ಜಗತ್ತಿನ ಮುಸ್ಲಿಂ ಸಮುದಾಯಕ್ಕೆ ಮೂರನೇ ಅತಿ ಪವಿತ್ರವಾದ ಅಲ್ ಅಕ್ಸಾ ಮಸೀದಿ ಇರುವ ಪೂರ್ವ ಜೆರುಸಲೇಮ್ ಅನ್ನು ಕೂಡ ಇಸ್ರೇಲ್ ವಶಪಡಿಸಿಕೊಂಡಿರುವುದು. ಇಷ್ಟೇ ಅಲ್ಲದೆ ಗಾಜಾ ಪಟ್ಟಿಯನ್ನು ಇಸ್ರೇಲ್ 2007ರಿಂದ ಸಂಪೂರ್ಣವಾಗಿ ದಿಗ್ಬಂಧನದಲ್ಲಿ ಇಟ್ಟುಕೊಂಡಿದೆ.

ತಮ್ಮ ಪ್ರದೇಶವನ್ನು ಮರಳಿ ಪಡೆಯುವುದಕ್ಕಾಗಿ ಪ್ಯಾಲೆಸ್ಟೀನ್ ಜನತೆ ಅವಿರತವಾಗಿ ಸಂಘರ್ಷಕ್ಕೆ ಇಳಿದಿದ್ದಾರೆ. ಈ ಸಂಘರ್ಷದಲ್ಲಿ ಹಮಾಸ್ ಸಂಘಟನೆಯು ಭಯೋತ್ಪಾದಕ ಮಾರ್ಗವನ್ನು ಅನುಸರಿಸಿರುವುದರಿಂದ ಹಾಗೂ ಹಮಾಸ್ ಅನ್ನು ಹತ್ತಿಕ್ಕಲು ಇಸ್ರೇಲ್ ಸೇನೆ ವಿಧ್ವಂಸಕಾರಿ ಆಕ್ರಮಣ ನಡೆಸುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಗಮನಾರ್ಹ ಸಂಗತಿಯೆಂದರೆ, ಇಸ್ರೇಲಿ ದೌರ್ಜನ್ಯಕ್ಕೆ ಇದುವರೆಗೆ ಸಾವಿರಾರು ಪ್ಯಾಲೆಸ್ಟೀನ್ ಹಾಗೂ ಇತರ ಅರಬ್ಬಿ ಜನ ಸಾವಿಗೀಡಾಗಿದ್ದಾರೆ. ತುಲನಾತ್ಮಕವಾಗಿ ಇಸ್ರೇಲಿ ನಾಗರಿಕರು ಅರಬ್ಬರ ಹಿಂಸಾಚಾರಕ್ಕೆ ಬಲಿಯಾದದ್ದು ಬಹಳ ಕಡಿಮೆ. ಆದ್ದರಿಂದ ಇಸ್ರೇಲಿಯರ ನೋವನ್ನು ಪ್ಯಾಲೆಸ್ಟೀನ್ ಜನರ ನೋವಿನೊಂದಿಗೆ ಹೋಲಿಸುವುದು ತಪ್ಪು.

ಮತ್ತೊಂದು ವ್ಯತ್ಯಾಸವೆಂದರೆ, ಇಸ್ರೇಲಿಗೆ ಅಣ್ವಸ್ತ್ರ ಸಜ್ಜಿತವಾದ ಸೇನೆಯಿದೆ. ಬಹುಮುಖ್ಯವಾಗಿ ಅಮೆರಿಕದ ಸಂಪೂರ್ಣ ಬೆಂಬಲ ಇದಕ್ಕಿದೆ. ಪ್ರತಿವರ್ಷ ಅಮೆರಿಕದಿಂದ ಆರ್ಥಿಕ ನೆರವೂ ಲಭಿಸುತ್ತದೆ. ಅಮೆರಿಕದಲ್ಲಿ ನೆಲೆಸಿರುವ ಅತಿ ಶ್ರೀಮಂತ ಹಾಗೂ ಭಾರಿ ಒಗ್ಗಟ್ಟಿನ ಯಹೂದಿ ಸಮುದಾಯದ ಒತ್ತಡದಿಂದಾಗಿ ಅಲ್ಲಿಯ ಯಾವ ಅಧ್ಯಕ್ಷರೂ ಇಸ್ರೇಲ್ ಅನ್ನು ವಿರೋಧಿಸುವ ಸಾಹಸ ಮಾಡುವುದಿಲ್ಲ. ಪ್ಯಾಲೆಸ್ಟೀನಿಯನ್ನರದು ಒಂದು ರಾಷ್ಟ್ರವಿಲ್ಲದ, ಸ್ವರಕ್ಷಣೆಗೆ ಸೇನೆ ಕೂಡ ಇಲ್ಲದ ಸಮುದಾಯವಾಗಿದೆ.

ನೂರಕ್ಕೂ ಹೆಚ್ಚು ಬಾರಿ ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದ್ದಕ್ಕಾಗಿ ವಿಶ್ವಸಂಸ್ಥೆಯು ಇಸ್ರೇಲ್ ವಿರುದ್ಧ ಖಂಡನಾ ನಿರ್ಣಯವನ್ನು ಅಂಗೀಕರಿಸಿದೆ. ಭಾರತವೂ ಸೇರಿ 138 ದೇಶಗಳು ಪ್ಯಾಲೆಸ್ಟೀನ್‌ಗೆ ಮನ್ನಣೆ ಕೊಟ್ಟದ್ದಷ್ಟೇ ಅಲ್ಲ, ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್ ಶಾಂತಿಯುತವಾಗಿ, ಸುರಕ್ಷಿತವಾಗಿ ಇರಬೇಕೆಂದು 'ದ್ವಿ-ರಾಷ್ಟ್ರ ಪರಿಹಾರ' (Two-State Solution) ಸೂಚಿಸಿವೆ. ಆದರೆ ಇಸ್ರೇಲ್ ಮತ್ತು ಅಮೆರಿಕ ಇದನ್ನು ಒಪ್ಪುತ್ತಿಲ್ಲ.

ಪ್ಯಾಲೆಸ್ಟೀನಿಯನ್ನರ ರಾಷ್ಟ್ರೀಯ ಸ್ವಾತಂತ್ರ್ಯದ ಬೇಡಿಕೆಯನ್ನು ನ್ಯಾಯಯುತ ಎಂದು ಪರಿಗಣಿಸಿದ ಪ್ರಮುಖರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರೂ ಸೇರಿರುವುದು ಗಮನಾರ್ಹ. 1977ರಲ್ಲಿ ಜನತಾ ಪಾರ್ಟಿಯ ಮೊರಾರ್ಜಿ ದೇಸಾಯಿ ನೇತೃತ್ವದ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿದ್ದಾಗಲೂ ಅವರದು ಇದೇ ಧೋರಣೆಯಾಗಿತ್ತು. ಆಗ ದೆಹಲಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಈ ಕುರಿತು ಮಾಡಿದ ಭಾಷಣವನ್ನು ಯುಟ್ಯೂಬ್‌ನಲ್ಲಿ ಕೇಳಿದರೆ, ಅವರೆಷ್ಟು ನಿಸ್ಸಂದಿಗ್ಧವಾಗಿ, ನೈತಿಕಪೂರ್ಣವಾಗಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು ಎಂಬುದು ಗೊತ್ತಾಗುತ್ತದೆ.



'ನಾನು ಜನಸಂಘದವ, ಜನಸಂಘವು ಮುಸ್ಲಿಂ ವಿರೋಧಿ ಹಾಗೂ ಜನತಾ ಪಾರ್ಟಿಯ ಮೇಲೆ ಜನಸಂಘದ್ದೇ ಪ್ರಭಾವ, ಹೀಗಾಗಿ ಜನತಾ ಪಾರ್ಟಿ ನೇತೃತ್ವದ ಸರ್ಕಾರದ ಬೆಂಬಲವು ಕೇವಲ ಇಸ್ರೇಲಿಗೆ ವಿನಾ ಅರಬ್ಬರಿಗೆ ಅಲ್ಲ ಎಂಬ ಅಪಪ್ರಚಾರ ನಡೆದಿದೆ. ಅರಬ್ ಜನರಿಗೆ ಸೇರಿದ ಭೂಮಿಯನ್ನು ಇಸ್ರೇಲ್ ವಾಪಸ್ ಕೊಡಲೇಬೇಕು. ಪಶ್ಚಿಮ ಏಷ್ಯಾದಲ್ಲಿ ಸ್ಥಿರವಾದ ಶಾಂತಿ ಸ್ಥಾಪನೆಯಾಗಬೇಕು'.

ಇದೇ ಬಗೆಯ ಸಮದೃಷ್ಟಿಯ ನಿಲುವನ್ನು ಜನಸಂಘ- ಬಿಜೆಪಿಯ ಸೈದ್ಧಾಂತಿಕ ಮಾರ್ಗದರ್ಶಕರಾದ ಪಂಡಿತ್ ದೀನದಯಾಳ ಉಪಾಧ್ಯಾಯ ಅವರೂ ಪ್ರತಿಪಾದಿಸಿದ್ದರು. 1967ರ ಅರಬ್- ಇಸ್ರೇಲ್ ಯುದ್ಧದ ಸಮಯದಲ್ಲಿ ಅವರು, 'ಕಾಂಗ್ರೆಸ್ ಪಕ್ಷ ಕುರುಡಾಗಿ ಅರಬ್ಬರ ಪರವಾಗಿದೆ ಎಂದಮಾತ್ರಕ್ಕೆ ಜನಸಂಘ ಕುರುಡಾಗಿ ಇಸ್ರೇಲ್‌ಗೆ ಬೆಂಬಲ ನೀಡಬಾರದು. ಪ್ರತಿಯೊಂದು ವಿಷಯವನ್ನೂ ಅದರ ಸತ್ಯಾಸತ್ಯತೆ ಮತ್ತು ಅರ್ಹತೆಯ ಆಧಾರದ ಮೇಲೆ ಪರೀಕ್ಷಿಸಬೇಕು' ಎಂದಿದ್ದರು.

ಈ ಸಮಸ್ಯೆಯ ಬಗ್ಗೆ ಗಾಂಧೀಜಿಯವರ ವಿಚಾರವೂ ನೈತಿಕಪೂರ್ಣವಾಗಿತ್ತು. 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದ ಲೇಖನದಲ್ಲಿ ಅವರು, 'ಬ್ರಿಟನ್ ಮತ್ತು ಅಮೆರಿಕದ ಸಹಾಯದಿಂದ ಪ್ಯಾಲೆಸ್ಟೀನಿಯನ್ನರ ಜಮೀನನ್ನು ಬಲವಂತವಾಗಿ ವಶಪಡಿಸಿಕೊಂಡು ಯಹೂದಿಯರು ದೊಡ್ಡ ತಪ್ಪು ಮಾಡುತ್ತಿದ್ದಾರೆ' ಎಂದಿದ್ದರು.

ಈ ಮೂವರೂ ಪ್ರಮುಖರ ಮಾತುಗಳಿಗೆ ಈಗ ಅನೇಕ ದಶಕಗಳು ಸಂದಿವೆ. ಆನಂತರ ಆ ಪ್ರದೇಶದಲ್ಲಿ ಅನೇಕ ಯುದ್ಧಗಳೂ ಹಿಂಸಾತ್ಮಕ ಘಟನೆಗಳೂ ಸಂಧಾನಕ್ಕಾಗಿ ವಿಫಲ ಯತ್ನಗಳೂ ಆಗಿಹೋಗಿವೆ. ಆದರೆ ಈ ಸತ್ಯಕ್ಕೆ ಎರಡು ಮುಖಗಳಿವೆ ಎಂಬ ಮೂಲ ಮಾತು ಮಾತ್ರ ಬದಲಾಗಿಲ್ಲ. 'ಇಸ್ರೇಲ್ ಅನ್ನು ನಾಶಗೊಳಿಸಬೇಕು' ಎನ್ನುವ ಹಮಾಸ್ ಮತ್ತು ಅದಕ್ಕೆ ಬೆಂಬಲ ನೀಡುವ ಇರಾನ್‌ನಂತಹ ಮುಸ್ಲಿಂ ರಾಷ್ಟ್ರಗಳ ನಿಲುವು ನಿಂದನೀಯ. ಆದರೆ 'ಸ್ವತಂತ್ರ ಪ್ಯಾಲೆಸ್ಟೀನ್ ರಾಷ್ಟ್ರ ಬೇಡ' ಅನ್ನುವ ಯಹೂದಿಗಳ ಹಟಮಾರಿತನವೂ ನಿಂದನೀಯವೇ. ಈ ಎರಡೂ ಮುಖಗಳನ್ನು ಗುರುತಿಸಿ, ತಪ್ಪು ಒಪ್ಪಿಕೊಂಡು, ಎರಡೂ ಶಾಂತಿಯುತ ವಾತಾವರಣದಲ್ಲಿ ಜೊತೆಜೊತೆಯಾಗಿ ದ್ವಿ-ರಾಷ್ಟ್ರ ವ್ಯವಸ್ಥೆಯಲ್ಲಿ ಬಾಳುವ, ಬೆಳೆಯುವ ಅಗತ್ಯವನ್ನು ಮನಗಂಡಾಗಲೇ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ. ಇದಕ್ಕಾಗಿ ಭಾರತ ಸೇರಿದಂತೆ ಅಂತರರಾಷ್ಟ್ರೀಯ ಸಮುದಾಯದ ಮುಖಂಡರು ಗಂಭೀರವಾಗಿ ಪ್ರಯತ್ನಿಸಬೇಕು. ಕೇವಲ ಬಲಪ್ರಯೋಗದಿಂದ ಮಾನವನ ಇತಿಹಾಸದಲ್ಲಿ ಯಾವ ಸಮಸ್ಯೆಯೂ ಬಗೆಹರಿದಿಲ್ಲ ಎಂಬುದನ್ನು ಎಲ್ಲರೂ- ವಿಶೇಷವಾಗಿ 'ಇಸ್ರೇಲೇ ಭಾರತಕ್ಕೆ ಮಾದರಿ' ಎಂದು ನಂಬಿರುವವರು ತಿಳಿದುಕೊಳ್ಳಬೇಕಾಗಿದೆ.

ಚುರುಮುರಿ



ರೆಡ್ ಫಂಗಸ್!

• ಬಿ.ಎನ್.ಮಲ್ಲೇಶ್

ಪರಸ್ಪರ ಅಂತರ ಕಾಯ್ದುಕೊಂಡು ಹರಟೆಕಟ್ಟೆ ಸಭೆ ಸೇರಿತ್ತು. 'ಯಾಕೋ ಜೀವನಾನೇ ಬ್ಯಾಸರಾಗೇತಿ ಕಣ್ರಲೆ... ದಿನ ಬೆಳಗಾದ್ರೆ ಅವನು ಸತ್ತ, ಇವನು ಸತ್ತ... ಕೇಳಿ ಕೇಳಿ ತೆಲಿ ಕೆಟ್ಟೋಗೇತಿ. ಈ ಕೊರೊನಾ ಅಲೆಗಳು ಇನ್ನೂ ಎಷ್ಟದಾವೋ ಏನೋ...' ದುಬ್ಬೀರ ಬೇಸರ ವ್ಯಕ್ತಪಡಿಸಿದ.

'ಕೊರೊನಾ ಅಲೆ ಇನ್ನೂ ಏಳೆಂಟದಾವು ಅನ್ನುಸ್ತತಿ. ಅಷ್ಟರಾಗೆ ದೇಶದ ಜನಸಂಖ್ಯೆ ಚಪಾಟೆದ್ದು ಸ್ವಚ್ಛ ಭಾರತ್ ಆಗಿರ್ತತಿ' ಗುಡ್ಡೆ ನಕ್ಕ.

'ಈ ಕೊರೊನಾ ಕತಿ ಹಿಂಗಾದ್ರೆ ಅದ್ಯಾವುದೋ ಫಂಗಸ್ ಅಂತಪ, ಕಲ್ ಕಲರ್ ಬರಾಕತ್ತೇತಿ. ಮೊದ್ಲು ಬ್ಲ್ಯಾಕು, ಆಮೇಲೆ ವೈಟು, ಈಗ ಹಳದಿ ಕಲರ್ ಬಂದೇತಂತೆ. ಇದ್ರುದೂ ಇನ್ನೂ ಎಷ್ಟು ಕಲರ್ ಅದಾವೋ ಏನೋ...' ಪರ್ಮೇಶಿ ಆತಂಕ ವ್ಯಕ್ತಪಡಿಸಿದ.

'ಕಲರ್ ಇರೋದೇ ಏಳು ಅಲ್ಲೇನ್ಲೇ? ಕಾಮನಬಿಲ್ಲಿನ ತರ ಏಳು ಕಲರ್ನಾಗೂ ಫಂಗಸ್ ಬರಬಹುದು ಅನುಸ್ತತಿ' ಗುಡ್ಡೆ ಮತ್ತೆ ನಕ್ಕ.

ದುಬ್ಬೀರನಿಗೆ ಸಿಟ್ಟು ಬಂತು. 'ಲೇಯ್ ನಾವಿಲ್ಲಿ ತೆಲಿಕೆಟ್ ಕುಂತಿದೀವಿ, ಇವನಿಗೆ ಎಲ್ಲ ತಮಾಸಿನೇ...' ಎಂದು ರೇಗಿದ.

ಎಲ್ಲ ಮಾತಾಡುತ್ತಿದ್ದರೂ ತೆಪರೇಸಿ ಮಾತ್ರ ಪಿಟಕ್ಕನ್ನದೆ ಕುಳಿತಿದ್ದನ್ನು ನೋಡಿದ ಸಣ್ಣೀರ 'ಯಾಕೋ ತೆಪರ, ಏನೂ ಮಾತಾಡ್ತಿಲ್ಲ? ಮುಖ ಯಾಕೋ ಕೆಂಪಾಗೇತಿ, ಮಾಸ್ಕ್ ತೆಗಿ ಇಲ್ಲಿ' ಎಂದ.

'ಅವನ ಮುಖ ಯಾಕೆ ಕೆಂಪಾಗೇತಿ ಅಂತ ನಂಗೊತ್ತು. ಅದು ರೆಡ್ ಫಂಗಸ್ಸು' ಗುಡ್ಡೆ ಕಿಸಕ್ಕೆಂದ.

'ರೆಡ್ ಫಂಗಸ್ಸಾ?' ಎಲ್ಲರೂ ಒಟ್ಟಿಗೇ ಗಾಬರಿಯಾದರು.

'ಹ್ಞೂಂ... ರೆಡ್ ಫಂಗಸ್ಸೇ... ನಿನ್ನೆ ರಾತ್ರಿ ಇವ್ನು ಫುಲ್ ಟೈಟಾಗಿ ಮನೇಲಿ ಹೆಂಡ್ತಿ ಮೇಲೆ ಹುಚ್ಚಾಪಟ್ಟೆ ಹಾರಾಡಿದ್ನಂತೆ. ಪಮ್ಮಕ್ಕ ಇವನ ಮುಖ-ಮೂತಿ ನೋಡದಂಗೆ ಬಾರಿಸಿ ಇಂಗೆ ಕೆಂಪು ಮಾಡಿದಾಳೆ. ಕೆಂಪಾದವ್ರೋ ಎಲ್ಲ ಕೆಂಪಾದವ್ರೋ...' ಎಂದ ಗುಡ್ಡೆ.

ಬೇಸರದಲ್ಲೂ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಅರುಚಿಯೇ ಅಭಿಜಾತ ಅಭಿರುಚಿಯೇ?

ಪ್ರಸ್ತುತ ಸಮಾಜದಂತೆ ಚಿತ್ರರಂಗದಲ್ಲೂ ಈಗ ಕಲುಷಿತ ಗಾಳಿ

• ಡಾ. ದೊಡ್ಡರಂಗೇಗೌಡ

ನಾವೀಗ ತುಂಬಾ ಬದಲಾದ ಕಾಲಘಟ್ಟದಲ್ಲಿ ಇದ್ದೇವೆ. ಬದಲಾವಣೆಯೇ ಬದುಕು ಎನ್ನುವುದನ್ನು ನಾವು ಒಪ್ಪಿಕೊಳ್ಳಬಹುದಾದರೂ ಅಂಥ ರೂಪಾಂತರಕ್ಕೂ ಮಿತಿ ಎಂಬುದು ಒಂದಿರುವುದಿಲ್ಲವೇನು?

ನಾನು ಬೆಳಿಗ್ಗೆ ವಾಯುವಿಹಾರಕ್ಕೆ ಹೋದಾಗಲೆಲ್ಲಾ, ಆರೇಳು ದಶಕಗಳನ್ನು ದಾಟಿದವರು 'ಕಾಲ ಕುಲಗೆಟ್ಟು ಹೋಯ್ತು' ಎಂದೇ ಬಹಳ ಕೆಟ್ಟದಾಗಿ ಟೀಕಿಸುತ್ತಾರೆ. ವಾಸ್ತವವಾಗಿ ಇದು ನಿಜವೇ? ಕಾಲ ಕೆಟ್ಟಿದೆಯೋ... ಇಲ್ಲಾ... ಜನರೇ ಕೆಟ್ಟು ಹೋಗಿದ್ದಾರೋ?! ಯಾವುದು ಸರಿ?

ಇಂದಿನ ದಿನಮಾನಗಳು ಹದಗೆಟ್ಟಿವೆ ಎಂದೇ ಒಪ್ಪಿಕೊಳ್ಳೋಣ. ಹಾಗಿದ್ದರೆ ಹಿಂದೆಯೂ ಇಂಥ ದಿನಗಳು ಇದ್ದಿರಲಿಲ್ಲವೇನು? ಆಗ ಹಿರಿಯರು ಅನ್ನಿಸಿಕೊಂಡವರು ಕಿರಿಯರ ಬಗ್ಗೆ ಹೀಗೇ ಆಡಿಕೊಂಡಿದ್ದರೇನು? ಇಂತಹ ಚರ್ಚೆಗಳು ಯಾವತ್ತೂ ಕುತೂಹಲಕರವೆ. ಎಲ್ಲೆಡೆ ಈಗ ಕಲುಷಿತ ಗಾಳಿ! ಪ್ರಸ್ತುತ ಸನ್ನಿವೇಶಗಳೇ ಹಾಗೆ, ಸಮಾಜದಲ್ಲೂ ಅಷ್ಟೇ...

ಇದಕ್ಕೆ ನಿದರ್ಶನವಾಗಿ ಕನ್ನಡ ಚಿತ್ರಗೀತೆಗಳನ್ನೇ ತೆಗೆದುಕೊಳ್ಳೋಣ. ಬಸ್ಸಿನಲ್ಲಿ ಪ್ರಯಾಣಿಸುತ್ತಿರಲಿ, ಆಟೊದಲ್ಲಿ ಹೋಗುತ್ತಿರಲಿ, ಹೋಟೆಲ್‌ಗಳಲ್ಲಾಗಲಿ, ಬೀದಿಯ ಉತ್ಸವಗಳಲ್ಲಾಗಲಿ, ಸಾಂಸ್ಕೃತಿಕ ಸಮಾರಂಭಗಳಲ್ಲಾಗಲಿ ನಮ್ಮ ಅಭಿರುಚಿಗೆ ಸರಿ ಎನ್ನಿಸದ ಎಷ್ಟೋ ಕಲುಷಿತ ಗೀತೆಗಳು, ಅಶ್ಲೀಲ ಹಾಡುಗಳು ಮೂಡಿ ಬರುತ್ತಿರುತ್ತವೆ. ನಾವು ಸುಮ್ಮನೆ ಕೇಳಿಸಿಕೊಳ್ಳುತ್ತೇವೆ.

'ಅಪ್ಪ ಲೂಸಾ? ಅಮ್ಮ ಲೂಸಾ?' ಎಂದೋ 'ಅಲ್ಲಾಡ್ಸು ಅಲ್ಲಾಡ್ಸು' ಎಂದೋ 'ನೈನ್ಟಿ ಹೊಡಿ' ಎಂದೋ 'ಎಣ್ಣೆ ನಂದು, ಸೋಡಾ ನಿಂದು' ಎಂದೋ... (ಇಂಥ ಸಮೃದ್ಧ ಹಾಡುಗಳು ಈಗಿನವರಿಗೆ ಬಹಳಪ್ರಿಯ!) ಎಲ್ಲೆಲ್ಲೂ ಮೊಳಗುತ್ತಿರುತ್ತವೆ.

'ಹಳೇ ಪಾತ್ರೆ... ಹಳೇ ಪೇಪರ್...' ಎಂದೋ 'ಪೌಡರ್ ಹಾಕ್ಕೋ... ತಲೆ ಬಾಚ್ಕೋ...' ಎಂದೋ ನಮಗಿಷ್ಟ ಇರಲಿ ಇಲ್ಲದಿರಲಿ ಸುತ್ತಮುತ್ತ ಅನುರಣಿಸುತ್ತಿರುತ್ತವೆ.

ಅರವತ್ತು, ಎಪ್ಪತ್ತರ ದಶಕಗಳ ಕನ್ನಡ ಚಿತ್ರಗೀತೆಗಳು ಹೀಗಿರಲಿಲ್ಲ. ಅಲ್ಲಿ ಶುದ್ಧ ಸಾಹಿತ್ಯವಿತ್ತು. ಅಪ್ಪಟ ಸಂಗೀತವಿತ್ತು. ಅಭಿರುಚಿಯೂ ಇತ್ತು. ಈಗ ಎಲ್ಲವೂ ತಲೆಕೆಳಗಾಗಿವೆ. ಮನೋಧೈರ್ಯವೇ ಬದಲಾಗಿ ಹೋಗಿದೆ. ಯಾರದು ಸರಿ? ಯಾರದು ತಪ್ಪು?

ಹಿಂದೆ ಗೀತ ರಚನಕಾರರ ಬಗೆಗೆ ಬಹಳ ಶ್ರೇಷ್ಠ ಭಾವನೆ ಇತ್ತು. ಅವರೆಲ್ಲಾ ಆದರ್ಶ ಕವಿಗಳಾಗಿದ್ದರು. ಡಾ. ಎಸ್.ಕೆ.ಕರೀಂ ಖಾನ್, ಹುಣಸೂರು ಕೃಷ್ಣಮೂರ್ತಿ, ಸು.ರಾ.ಸೀತಾರಾಮ ಶಾಸ್ತ್ರಿ, ಜಿ.ವಿ. ಅಯ್ಯರ್, ಕಣಗಾಲ್ ಪ್ರಭಾಕರ ಶಾಸ್ತ್ರಿ, ಸೋಸಲೆ ಅಯ್ಯಾ ಶಾಸ್ತ್ರಿ, ನಂಜು ಕವಿ, ಚಿ.ಸದಾಶಿವಯ್ಯ ಮುಂತಾದವರು ಸಂಪೂರ್ಣ ಸಾಹಿತ್ಯಕ್ಕೆ ಒತ್ತು ಕೊಟ್ಟಿದ್ದರು. ಸ್ವಲ್ಪಮಟ್ಟಿಗೆ ಆರ್.ಎನ್. ಜಯಗೋಪಾಲ್, ಗೀತಪ್ರಿಯ, ವಿಜಯನಾರಸಿಂಹ, ಚಿ.ಉದಯಶಂಕರ್ ಅವರು ಕೂಡ ಅರವತ್ತರ ದಶಕದ ಹಿರಿಯರನ್ನು ಅನುಸರಿಸಿದರು, ಗೀತೆಗಳ ಭಾಷೆಯನ್ನು ಸರಳಗೊಳಿಸಿದರು. ಅವರು ಎಂದೂ ಅಭಿರುಚಿಯನ್ನು ಹಾಳು ಮಾಡಲಿಲ್ಲ.

ನನ್ನ ದೃಷ್ಟಿಯಲ್ಲಿ ಗೀತ ರಚನಕಾರ ಕೂಡ ಕವಿಯೆ. ಅವನೊಬ್ಬ ಆಶು ಕವಿ. ಆ ಗಳಿಗೆಗೆ ಸ್ಪಂದಿಸಬೇಕು, ನಾಳೆಯೋ ನಾಡಿದ್ದೋ ಬರೆದು ಕೊಡುತ್ತೇನೆ ಎಂದರೆ ಚಿತ್ರರಂಗದಲ್ಲಿನ ವೇಗೋತ್ಕರ್ಷ ನಿಲ್ಲುವುದಿಲ್ಲ. 'ಇನ್‌ಸ್ಟೆಂಟೇನಿಯಸ್ ಪೊಯೆಮ್' ಮೂಡಿಸಿ ಕೊಡಬೇಕು. ಹಾಗೆಂದು ಯಾರೂ ಏನೇನನ್ನೋ ಬರೆಯಲಿಲ್ಲ, ಬರೆಯುತ್ತಿರಲಿಲ್ಲ.

ಆಗೆಲ್ಲಾ ಗೀತರಚನಕಾರರೆಂದರೆ ಸಾಂಸ್ಕೃತಿಕ ರಾಯಭಾರಿಗಳು ಇದ್ದಂತೆ ಅಥವಾ ಅಭಿರುಚಿಯ ರಾಯಭಾರಿಗಳಂತೆ. ಆಗಿನ ಕವಿಗಳಿಗೆ ಈ ನೈತಿಕ ಜವಾಬ್ದಾರಿ ಇರುತ್ತಿತ್ತು. ಅದನ್ನು ಅವರು ಯಾವತ್ತೂ ಉಲ್ಲಂಘಿಸಲಿಲ್ಲ. ಲಕ್ಷ್ಮಣ ರೇಖೆಯನ್ನು ದಾಟಲಿಲ್ಲ. ಅವರೆಲ್ಲಾ ದ್ವಂದ್ವಾರ್ಥ ಗೀತೆಗಳನ್ನು ಬರೆದವರಲ್ಲ.

ಈಗ ಹಾಗಿಲ್ಲ. ಆಗ ನಿರ್ದೇಶಕರು ಸುಪ್ರೀಂ. ಅಭಿಜಾತವಾದ ಅಭಿರುಚಿ ಅವರೆಲ್ಲರಿಗೂ ಇದ್ದುದರಿಂದ ಕೆಟ್ಟ ಹಾಡುಗಳು ಬರಲಿಲ್ಲ! ಸಿನಿಮಾದಲ್ಲಿ ಸರಳ, ಸುಂದರ, ಸುಮಧುರವಾದ, ರಸಿಕ ಪ್ರೇಕ್ಷಕರಿಗೆ ಸುಲಿದ ಬಾಳೆಯ ಹಣ್ಣಿನಂತೆ ಸುಲಭವಾಗಿ ಅರ್ಥವಾಗಬಲ್ಲ ಗೀತೆಗಳನ್ನೇ ರಚಿಸಿ ಕೊಟ್ಟರು. ತನ್ಮೂಲಕ ಕನ್ನಡ ಚಲನಚಿತ್ರರಂಗದ ಸುವರ್ಣ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದ ಸಾಂಸ್ಕೃತಿಕ ಶ್ರೇಷ್ಠ ಅಧ್ಯಾಯವೇ ದಾಖಲಾಗಿದೆ.



ಈಗ ಹಾಗಲ್ಲ. ಏನಿದ್ದರೂ ನಿರ್ಮಾಪಕರೇ ಸುಪ್ರೀಂ! ಎಷ್ಟೋ ವೇಳೆ ಹೀರೊ ಆಜ್ಞಾಪಿಸುವಷ್ಟು ಚಿತ್ರರಂಗ ಬದಲಾಗಿದೆ. ಹೀಗಾಗಿ ಕಳಪೆಯ ಬರವಣಿಗೆಯು ನಾಯಿಕೊಡೆಗಳ ರೀತಿ ಹುಟ್ಟುತ್ತಿದೆ. ಈಗ ಮಾತೆತ್ತಿದರೆ ಗಾಂಧಿನಗರದಲ್ಲಿ ಮೂರು ಮಂತ್ರಗಳು ಪ್ರಸಿದ್ಧ: 'ಸಾರ್.. ಜನ ಕೇಳ್ತಾರೆ ಸಾರ್. ಅವರು ಕೇಳಿದ್ದನ್ನು ನಾವು ಕೊಡಬೇಕು, ಕೊಡ್ತೇವೆ! ನಾವೇನೂ ಕಲೆ, ಸಾಹಿತ್ಯ, ಸಂಗೀತ ಉದ್ಧಾರ ಮಾಡಲು ಬಂದಿಲ್ಲ ಸಾರ್'. ಇದು ಅಪ್ಪಟ ಸತ್ಯ. ಸನ್ನಿವೇಶಗಳು ಹೀಗೆ ಹದಗೆಟ್ಟಿವೆ!

ಮತ್ತೊಂದು; 'ಗಲ್ಲಾಪೆಟ್ಟಿಗೆ ತುಂಬಬೇಕಲ್ಲ ಸಾರ್. ಎಲ್ಲೆಲ್ಲಿಂದಲೋ ಸಾಲಸೋಲ ಮಾಡ್ಕೊಂಡು ನಾವು ಹಣ ತಂದಿರ್ತೇವೆ, ಅದು ವಾಪಸ್ ಬರಬೇಕಲ್ಲ ಸಾರ್'.

ಮೂರನೆಯದು: ಈ ಹೊತ್ತಿನ ಟ್ರೆಂಡ್! ಎಲ್ಲಾ ಭಾಷೆಯ ಕಲಬೆರಕೆಯ ಹಾಡು. ಅರ್ಥ ಇರಲೇಬೇಕೆಂದಿಲ್ಲ. ಇದು ನಡೆಯುತ್ತಿರುವ ಕಥೆ...

ಈಗ ಹೇಳಿ ಸಿನಿ ರಸಿಕರೇ, ಈ ಎಲ್ಲವೂ ಎಷ್ಟು ಸರಿ? ಇದು ಹೀಗೇ ಮುಂದುವರಿಯಬೇಕೆ? ಬೇಡವೇ? ಬದಲಾಗಬೇಕೆ? ಹೌದೆಂದಾದರೆ ಇದಕ್ಕೆ ಕಾಯಕಲ್ಪ ಇಲ್ಲವೇನು?

ವಾಚಕರ ವಾಣಿ

ಮಾನವೀಯ ಕಳಕಳಿ ಪ್ರಧಾನವಾಗಲಿ

ಕೊರೊನಾ ಸಂಕಷ್ಟದಲ್ಲಿ ದೇಶವೇ ತಲ್ಲಣಗೊಂಡಿರುವ ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರಕ್ಕೆ ಬೆಂಬಲವಾಗಿ ನಿಂತು ನಾವೆಲ್ಲರೂ ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕರ್ನಾಟಕ ಸರ್ಕಾರದ ಅಧೀನದಲ್ಲಿರುವ ಎಲ್ಲ ಅಕಾಡೆಮಿ, ಪ್ರಾಧಿಕಾರ, ನಿಗಮ ಮತ್ತು ಮಂಡಳಿಗಳನ್ನು ಈ ಕೂಡಲೇ ವಿಸರ್ಜಿಸುವುದು. ಇದರಿಂದ ಕೋಟ್ಯಂತರ ರೂಪಾಯಿಗಳ ಆರ್ಥಿಕ ಅನುದಾನವನ್ನು ಕೋವಿಡ್ ಮಹಾಮಾರಿಯ ವಿರುದ್ಧದ ಹೋರಾಟಕ್ಕೆ ಬಳಸಲು ಅನುಕೂಲವಾಗುತ್ತದೆ. ಈ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿಯ ಸಂಬಳ, ಸಾರಿಗೆ ಮತ್ತಿತರ ಭತ್ಯೆಗಳು ಸರ್ಕಾರದ ಬೊಕ್ಕಸಕ್ಕೆ ಉಳಿಯುತ್ತವೆ. ರಾಜ್ಯವು ಗಂಭೀರವಾದ ಸಮಸ್ಯೆಯನ್ನು ಎದುರಿಸುತ್ತಿರುವ ಈ ಹೊತ್ತಿನಲ್ಲಿ ಮಾನವೀಯ ಕಳಕಳಿಯ ಹಿನ್ನೆಲೆಯಲ್ಲಿ ಸರ್ಕಾರವು ಈ ಐತಿಹಾಸಿಕ ನಿರ್ಧಾರವನ್ನು ಕೈಗೊಳ್ಳಬೇಕು.

ಇದರೊಂದಿಗೆ ಸರ್ಕಾರ ನೀಡುವ ವಿವಿಧ ಪ್ರಶಸ್ತಿ ಪುರಸ್ಕಾರಗಳನ್ನೂ ರಾಜ್ಯವು ಚೇತರಿಸಿಕೊಳ್ಳುವವರೆಗೆ ಮುಂದೂಡಬೇಕೆಂದು ಕೋರಿಕೆ. ಈ ಕುರಿತಾದ ಆದೇಶವು ಹೊರಬೀಳುವ ಮೊದಲೇ ಎಲ್ಲ ಅಕಾಡೆಮಿ, ಪ್ರಾಧಿಕಾರ, ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರು ಹಾಗೂ ಸದಸ್ಯರು ಸ್ವಯಿಚ್ಛೆಯಿಂದ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿ ಮಾದರಿಯಾಗಬೇಕೆಂದೂ ಸರ್ಕಾರದ ಜೊತೆಗೆ ಕೈ ಜೋಡಿಸಬೇಕೆಂದೂ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಸುಬ್ರಾಯ ಚೊಕ್ಕಾಡಿ, ಸುಳ್ಯ, **ಡಾ. ನಾ.ಮೊಗಸಾಲೆ,** ಕಾಂತಾವರ, **ಡಾ. ಜಿ.ಎಂ.ಹೆಗಡೆ,** ಧಾರವಾಡ, **ಡಾ. ಬಿ.ಜನಾರ್ದನ ಭಟ್,** ಬೆಳ್ಮಣ್ಣು, **ಡಾ. ಜಿ.ಎನ್.ಉಪಾಧ್ಯ,** ಮುಂಬೈ, **ಡಾ. ಕಬ್ಬಿನಾಲೆ ವಸಂತ ಭಾರದ್ವಾಜ,** ಮೈಸೂರು, **ಡಾ. ಪೂರ್ಣಿಮಾ ಶೆಟ್ಟಿ,** ಮುಂಬೈ, **ಶ್ರೀನಿವಾಸ ಜೋಕಟ್ಟೆ,** ಮುಂಬೈ, **ಕೆ.ಪಿ.ರಾಜಗೋಪಾಲ,** ಕನ್ಯಾನ

ವಿದ್ಯುತ್ ಪ್ರತಿನಿಧಿಗಳ ಸಂಕಷ್ಟ ಆಲಿಸಿ

ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 18 ವರ್ಷದಿಂದ ಕೆಲಸ ನಿರ್ವಹಿಸುತ್ತಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಗೋಳು ಕೇಳುವವರಿಲ್ಲದಂತಾಗಿದೆ. ವಿದ್ಯುತ್ ಬಿಲ್ ಹಂಚುವ ಮತ್ತು ಕಂದಾಯ ವಸೂಲಾತಿಯಂಥ ಪ್ರಮುಖ ಕೆಲಸ ನಿರ್ವಹಿಸುತ್ತಿದ್ದರೂ ಕಂಪನಿಯ ಮತ್ತು ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಅವರಿಗೆ ಈ ಗತಿ ಬಂದಿದೆ.

ಕೊರೊನಾ ಎರಡನೇ ಅಲೆಗೆ 27 ಮಂದಿ ಗ್ರಾಮ ವಿದ್ಯುತ್ ಪ್ರತಿನಿಧಿಗಳು ಬಲಿಯಾಗಿದ್ದು ಅವರ ಕುಟುಂಬಗಳು ಬೀದಿಪಾಲಾಗಿವೆ. ಅಧಿಕಾರಿಗಳು ಮಾಪಕ ಓದಲು ಒತ್ತಡ ಹಾಕುತ್ತಾರೆ, ಮಾಪಕ ಓದಲು ಹೋಗಿ ಕೆಲವರು ಸೋಂಕು ತಗುಲಿಸಿಕೊಂಡಿದ್ದಾರೆ. ಇದಕ್ಕೆ ಯಾರು ಹೊಣೆ? ಸರ್ಕಾರವೇ ಅಥವಾ ಕಂಪನಿಗಳೇ ಎಂಬುದು ಸ್ಪಷ್ಟವಾಗಬೇಕು. ಇದಕ್ಕೆ ಇಂಧನ ಇಲಾಖೆಯ ಜವಾಬ್ದಾರಿ ಹೊತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಉತ್ತರಿಸಬೇಕು. ಸದ್ಯ ಸಂಕಷ್ಟಕ್ಕೆ ಸಿಲುಕಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳ ನೆರವಿಗೆ ಧಾವಿಸಬೇಕು. ಸೋಂಕು ತಗುಲಿರುವವರಿಗೆ ಆಸ್ಪತ್ರೆ ವೆಚ್ಚ, ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು. ಇಲ್ಲವಾದರೆ ಕೊರೊನಾ ನಿಯಂತ್ರಣಕ್ಕೆ ಬರುವವರೆಗೆ ಕೆಲಸಕ್ಕೆ ವೇತನ ಸಹಿತ ವಿನಾಯಿತಿ ನೀಡಿ ನಮ್ಮ ಜೀವ ಉಳಿಸಿಕೊಡಿ. ಇಲ್ಲ ಕೆಲಸದಿಂದ ವಜಾಗೊಳಿಸಿ.

ನಾವು ಹಳ್ಳಿಗರು ಸೋಂಕು ಬಂದರೆ ಪ್ರತ್ಯೇಕವಾಗಿ ಇರಲು ಮನೆ ಇಲ್ಲ, ಸರ್ಕಾರಿ ಆಸ್ಪತ್ರೆಯಲ್ಲಿ ಜಾಗವಿಲ್ಲ, ಖಾಸಗಿ ಆಸ್ಪತ್ರೆಗೆ ಸೇರಲು ಹಣವಿಲ್ಲ, ಪರಿಹಾರದ ಹಣ ಇಲ್ಲ, ಕೊನೆಗೆ ಆಸ್ಪತ್ರೆಗೆ ಕಟ್ಟಲು ಹಣ ಇಲ್ಲದೆ ಹೆಣವೂ ಇಲ್ಲ ಎಂಬಂಥ ಸ್ಥಿತಿ ಬರುವುದು ಬೇಡ.

ದಡದಹಳ್ಳಿ ರಮೇಶ್, ಹೆಬ್ಬಸೂರು, ಚಾಮರಾಜನಗರ

ಹೆಚ್ಚಲಿ ಕೈದೋಟ ಸಂಸ್ಕೃತಿ

'ಕೋವಿಡ್ ಕಾಲದಲ್ಲೊಂದು ವಿಕ್ಟರಿ ಗಾರ್ಡನ್' (ಸಂಗತ, ಮೇ 26) ಸಕಾಲಿಕ ಲೇಖನ. ಮನೆ ಅಕ್ಕಪಕ್ಕ ತುಸು ಜಾಗವಿದ್ದವರು, ತಾರಸಿ ಮೇಲೆ ಸ್ಥಳವಿದ್ದವರು... ಹೀಗೆ ಕೈದೋಟದ ಹವ್ಯಾಸ, ಸಂಸ್ಕೃತಿ ಬೆಳೆಸಲು ಲೇಖನ ಪ್ರೇರಣೆ ನೀಡಿದೆ. ನಮ್ಮ ಮನೆ ಪಕ್ಕದಲ್ಲಿ ತುಸು ಖಾಲಿ ಜಾಗವಿದ್ದು, ನಾವು ಅಲ್ಲಿ ನಮಗೆ ಬೇಕಾದ ಅನೇಕ ತರಕಾರಿಗಳನ್ನು ಬೆಳೆಯುತ್ತಿದ್ದೇವೆ. ಗೃಹಿಣಿಯಾಗಿರುವ ನನ್ನ ಪತ್ನಿಗೆ ಹೂವಿನಗಿಡದ ಜತೆ ಒಡನಾಟ ಹೆಚ್ಚು. ಬೆಳಿಗ್ಗೆ, ಸಂಜೆ ಕೈದೋಟದಲ್ಲೇ ಗಿಡಗಳ ಜತೆ ಪ್ರೀತಿ ಹಂಚಿಕೊಳ್ಳುತ್ತಾಳೆ. ನಮ್ಮ ಕೈದೋಟದಲ್ಲಿ ಕಳೆದ ಹತ್ತಾರು ವರ್ಷದಿಂದ ಬಸಳೆ ಸೊಪ್ಪು, ಗಿಡಬಸಳೆ, ಹರಿವೆಸೊಪ್ಪು, ಕರಿಬೇವಿನಸೊಪ್ಪು, ಶುಂಠಿ, ಅರಿಶಿಣ, ಸೂಜಿಮೆಣಸು, ಪಪ್ಪಾಯಿ, ಸಪೋಟ, ಪೇರಲ, ಅಮಟೆಕಾಯಿ ಮುಂತಾದವುಗಳನ್ನು ಬೆಳೆಯುತ್ತಿದ್ದೇವೆ. ಕೈದೋಟದ ನಡುವೆ ಮಣ್ಣಿನ ಬಾನಿಯೊಂದನ್ನು ಇಟ್ಟಿದ್ದರಿಂದ ವಿವಿಧ ರೀತಿಯ ಪಶು-ಪಕ್ಷಿಗಳು ಬೇಸಿಗೆಯಲ್ಲಿ ನೀರು ಕುಡಿದು ಸಂತಸ ಪಡುತ್ತವೆ.

ಲಾಕ್‌ಡೌನ್ ಸಂದರ್ಭದಲ್ಲಿ ಪೇಟೆಗೆ ಹೋಗಬೇಕಾದ ಅವಶ್ಯಕತೆ ಇಲ್ಲದಂತೆ ಮನೆಯ ಕೈದೋಟವೇ ನಮಗೆ ಅಡುಗೆ ಮನೆ ಸಾಮಗ್ರಿಗಳನ್ನು ಒದಗಿಸುತ್ತಿದೆ. ದಿನಗಟ್ಟಲೆ ಟಿ.ವಿ ಮುಂದೆ ಕೂರುವುದಕ್ಕಿಂತ ಒಂದಿಷ್ಟು ಹೊತ್ತು ಕೈದೋಟದಲ್ಲಿ ಕೆಲಸ ಮಾಡಿದರೆ ಅದರಷ್ಟು ಖುಷಿ, ನೆಮ್ಮದಿ ಮತ್ತೊಂದಿಲ್ಲ ಎಂಬುದು ನನ್ನಾಕೆಯ ಅಭಿಪ್ರಾಯ.

ಗಣಪತಿ ಶಿರಳಗಿ, ಸಾಗರ

ರಾಜಕಾರಣಿಗಳ ತಕರಾರೇಕೆ?

ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ದಕ್ಷ ಮತ್ತು ಸೇವಾ ತುಡಿತ ಇರುವ ಅಧಿಕಾರಿ ಎಂಬುದನ್ನು ತಮ್ಮ 11 ವರ್ಷಗಳ ಸೇವಾವಧಿಯಲ್ಲಿ ಸಾಬೀತುಪಡಿಸಿದ್ದಾರೆ. ಈಗ ಮೈಸೂರು ಜಿಲ್ಲೆಯಲ್ಲಿ ಅವರು 24 × 7 ಕೆಲಸ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಂತಸ ವ್ಯಕ್ತಪಡಿಸಿದ್ದಾರೆ. ಆದರೂ ಕೆಲವು ಶಾಸಕರು, ಸಂಸದರು ಇವರ ವಿರುದ್ಧ ಮುಗಿಬೀಳುತ್ತಿದ್ದಾರೆ.

ಚಾಮರಾಜನಗರದಲ್ಲಿ 24 ಮಂದಿ ಕೋವಿಡ್‌ಪೀಡಿತರು ಸಕಾಲದಲ್ಲಿ ಆಕ್ಸಿಜನ್ ಲಭ್ಯವಾಗದೆ ಸತ್ತಾಗ ಅದಕ್ಕೆ ರೋಹಿಣಿಯವರೇ ಕಾರಣವೆಂದರು, ಇವರನ್ನು ಎತ್ತಂಗಡಿ ಮಾಡಿ ಎಂದರು, ನಾವು ಎದುರಿಸುವ ಒಂದೊಂದು ಚುನಾವಣೆ ಒಂದೊಂದು ಐಎಎಸ್ ಪರೀಕ್ಷೆಗೆ ಸಮ ಎಂದರು, ಜಿಲ್ಲೆಯಲ್ಲಿ ರಚನೆಗೊಂಡ ಕ್ರಿಯಾಪಡೆಗೆ ಜಿಲ್ಲಾಧಿಕಾರಿಯ ಹೆಸರೇ ಬೇಡವೆಂದರು. ಜೊತೆಗೆ ಇವರು ತಾಸುಗಟ್ಟಲೆ ಅಧಿಕಾರಿಗಳ ಸಭೆ ನಡೆಸುವ ಬದಲು ಹಳ್ಳಿಗಳಿಗೆ ಭೇಟಿ ನೀಡಲಿ ಎನ್ನುತ್ತಿದ್ದಾರೆ. ಅಂದರೆ ಈ ಅಧಿಕಾರಿ ಅವರ ಅಧಿಕಾರ ಚಲಾಯಿಸಲು, ಆಡಳಿತ ನಡೆಸಲು ಶಾಸಕರಿಗೆ, ಸಂಸದರಿಗೆ ಹೊಂದಿಕೊಂಡು ನಡೆಯಬೇಕೇ? ಈ ಜಿಲ್ಲಾಧಿಕಾರಿಯ ಬಗ್ಗೆ ಇಲ್ಲಿನ ನಾಗರಿಕರಿಗೆ ಏನೇನೂ ತಕರಾರಿಲ್ಲ. ಇರುವುದು ರಾಜಕಾರಣಿಗಳಿಂದ ಮಾತ್ರ. ಇದಕ್ಕೆ ಏನೆನ್ನುವುದು?

ಎಂ.ಕೆ.ವಾಸುದೇವರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವೈದ್ಯ ಪದ್ಧತಿಯ ಟೀಕೆ ತರವಲ್ಲ

● ವಚನಾನಂದ ಸ್ವಾಮೀಜಿ



ನಾನು ಅನುಸರಿಸುತ್ತಿರುವ ಪದ್ಧತಿಯೇ ಶ್ರೇಷ್ಠ ಅನ್ನುವುದು ಕೆಲವು ಸಲ ಸೀಮಿತ ಚೌಕಟ್ಟಿನೊಳಗಣ ತೀರ್ಮಾನ ಎನಿಸಿಬಿಡುತ್ತದೆ. ಅದರಿಂದ ಯಾರಿಗೂ ಪ್ರಯೋಜನವಿಲ್ಲ. ನಮ್ಮ ಮೂಗಿನ ನೇರಕ್ಕೆ ಯೋಚಿಸುವುದರಿಂದ ತೊಂದರೆಗೊಳಗಾಗುವುದು ರೋಗಿಯೇ ಹೊರತು ವೈದ್ಯನಲ್ಲ. ಸರಿಯಾಗಿ ಚಿಕಿತ್ಸೆ ಕೊಡದ ವೈದ್ಯರನ್ನು ಟೀಕಿಸಿದರೆ ತಪ್ಪಲ್ಲ. ಆದರೆ ಒಂದು ಜನಪ್ರಿಯ ವೈದ್ಯಪದ್ಧತಿಯತ್ತ ಬೊಟ್ಟು ಮಾಡಿ ತೋರಿಸುವುದು ಸಮಂಜಸವಲ್ಲ.

ಯೋಗಗುರು ರಾಮದೇವ್ ಅವರು ಅಲೋಪಥಿ ಚಿಕಿತ್ಸಾ ಪದ್ಧತಿಯನ್ನು 'ಸ್ಟುಪಿಡ್ ಸೈನ್ಸ್' ಎಂದು ಕರೆದಿದ್ದಾರೆ. ಅವರ ಆ ಮಾತು ದೇಶದಾದ್ಯಂತ ವ್ಯಾಪಕ ಚರ್ಚೆಗಳನ್ನು ಹುಟ್ಟುಹಾಕಿದೆ.

ಆದರೆ, ಒಂದಂತೂ ಸತ್ಯ. ಅಲೋಪಥಿ ಪದ್ಧತಿಯು ಅಲ್ಲೊಂದು ಇಲ್ಲೊಂದು ಬಾನಗಡಿ ಸೃಷ್ಟಿಸಿರಬಹುದು. ಅದಕ್ಕಿಂತ ಮುಖ್ಯ ಅದು ಉಳಿಸಿದ ಜನರ ಜೀವ, ಅದು ಕೊಟ್ಟ ನೆಮ್ಮದಿ. ತುರ್ತು ಸಂದರ್ಭಗಳಲ್ಲಂತೂ ಇಂಗ್ಲಿಷ್ ಔಷಧ ಅತ್ಯುತ್ತಮ ಎನ್ನುವುದನ್ನು ಮರೆಯಬಾರದು. ಇಲ್ಲಿ ಒಂದು ವಿಷಯವನ್ನು ಹೇಳಬೇಕು. ಅಲೋಪಥಿ ಔಷಧವು ಹೇಗೆ ದೇಹದ ಅನೇಕ ಕಾಯಿಲೆಗಳನ್ನು ಗುಣಪಡಿಸುತ್ತಿದೆಯೇ ಹಾಗೆಯೇ ಪುರಾತನ ಯೋಗಪದ್ಧತಿ ಕೂಡ ದೈಹಿಕ ಮಾತ್ರವಲ್ಲ ಮನೋದೈಹಿಕ ಕಾಯಿಲೆಗಳನ್ನೂ ಶಮನ ಮಾಡುವ ಶಕ್ತಿ ಹೊಂದಿದೆ. ಆಯುರ್ವೇದ ಆಗಲಿ, ಅಲೋಪಥಿ ಆಗಲಿ ಅಥವಾ ಇನ್ನಾವುದೇ ಪರ್ಯಾಯ ಚಿಕಿತ್ಸಾ ಪದ್ಧತಿ ಆಗಿರಲಿ ಅದನ್ನು ಗೌರವಿಸಬೇಕು. ಎಲ್ಲಾ ಚಿಕಿತ್ಸಾ ಪದ್ಧತಿಗಳಿಗೂ ಅದರದ್ದೇ ಆದ ಮಹತ್ವ ಇದೆ. ಹಾಗೆಯೇ ಮಿತಿಯೂ ಇದೆ.

ಹೃದಯ ತಜ್ಞ ಡಾ. ದೇವಿಶೆಟ್ಟಿಯವರು ಒಂದು ಕಡೆ ಹೇಳಿಕೊಂಡಿದ್ದಾರೆ– 'ನನ್ನ ಪತ್ನಿಗೆ ವಿಪರೀತ ಬೆನ್ನುನೋವು ಇತ್ತು. ಎಂಆರ್‌ಐ ಸೇರಿದಂತೆ ಎಲ್ಲಾ ಪರೀಕ್ಷೆಗಳನ್ನು ಮಾಡಿಸಿದ್ರೂ ನೋವು ಕಡಿಮೆ ಆಗಲೇ ಇಲ್ಲ. ಆಗ ಕುಟುಂಬದವರ ಸಲಹೆಯಂತೆ ಅಕ್ಯುಪಂಚರ್ ಚಿಕಿತ್ಸೆಗೆ ಕರೆದೊಯ್ಯಲಾಯ್ತು. ಅಲ್ಲಿ ಆ ಚಿಕಿತ್ಸಕರು ನೆಲದ ಮೇಲೆ ಮಲಗಿಸಿ ಹತ್ತೇ ಹತ್ತು ನಿಮಿಷದ ಅಕ್ಯುಪಂಚರ್ ಚಿಕಿತ್ಸೆ ನೀಡಿದರು. ನೀವು ನಂಬಲ್ಲ, ಆಮೇಲೆ ನನ್ನ ಪತ್ನಿಗೆ ಜೀವಮಾನವಿಡೀ ಬೆನ್ನುನೋವು ಬರಲೇ ಇಲ್ಲ'.

ಡಾ. ದೇವಿಶೆಟ್ಟಿ ಹೇಳೋದು ಇಷ್ಟೆ. ಆ ಚಿಕಿತ್ಸಾ ಪದ್ಧತಿ ಈ ಚಿಕಿತ್ಸಾ ಪದ್ಧತಿ ಅಂತ ಪರಸ್ಪರ ದೂರಿದರೆ ಏನೂ ಪ್ರಯೋಜನವಿಲ್ಲ. ಎಲ್ಲಾ ಚಿಕಿತ್ಸಾ ಪದ್ಧತಿಗಳೂ ಇರಬೇಕು. ಯಾಕೆಂದರೆ ಅಲೋಪಥಿಯಲ್ಲಿ ಗುಣವಾಗದ್ದು ಅಕ್ಯುಪಂಚರ್‌ನಲ್ಲಿ ಆಗಬಹುದು. ಅಕ್ಯುಪಂಚರ್‌ನಲ್ಲಿ ಆಗದ್ದು ಯೋಗದಲ್ಲಾಗಬಹುದು. ಎಲ್ಲದರ ಗುರಿ ಒಂದೇ– ರೋಗಿ ಗುಣಮುಖವಾಗಬೇಕು. ಅದಕ್ಕೆ ಯಾವ ಚಿಕಿತ್ಸಾ ಪದ್ಧತಿ ಆದರೆ ಏನು?

ನಾನು ಅನುಸರಿಸುತ್ತಿರುವ ಪದ್ಧತಿಯೇ ಶ್ರೇಷ್ಠ ಅನ್ನುವುದು ಕೆಲವು ಸಲ ಸೀಮಿತ ಚೌಕಟ್ಟಿನೊಳಗಣ ತೀರ್ಮಾನ ಎನಿಸಿಬಿಡುತ್ತದೆ. ಅದರಿಂದ ಯಾರಿಗೂ ಪ್ರಯೋಜನವಿಲ್ಲ. ನಮ್ಮ ಮೂಗಿನ ನೇರಕ್ಕೆ ಯೋಚಿಸುವುದರಿಂದ ತೊಂದರೆಗೊಳಗಾಗುವುದು ರೋಗಿಯೇ ಹೊರತು ವೈದ್ಯನಲ್ಲ. ಸರಿಯಾಗಿ ಚಿಕಿತ್ಸೆ ಕೊಡದ ವೈದ್ಯರನ್ನು ಟೀಕಿಸಿದರೆ ತಪ್ಪಲ್ಲ. ಆದರೆ ಒಂದು ಜನಪ್ರಿಯ ವೈದ್ಯಪದ್ಧತಿಯತ್ತ ಬೊಟ್ಟು ಮಾಡಿ ತೋರಿಸುವುದು ಸಮಂಜಸವಲ್ಲ.

ವೈದ್ಯನೇ ದೇವರು ಅಂತ ನಂಬಿಕೊಂಡಿರುವ ದೇಶ ನಮ್ಮದು. ಜೀವ ಉಳಿಸುವ ಮತ್ತು ಕೊಲ್ಲುವ ಎರಡೂ ಸಾಧ್ಯತೆ ವೈದ್ಯರ ಕೈಯಲ್ಲಿರುತ್ತದೆ. ಹಾಗಂತ ವೈದ್ಯ ದೇವರಾಗಿಯೇ ಉಳಿದಿದ್ದಾನೆ ಅಂತೇನೂ ಅಲ್ಲ. ಯೋಗ ಕೇವಲ ಯೋಗವಾಗಿಯೇ ಉಳಿದಿದೆ ಅಂತಲ್ಲ. ಎಲ್ಲಾ ಕ್ಷೇತ್ರಗಳನ್ನೂ ಆವರಿಸಿಕೊಂಡ ಹಾಗೆ ವೈದ್ಯ ಕ್ಷೇತ್ರವನ್ನೂ ಯೋಗ ಕ್ಷೇತ್ರವನ್ನೂ ವ್ಯವಹಾರ ಆವರಿಸಿದೆ. ಈಗ ಯೂಟ್ಯೂಬ್ ನೋಡಿಕೊಂಡು ನೀವೊಬ್ಬ ಯೋಗ ಟೀಚರ್ ಆಗಬಹುದು. ಆದರೆ ಅದರಲ್ಲಿ ತಪಶ್ಶಕ್ತಿ ಇರುವುದಿಲ್ಲ. ಬದ್ಧತೆ ಇರುವುದಿಲ್ಲ. ಆಯುರ್ವೇದದ ಪುಸ್ತಕ ಓದಿಕೊಂಡರೆ ಆಯುರ್ವೇದ ವೈದ್ಯ ಆಗಲು ಸಾಧ್ಯವಿಲ್ಲ. ಅದೆಲ್ಲಾ ವ್ಯಾವಹಾರಿಕ ಬದಲಾವಣೆ ಅಷ್ಟೆ. ಅಂಥವರನ್ನು ಪ್ರೋತ್ಸಾಹಿಸಲೂಬಾರದು.

ಈ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದುದು ಸ್ಪರ್ಶ. ರೋಗಿಯನ್ನು ವೈದ್ಯ ಮುಟ್ಟಿಯೇ ಪರೀಕ್ಷಿಸಬೇಕು.

ಡೇವಿಡ್ ಹಾರ್ಟ್‌ಮನ್ ಅನ್ನೋ ಅಂಧ ಡಾಕ್ಟರ್ ಆದ ಕಥೆ ನಿಮಗೆ ಗೊತ್ತಿರಬಹುದು. ಎಂಟನೇ ವಯಸ್ಸಿನಿಂದಲೇ ಅಂಧನಾಗಿದ್ದ ಡೇವಿಡ್ ಹಾರ್ಟ್‌ಮನ್ ವೈದ್ಯನಾಗಬೇಕು ಎಂದು ಆಸೆಪಡುತ್ತಾನೆ. ಕಣ್ಣಿಲ್ಲದ ಹುಡುಗ ವೈದ್ಯಶಾಸ್ತ್ರ ಓದುವುದೇ ಎಂದು ಜನ ನಕ್ಕರು. ಆದರೆ, ಹಾರ್ಟ್‌ಮನ್ ಹಟ ಬಿಡಲಿಲ್ಲ. 1972ರಲ್ಲಿ ಫಿಲಡೆಲ್ಫಿಯಾದ ಟೆಂಪಲ್ ಯೂನಿವರ್ಸಿಟಿ ಸ್ಕೂಲ್ ಆಫ್ ಮೆಡಿಸಿನ್‌ಗೆ ಸೇರುತ್ತಾನೆ. ಕಣ್ಣಿದ್ದವರ ನಡುವೆ ಕಣ್ಣೇ ಇಲ್ಲದ ಹಾರ್ಟ್‌ಮನ್ ಅತ್ಯಂತ ಶ್ರದ್ಧೆಯಿಂದ ನಾಲ್ಕು ವರ್ಷ ಅಭ್ಯಾಸ ಮಾಡಿ, ಡಾಕ್ಟರ್ ಆಗುತ್ತಾನೆ. ಆತನಿಗೆ ಬೇರೆಲ್ಲಾ ಡಾಕ್ಟರ್‌ಗಳಿಗಿಂತ ರೋಗಿಯ ತಲ್ಲಣಗಳು ಹೆಚ್ಚು ಅರ್ಥವಾಗುತ್ತಿದ್ದವು. ವೈದ್ಯನಿಗೆ ಅದೊಂದು ವರದಾನ.

ವೈದ್ಯ ವಿಜ್ಞಾನದ ಹಾಗೆಯೇ ಯೋಗ ವಿಜ್ಞಾನ ಕೂಡ ಜಗತ್ತಿನಾದ್ಯಂತ ಬೆಳೆದಿದೆ. ಪ್ರಾಣಾಯಾಮದ ಆಸನ ಮತ್ತು ಮುದ್ರೆಗಳ ಮೇಲೆ ಸಂಶೋಧನೆಗಳು ಆಗುತ್ತಿವೆ. ಸಾವಿರಾರು ವರ್ಷಗಳ ಇತಿಹಾಸವಿರುವ ಯೋಗ ಪರಿಣಾಮಕಾರಿ ಚಿಕಿತ್ಸಾ ವಿಧಾನವಾಗಿ ಬೆಳೆದು ನಿಂತಿದೆ. ಇನ್ನೂರು ವರ್ಷದ ಇತಿಹಾಸವಿರುವ ಅಲೋಪಥಿ ಚಿಕಿತ್ಸಾ ವಿಧಾನದಲ್ಲಿ ವಾಸಿಯಾಗದ ಎಷ್ಟೋ ಕಾಯಿಲೆಗಳು ಪುರಾತನ ಯೋಗ ಪದ್ಧತಿಯಿಂದ ವಾಸಿಯಾಗಿವೆ. ದೈಹಿಕ ಕಾಯಿಲೆ ಅಷ್ಟೇ ಅಲ್ಲ, ಮಾನಸಿಕವಾಗಿಯೂ ರೋಗಿ ಯೋಗದಿಂದ ನೆಮ್ಮದಿ ಕಾಣಬಲ್ಲ. ಆದ್ರೆ ಅಲೋಪಥಿಯಲ್ಲಿ ದೈಹಿಕವಾಗಿ ಚಿಕಿತ್ಸೆ ದೊರಕುತ್ತದೆ ಅಷ್ಟೆ, ಮಾನಸಿಕವಾಗಿ ಅಲ್ಲ. ಯೋಗಕ್ಕೊಂದು ದೈವೀ ಗುಣವಿದೆ. ಅಲೋಪಥಿಗೆ ಅದಿಲ್ಲ.

ಇದೊಂದು ಅತ್ಯಂತ ಸಂಕಷ್ಟಕಾಲ. ಯಾರನ್ನೋ ದೂಷಿಸುವ ಯಾವುದೋ ಪದ್ಧತಿಯನ್ನು ಧಿಕ್ಕರಿಸುವ ಕಾಲವಲ್ಲ ಇದು. ಅಲೋಪಥಿಯೋ ಆಯುರ್ವೇದವೋ ಯೋಗವೋ ಮತ್ತೊಂದೋ, ಯಾವುದು ಬೇಕೋ ಅದನ್ನು ರೋಗಿ ಅನುಸರಿಸಲಿ. ಅದು ಅವನ ವಿವೇಚನೆಗೆ ಬಿಟ್ಟಿದ್ದು. ನಿಮಗೆ ಬೇಕಾದ ಚಿಕಿತ್ಸಾ ವಿಧಾನ ಅನುಸರಿಸಿ ನಿಮ್ಮ ನಿಮ್ಮ ನೋವನ್ನು ಕಡಿಮೆ ಮಾಡಿಕೊಳ್ಳಿ. ಯಾಕೆಂದರೆ ಕೊರೊನಾ ಸೋಂಕಿನಿಂದ ಜೀವ ಉಳಿಸಿಕೊಳ್ಳುವುದೇ ಈಗ ದೊಡ್ಡ ಸವಾಲಾಗಿದೆ.

ಲೇಖಕ: ಪಂಚಮಸಾಲಿ ಜಗದ್ಗುರು, ಹರಿಹರ

ನಿಯಮ ಬದಲಾವಣೆಗೆ ಬೇಡಿಕೆ: ಕೇಂದ್ರ ತಿರುಗೇಟು

ಸರ್ಕಾರದ ಜತೆ ಟ್ವಿಟರ್ ಜಟಾಪಟಿ

ಪ್ರಜಾವಾಣಿ ವಾರ್ತೆ



ಟ್ವಿಟರ್ ಒಂದು ಖಾಸಗಿ ಸಂಸ್ಥೆಯಷ್ಟೆ. ಸಾರ್ವಭೌಮ ಭಾರತದ ಸರ್ಕಾರವು ರಚಿಸುವ ಕಾನೂನು ಹೇಗಿರಬೇಕು ಎಂದು ಹೇಳುವ ಅಧಿಕಾರ ಟ್ವಿಟರ್‌ಗೆ ಇಲ್ಲ
ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ

ನವದೆಹಲಿ: 'ಭಾರತದಲ್ಲಿ ನಮ್ಮ ಸೇವೆಯನ್ನು ಮುಂದುವರಿಸಲು, ಇಲ್ಲಿನ ಕಾನೂನುಗಳನ್ನು ಪಾಲಿಸಲು ಬದ್ಧರಾಗಿದ್ದೇವೆ. ಆದರೆ, ಭಾರತದ ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಜಾರಿಗೆ ತರಲು ಪೊಲೀಸರು ಬೆದರಿಕೆ ತಂತ್ರದ ಮೊರೆ ಹೋಗುವುದು ಕಳವಳಕಾರಿ ಸಂಗತಿ' ಎಂದು ಟ್ವಿಟರ್ ಆತಂಕ ವ್ಯಕ್ತಪಡಿಸಿದೆ.

'ಸಂಸ್ಥೆಯು ನೇಮಕ ಮಾಡುವ ನೋಡಲ್ ಅಧಿಕಾರಿಯನ್ನೇ, ಡಿಜಿಟಲ್ ವೇದಿಕೆಯಲ್ಲಿ ಪ್ರಕಟವಾಗುವ ಎಲ್ಲಾ ವಿಷಯಕ್ಕೂ ಹೊಣೆಗಾರರನ್ನಾಗಿ ಮಾಡುವುದು ಅತ್ಯಂತ ಕಳವಳಕಾರಿ ಸಂಗತಿ. ನೂತನ ನಿಯಮಗಳ ಪ್ರಕಾರ ಎಲ್ಲಾ ವಿಷಯಗಳನ್ನು ಪೂರ್ವಭಾವಿಯಾಗಿ ಪರಿಶೀಲನೆಗೆ ಒಳಪಡಿಸಬೇಕು, ಅವುಗಳ ಮೇಲೆ ಕಣ್ಗಾವಲು ಇಡಬೇಕು. ಅಲ್ಲದೆ ನಮ್ಮ ಗ್ರಾಹಕರ ಸಂಪೂರ್ಣ ವಿವರವನ್ನು ಪಡೆದುಕೊಳ್ಳುವ ಅಧಿಕಾರವು, ಈ ನಿಯಮಗಳ ಮೂಲಕ ಸರ್ಕಾರಕ್ಕೆ ದೊರೆಯುವುದು ಆತಂಕದ ವಿಚಾರ. ಈ ಎಲ್ಲಾ ಅಪಾಯಕಾರಿ ಅಂಶಗಳು ಮುಕ್ತ ಮತ್ತು ಪ್ರಜಾಸತ್ತಾತ್ಮಕ ನೀತಿಗಳಿಗೆ ವ್ಯತಿರಿಕ್ತವಾಗಿವೆ' ಎಂದು ಟ್ವಿಟರ್ ಹೇಳಿದೆ.

'ಭಾರತದಲ್ಲಿನ ನಮ್ಮ ನೌಕರರ ಬಗ್ಗೆ ಆತಂಕ ಸೃಷ್ಟಿಯಾಗಿದೆ. ನಾವು ಸೇವೆ ನೀಡುತ್ತಿರುವ ಜನರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬರಲಿರುವ ಅಪಾಯವು ಕಳವಳಕ್ಕೆ ಕಾರಣವಾಗಿದೆ. ಭಾರತದಲ್ಲಿನ ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳು ಆಕ್ರಮಣಕಾರಿಯಾಗಿವೆ' ಎಂದು ಟ್ವಿಟರ್ ಹೇಳಿದೆ.

ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರವನ್ನು ಅವಹೇಳನ ಮಾಡಲು ಕಾಂಗ್ರೆಸ್ ಟೂಲ್‌ಕಿಟ್ ಸಿದ್ಧಪಡಿಸಿದೆ ಎಂದು ಬಿಜೆಪಿಯ ಸಂಬಿತ್ ಪಾತ್ರಾ ಅವರು ಟ್ವೀಟ್ ಮಾಡಿದ್ದ ದಾಖಲೆಗಳನ್ನು ಟ್ವಿಟರ್, 'ತಿರುಚಿದ ಮಾಹಿತಿ' ಎಂದು ಟ್ಯಾಗ್ ಮಾಡಿತ್ತು. ಈ ನಿರ್ಧಾರಕ್ಕೆ ಬರಲು ಆಧಾರಗಳೇನು ಎಂದು ದೆಹಲಿ ಪೊಲೀಸರು ಟ್ವಿಟರ್ ಸಿಬ್ಬಂದಿಗೆ ನೋಟಿಸ್ ನೀಡಿದ್ದರು. ನೋಟಿಸ್ ನೀಡಲು ಟ್ವಿಟರ್‌ನ ದೆಹಲಿಯಲ್ಲಿನ ಕಚೇರಿಗೆ ಭೇಟಿ ನೀಡಿದ್ದರು. ಇದರ ಬೆನ್ನಲ್ಲೇ ಟ್ವಿಟರ್ ಈ ಹೇಳಿಕೆ ನೀಡಿದೆ.

ಟ್ವಿಟರ್‌ಗೆ ಸರ್ಕಾರ ತಾಕೀತು

'ಟ್ವಿಟರ್ ಗುರುವಾರ ನೀಡಿರುವ ಹೇಳಿಕೆಯನ್ನು ಭಾರತ ಸರ್ಕಾರವು ಖಂಡಿಸುತ್ತದೆ. ದೇಶದ ಜನರ ಅಭಿಪ್ರಾಯ ಪಡೆದು, ಕರಡು ನಿಯಮಗಳಿಗೆ ಬಂದ ಆಕ್ಷೇಪಗಳನ್ನು ಪರಿಗಣಿಸಿಯೇ ಈ ನಿಯಮಗಳನ್ನು ರೂಪಿಸಲಾಗಿದೆ. ಇಲ್ಲಿನ ಕಾನೂನುಗಳು ಹೇಗಿರಬೇಕು ಎಂಬುದನ್ನು ಇಲ್ಲಿನ ಸಾರ್ವಭೌಮ ಸರ್ಕಾರಕ್ಕೆ, ಕೇವಲ ಒಂದು ಖಾಸಗಿ ಕಂಪನಿ ಹೇಳುವುದರಲ್ಲಿ ಅರ್ಥವಿಲ್ಲ. ಸುಮ್ಮನೆ ಇಲ್ಲಿನ ಕಾನೂನನ್ನು ಪಾಲಿಸಿ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವು ತಾಕೀತು ಮಾಡಿದೆ.

ಟ್ವಿಟರ್ ನೀಡಿರುವ ಹೇಳಿಕೆಗೆ ಪ್ರತಿಯಾಗಿ ಸಚಿವಾಲಯವು ಗುರುವಾರ ಸಂಜೆ ಹೇಳಿಕೆ ಬಿಡುಗಡೆ ಮಾಡಿದೆ. 'ಭಾರತದಲ್ಲಿನ ನಿಯಮಗಳನ್ನು ಪಾಲಿಸುತ್ತೇವೆ ಎಂದು ಟ್ವಿಟರ್ ಹೇಳುತ್ತದೆ. ಆದರೆ ಇಲ್ಲಿನ ಕಾನೂನಿನ ಅನ್ವಯ ಸ್ಥಳೀಯ ನೋಡಲ್ ಅಧಿಕಾರಿಯನ್ನು ನೇಮಿಸಲು ನಿರಾಕರಿಸುತ್ತದೆ. ಭಾರತದಲ್ಲಿನ ಟ್ವಿಟರ್ ಬಳಕೆದಾರರ ಪ್ರತಿ ಕುಂದುಕೊರತೆಯನ್ನೂ ಅಮೆರಿಕದಲ್ಲಿ ಕೂತ ಅಧಿಕಾರಿ ಪರಿಶೀಲಿಸಬೇಕಿದೆ. ಇದರಲ್ಲಿ ಟ್ವಿಟರ್‌ನ ಸ್ವಹಿತಾಸಕ್ತಿ ಮಾತ್ರ ಇದೆ' ಎಂದು ಸಚಿವಾಲಯವು ಆರೋಪಿಸಿದೆ.

'ಟ್ವಿಟರ್ ಇಲ್ಲಿನ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದೆ. ಭಾರತ-ಚೀನಾ ಗಡಿ ಸಂಘರ್ಷದ ವೇಳೆ ಲಡಾಖ್ ಅನ್ನು ಚೀನಾದ್ದು ಎಂದು ಟ್ವಿಟರ್ ತೋರಿಸಿತ್ತು. ಜನವರಿ 26ರ ಹಿಂಸಾಚಾರ ನಡೆಯುವ ಮುನ್ನ, ಹಿಂಸಾಚಾರವನ್ನು ಉದ್ದೀಪಿಸುವ ಟ್ವೀಟ್‌ಗಳನ್ನು ಅಳಿಸಿ ಎಂಬ ಮನವಿಯನ್ನು ತಿರಸ್ಕರಿಸಿತ್ತು. ಹಿಂಸಾಚಾರದ ನಂತರ ಆ ಟ್ವೀಟ್‌ಗಳನ್ನು ಅಳಿಸಿತು. ಕೋವಿಡ್ ಲಸಿಕೆಯ ವಿರುದ್ಧ ಅಭಿಯಾನ ನಡೆಸಲು ಟ್ವಿಟರ್ ಬಳಕೆಯಾಯಿತು. ಇದನ್ನು ಟ್ವಿಟರ್ ತಡೆಯಲಿಲ್ಲ' ಎಂದು ಸಚಿವಾಲಯವು ಆರೋಪಿಸಿದೆ.

'ಅಗತ್ಯವಿದ್ದರೆ ಹಿಂದೆಸರಿಯುತ್ತೇವೆ'

'ಮುಕ್ತ ಮತ್ತು ಸ್ವತಂತ್ರ ಅಂತರ್ಜಾಲ ಎಂಬುದು ಮೂಲಭೂತವಾದುದು. ಭಾರತವು ಇದನ್ನು ಪಾಲಿಸಿಕೊಂಡೇ ಬಂದಿದೆ. ಕಾನೂನಾತ್ಮಕ ಪ್ರಕ್ರಿಯೆಗಳನ್ನು ಗೂಗಲ್ ಗೌರವಿಸುತ್ತದೆ. ಆದರೆ ಇವುಗಳಿಂದ ಹಿಂದೆ ಸರಿಯುವ ಪ್ರಸಂಗ ಬಂದರೆ, ಹಿಂದೆ ಸರಿಯುತ್ತದೆ. ನಾವು ಜಗತ್ತಿನ ಎಲ್ಲೆಡೆ ಇಂತಹ ಸಮತೋಲನವನ್ನು ಕಾಪಾಡಿಕೊಂಡು ಬಂದಿದ್ದೇವೆ' ಎಂದು ಗೂಗಲ್ ಸಿಇಒ ಸುಂದರ್ ಪಿಚೈ ಹೇಳಿದ್ದಾರೆ.

'ಮಾಹಿತಿ ಪಡೆಯುವ ವ್ಯವಸ್ಥೆ ಬೇಕು'

ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶಗಳ ಮೂಲ ಪತ್ತೆ ಮಾಡುವ ನಿಯಮಗಳ ವಿರುದ್ಧ ವಾಟ್ಸ್‌ಆ್ಯಪ್, ದೆಹಲಿ ಹೈಕೋರ್ಟ್ ಮೆಟ್ಟಿಲೇರಿದೆ. ಆದರೆ, 'ದ್ವೇಷ-ಹಿಂಸಾಚಾರ ಉತ್ತೇಜಿಸುವ, ನೀಲಿಚಿತ್ರ, ಮಾದಕವಸ್ತು ಮತ್ತು ಅಕ್ರಮ ಶಸ್ತ್ರಾಸ್ತ್ರ ಖರೀದಿಯನ್ನು ಉತ್ತೇಜಿಸುವ ಸಂದೇಶಗಳ ಮೂಲ ಪತ್ತೆ ಮಾಡುವ ವ್ಯವಸ್ಥೆ ಇರಬೇಕು' ಎಂದು ಸುಪ್ರೀಂ ಕೋರ್ಟ್ 2019ರಲ್ಲೇ ಹೇಳಿತ್ತು.

ನ್ಯಾಯಮೂರ್ತಿಗಳಾದ ದೀಪಕ್ ಗುಪ್ತಾ ಮತ್ತು ಅನಿರುದ್ಧ ಬೋಸ್ ಅವರಿದ್ದ ಪೀಠವು ಫೇಸ್‌ಬುಕ್ ಮತ್ತು ಭಾರತ ಸರ್ಕಾರದ ನಡುವಣ ಪ್ರಕರಣವೊಂದರಲ್ಲಿ 2019ರ ಸೆಪ್ಟೆಂಬರ್ 24ರಂದು ಹೀಗೆ ಹೇಳಿತ್ತು.

'ಆದರೆ ಇಂತಹ ಮಾಹಿತಿ ಪಡೆಯುವ ವ್ಯವಸ್ಥೆಯು ಸುಲಭವಾಗಿ ಲಭ್ಯವಿದ್ದರೆ, ಅದು ನಾಗರಿಕರ ಖಾಸಗಿತನದ ಮೂಲಭೂತ ಹಕ್ಕಿಗೆ ಧಕ್ಕೆಯಾಗುತ್ತದೆ. ಮಾಹಿತಿ ಪಡೆಯುವ ಇಂತಹ ಪ್ರಕ್ರಿಯೆಯನ್ನು ವಿಶೇಷ ಸಂದರ್ಭದಲ್ಲಷ್ಟೇ ನಡೆಸಬಹುದು. ಆದರೆ, ಯಾವ ವ್ಯಕ್ತಿಯ ಖಾಸಗಿತನಕ್ಕೂ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕಾದುದು ಅತ್ಯಗತ್ಯ' ಎಂದೂ ಸುಪ್ರೀಂ ಕೋರ್ಟ್ ಪೀಠವು ಹೇಳಿತ್ತು.

ಆಧುನಿಕ ಚಿಕಿತ್ಸಾ ಪದ್ಧತಿ ಪ್ರಶ್ನಿಸಿದ ರಾಮದೇವ್ ವಿರುದ್ಧ ವೈದ್ಯಕೀಯ ಮಂಡಳಿ ಕೆಂಡ

ಅಲೋಪಥಿ ಜತೆ ಯೋಗಗುರು ಗುದ್ದಾಟ

ಯೋಗಗುರು ರಾಮದೇವ್ ಮತ್ತು ಭಾರತೀಯ ವೈದ್ಯಕೀಯ ಮಂಡಳಿ (ಐಎಂಎ) ನಡುವಿನ ಜಟಾಪಟಿ ಜೋರಾಗಿದೆ. ಅಲೋಪಥಿ ವೈದ್ಯಕೀಯ ಪದ್ಧತಿಗೆ ಕೊರೊನಾ ವೈರಸ್‌ಗೆ ಚಿಕಿತ್ಸೆ ನೀಡುವ ಸಾಮರ್ಥ್ಯವಿದೆಯೇ ಎಂಬುದಾಗಿ ರಾಮದೇವ್ ಪ್ರಶ್ನಿಸುವ ಮೂಲಕ ವಿವಾದದ ಕಿಡಿ ಹೊತ್ತಿಕೊಂಡಿತು. ಅಲೋಪಥಿ ಚಿಕಿತ್ಸೆ ಪಡೆದಿದ್ದರಿಂದಲೇ ಲಕ್ಷಾಂತರ ಜನರು ಸಾಯುವಂತಾಗಿದೆ ಎಂದು ಪ್ರತಿಪಾದಿಸಿದರು.

ರಾಮದೇವ್ ಅವರ ಈ ಹೇಳಿಕೆಯು ವೈದ್ಯಕೀಯ ಲೋಕದಲ್ಲಿ ಆಕ್ರೋಶ ಹುಟ್ಟುಹಾಕಿತು. ಆಧುನಿಕ ವೈದ್ಯಪದ್ಧತಿಯ ಸಾಮರ್ಥ್ಯವನ್ನು ಪ್ರಶ್ನಿಸಿದ ರಾಮದೇವ್ ವಿರುದ್ಧ ವೈದ್ಯಕೀಯ ಮಂಡಳಿ ಕೆಂಡವಾಯಿತು. 'ರಾಮದೇವ್ ಅವರು ಇಂತಹ ಹೇಳಿಕೆ ನೀಡಿದರೆ, ಅವರ ಬೆಂಬಲಿಗರು ಹಾಗೂ ಅನುಯಾಯಿಗಳು ಅವರ ಮಾತನ್ನು ನಿಜ ಎಂದುಕೊಳ್ಳುತ್ತಾರೆ. ಆಧುನಿಕ ವೈದ್ಯಕೀಯ ಪದ್ಧತಿ ಬಗ್ಗೆ ಸಂಶಯ ಮೂಡುತ್ತದೆ. ಜನರಲ್ಲಿ ಗೊಂದಲ ಶುರುವಾಗುತ್ತದೆ' ಎಂದು ಮಂಡಳಿಯು ಕಳವಳ ವ್ಯಕ್ತಪಡಿಸಿತ್ತು.

ಆಕ್ರೋಶಗೊಂಡ ಮಂಡಳಿಯು ರಾಮದೇವ್ ಬಂಧನಕ್ಕೂ ಪಟ್ಟು ಹಿಡಿಯಿತು. ಅಲ್ಲದೇ, ₹1,000 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆ ಹೂಡಿತು. 'ರಾಮದೇವ್ ಅವರು ತಮ್ಮ ಹೇಳಿಕೆಗೆ 15 ದಿನದೊಳಗೆ ಕ್ಷಮೆ ಯಾಚಿಸಬೇಕು. ಇಲ್ಲವಾದಲ್ಲಿ ಸಾವಿರ ಕೋಟಿ ರೂಪಾಯಿ ಪರಿಹಾರ ನೀಡಬೇಕು' ಎಂದು ಮಂಡಳಿ ತಿಳಿಸಿತ್ತು.


'ಸ್ವತಃ ವೈದ್ಯರಾಗಿರುವ ಕೇಂದ್ರ ಸಚಿವ ಹರ್ಷವರ್ಧನ್ ಅವರು ರಾಮದೇವ್ ಅವರ ಹೇಳಿಕೆಯನ್ನು ಒಪ್ಪುತ್ತಾರೆಯೇ' ಎಂದು ಐಎಂಎ ಪ್ರಶ್ನಿಸಿತ್ತು. ಹರ್ಷವರ್ಧನ್ ಅವರು ರಾಮದೇವ್ ವಿರುದ್ಧ ಕ್ರಮಕ್ಕೆ ಮುಂದಾಗಬೇಕು. ಇಲ್ಲವೇ, ರಾಮದೇವ್ ಹೇಳಿದ ಹಾಗೆ ಅಲೋಪಥಿ ವೈದ್ಯಕೀಯ ಪದ್ಧತಿ ಸರಿಯಿಲ್ಲ ಎಂದು ಪರಿಗಣಿಸಿ, ಇಡೀ ವೈದ್ಯ ಪದ್ಧತಿಗೆ ತಿಲಾಂಜಲಿ ಹಾಡಬೇಕು' ಎಂದು ಮಂಡಳಿ ಪಟ್ಟು ಹಿಡಿಯಿತು.

ವಿವಾದದಲ್ಲಿ ಮಧ್ಯಪ್ರವೇಶಿಸಿದ ಸಚಿವ ಹರ್ಷವರ್ಧನ್, ಹೇಳಿಕೆ ವಾಪಸ್ ಪಡೆಯುವಂತೆ ರಾಮದೇವ್‌ಗೆ ಮನವಿ ಮಾಡಿದರು. ಎಲ್ಲೆಡೆಯಿಂದ ಬಂದ ಒತ್ತಡದ ಕಾರಣ, ರಾಮದೇವ್ ಅವರು ತಮ್ಮ ಹೇಳಿಕೆಯನ್ನು ವಾಪಸ್ ಪಡೆದರು. ಆದರೂ ಅಲೋಪಥಿ ಬಗ್ಗೆ ಅವರು 25 ಪ್ರಶ್ನೆಗಳಿರುವ ಬಹಿರಂಗ ಪತ್ರ ಬರೆದರು. ಟ್ವಿಟರ್‌ನಲ್ಲಿ ಪ್ರಕಟಿಸಿದ ಈ ಪತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಜನರು ಹಂಚಿಕೊಂಡಿದ್ದಾರೆ.

'ಅವರಪ್ಪ ಬಂದರೂ ಬಂಧಿಸಲಾಗದು'

ತಮ್ಮ ಹೇಳಿಕೆ ವಾಪಸ್ ಪಡೆದರೂ ರಾಮದೇವ್ ಅವರಿಗೆ ಐಎಂಎ ಬಗೆಗಿನ ಸಿಟ್ಟು ಹೋಗಿಲ್ಲ. ಮಾನನಷ್ಟ ಮೊಕದ್ದಮೆ ಹೂಡಿ, ಬಂಧನಕ್ಕೆ ಆಗ್ರಹಿಸಿರುವುದಕ್ಕೆ ಅವರು ಭಾರಿ ಸಿಟ್ಟು ಮಾಡಿಕೊಂಡಿದ್ದಾರೆ. 'ಅವರಪ್ಪ ಬಂದರೂ ನನ್ನನ್ನು ಬಂಧಿಸಲು ಸಾಧ್ಯವಿಲ್ಲ' ಎಂದು ರಾಮದೇವ್ ತಿರುಗೇಟು ನೀಡುವ ಮೂಲಕ ವಿವಾದವನ್ನು ಈಗಲೂ ಜೀವಂತವಾಗಿಟ್ಟಿದ್ದಾರೆ.

ವೈರಲ್ ಆಗಿರುವ 40 ಸೆಕೆಂಡ್‌ನ ವಿಡಿಯೊದಲ್ಲಿ ರಾಮದೇವ್ ಅವರು ತಾಕತ್ತಿದ್ದರೆ ತಮ್ಮನ್ನು ಬಂಧಿಸಿ ಎಂದು ಅಧಿಕಾರಿಗಳಿಗೆ ಸವಾಲು ಹಾಕುತ್ತಿರುವ ದೃಶ್ಯವಿದೆ. ಕೊರೊನಾ ವೈರಸ್ ಚಿಕಿತ್ಸೆ ಹಾಗೂ ಆಧುನಿಕ ವೈದ್ಯಪದ್ಧತಿ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡುತ್ತಿರುವ ರಾಮದೇವ್ ಅವರನ್ನು ದೇಶದ್ರೋಹ ತಡೆ ಕಾಯ್ದೆಯಡಿ ಬಂಧಿಸುವಂತೆ ಐಎಂಎ ಮನವಿ ಮಾಡಿದ್ದಕ್ಕೆ ಪ್ರತಿಯಾಗಿ ರಾಮದೇವ್ ಈ ಸವಾಲು ಹಾಕಿದ್ದಾರೆ ಎನ್ನಲಾಗಿದೆ.



ಬಾಬಾ ರಾಮದೇವ್

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಫ್ರಾನ್ಸ್‌ನ ನೊಬೆಲ್ ಪುರಸ್ಕೃತ ವಿಜ್ಞಾನಿ ಲುಚ್ ಮೊಂಟಾನಿಯೆರ್ ಅವರು ಲಸಿಕೆ ಕುರಿತು ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ವೈರಲ್ ಆಗಿದೆ. 'ಕೋವಿಡ್ ತಡೆ ಲಸಿಕೆ ಪಡೆದವರು ಎರಡು ವರ್ಷ ಮಾತ್ರ ಬದುಕುತ್ತಾರೆ. ಅದಕ್ಕಿಂತ ಹೆಚ್ಚು ದಿನ ಬದುಕಲಾರರು. ಲಸಿಕೆಯಿಂದ ವೈರಾಣು ರೂಪಾಂತರಗೊಳ್ಳುತ್ತವೆ. ಎಲ್ಲರಿಗೂ ಲಸಿಕೆ ಹಾಕುವುದು ಕ್ಷಮಿಸಲಾರದ ತಪ್ಪು' ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ ಎಂಬುದಾಗಿ ಸಾಮಾಜಿಕ ಜಾಲತಾಣ ಬಳಕೆದಾರರು ಚರ್ಚಿಸುತ್ತಿದ್ದಾರೆ.



ಲುಚ್ ಅವರು ಮಾತನಾಡಿದ್ದಾರೆ ಎನ್ನಲಾದ ವಿಡಿಯೊವನ್ನು ಪ್ರಸಾರ ಮಾಡಿರುವ ಆರ್‌ಎಐಆರ್ ಫೌಂಡೇಷನ್, ಲುಚ್ ಅವರ ಮಾತುಗಳನ್ನು ಆಧರಿಸಿದ ವರದಿಯನ್ನು ಪ್ರಕಟಿಸಿದೆ. ಆದರೆ ವರದಿಯಲ್ಲಿ ಎಲ್ಲಿಯೂ 'ಲಸಿಕೆ ಹಾಕಿಸಿಕೊಂಡವರು 2 ವರ್ಷಗಳಲ್ಲಿ ಸಾಯುತ್ತಾರೆ' ಎಂದು ಉಲ್ಲೇಖಿಸಿಲ್ಲ ಎಂದು ಆಲ್ಟ್ ನ್ಯೂಸ್ ಹಾಗೂ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಗಳು ಸ್ಪಷ್ಟಪಡಿಸಿವೆ. ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ಕೂಡ ಲುಚ್ ಅವರ ಹೇಳಿಕೆಯನ್ನಾಧರಿಸಿ ಓಡಾಡುತ್ತಿರುವ ಪೋಸ್ಟರ್ ತಪ್ಪು ಮಾಹಿತಿ ಹೊಂದಿದೆ ಎಂದು ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಮೇ 28, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ದ್ವಿತೀಯ ಗಂ. 16-2 (ಹ. 12-25) ಶುಕ್ರವಾರ ನಿತ್ಯ ನಕ್ಷತ್ರ ಮೂಲ ಗಂ. 43-41 (ರಾ. 11-28) ಸಾಧ್ಯ ನಾಮ ಯೋಗ ಗಂ 30-37 ಗರಜ ಕರಣ ಗಂ. 16-2 ವಿಷ ಗಂ. 39-54 ಅಮೃತ ಗಂ. 28-50 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-56 ಸೂರ್ಯಾಸ್ತ: 6-37 ಅದೃಷ್ಟ ಸಂಖ್ಯೆ 3, 7

ಮೇಷ: ಹಣಕಾಸಿನ ಪರಿಸ್ಥಿತಿ ಉತ್ತಮಗೊಂಡು ನೆಮ್ಮದಿ. ಯತ್ನಿಸಿದ ಕಾರ್ಯಗಳು ಶೀಘ್ರದಲ್ಲಿ ಯಶಸ್ಸು. ಮಕ್ಕಳಿಂದ ಸಂತೋಷದ ನಡೆಗಳು ಕಂಡುಬರುತ್ತವೆ. ಒಟ್ಟಾರೆ ದಿನವಿಡೀ ಸಂತಸವನ್ನು ಕಾಣಲಿದ್ದೀರಿ.

ವೃಷಭ: ಹಿರಿಯರ ಹಿತ ನುಡಿಗಳನ್ನು ಮನ್ನಿಸಿ ಅವರ ಆರೋಗ್ಯದ ಕಡೆಗೆ ಗಮನ ವಹಿಸಿ. ಬೇರೆಯವರ ಥಳುಕು ಬಳುಕಿನ ಮಾತಿಗೆ ಮರುಳಾಗಿ ಮೋಸಹೋಗುವ ಸಾಧ್ಯತೆ. ದಿನದ ಮಟ್ಟಿಗೆ ದೂರದ ಪ್ರಯಾಣ ಬೇಡ.

ಮಿಥುನ: ನಿಮ್ಮ ಇಂದಿನ ಕೆಲಸ–ಕಾರ್ಯಗಳಲ್ಲಿ ಉತ್ತಮ ಪ್ರಗತಿ. ದೂರದ ಪ್ರಯಾಣ ಅಷ್ಟೊಂದು ಸಂತಸ ತರದು. ಮಕ್ಕಳಿಂದ ಮನಸ್ಸಿಗೆ ಸಂತಸ. ಸಂಗಾತಿಯು ನಿಮ್ಮ ಚಿಂತೆಗಳನ್ನು ದೂರಮಾಡಲಿದ್ದಾರೆ.

ಕರ್ಕಾಟಕ: ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಪಡೆಯುವವರ ವಿಷಯದಲ್ಲಿ ಎಚ್ಚರದಿಂದಿರುವುದು ಒಳಿತು. ಬಾಲ ಬಡುಕರನ್ನು ದಿನದಮಟ್ಟಿಗೆ ದೂರವಿಡಿ.

ಸಿಂಹ: ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರಿಕೆ ಅಗತ್ಯ. ವಿದ್ಯಾರ್ಥಿಗಳಿಗೆ ಗುರು ವೃಂದದವರಿಂದ ಸೂಕ್ತ ಮಾರ್ಗದರ್ಶನ ದೊರೆಯಲಿದೆ. ಓದಿನಲ್ಲಿ ಯಶಸ್ಸು.

ಕನ್ಯಾ: ನಿಮ್ಮ ವಿರುದ್ಧ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುವ ಸಾಧ್ಯತೆಯಿದ್ದು, ಆ ಬಗ್ಗೆ ತಲೆಕೆಡಿಸಿಕೊಳ್ಳದೇ ಮುಗ್ಧತೆ ಕಾಪಾಡುವುದು ಒಳ್ಳೆಯದು. ಸಹೋದರಿಯರಿಂದ ಸಕಾಲಿಕ ಸಾಂತ್ವನ.

ತುಲಾ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರವಾಗಲಿದೆ. ವ್ಯಾಪಾರಸ್ಥರಿಗೆ ಗಣನೀಯ ಲಾಭ.

ವೃಶ್ಚಿಕ: ಮನಸ್ಸಿನಲ್ಲಿ ಹರಿಯುತ್ತಿರುವ ಪ್ರೀತಿ ಪ್ರೇಮಗಳ ಹುಚ್ಚು ಹೊಳೆಗೆ ಲಗಾಮು ಹಾಕಿಕೊಳ್ಳಿ. ಸ್ನೇಹದ ವಿಷಯದಲ್ಲಿ ಎಡವಿ ಬೀಳುವ ಸಾಧ್ಯತೆ. ಅಪರಿಚಿತ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಎಚ್ಚರವಿರಲಿ.

ಧನು: ಗೆಳೆಯರೊಂದಿಗೆ ಸಮಾಲೋಚನೆಯ ಸಾಧ್ಯತೆ. ಕೆಲಸಕಾರ್ಯಗಳಲ್ಲಿ ನಿಮ್ಮ ಸ್ವಭಾವದಿಂದಾಗಿ ಹಿನ್ನಡೆ. ದೃಢನಿರ್ಧಾರದಿಂದ ವ್ಯವಹರಿಸಿ. ಹಿರಿಯರ ಬೆಂಬಲದಿಂದಾಗಿ ಯಶಸ್ಸು. ಶನೀಶ್ವರ ದೇವರ ಸ್ಮರಣೆ ಉಚಿತ.

ಮಕರ: ಸಾಲ ಕೊಟ್ಟವರು ಎಡಬಿಡದೆ ಮರುಪಾವತಿಗಾಗಿ ತಗಾದೆ ಹೂಡಬಹುದು. ದ್ವೇಷಕ್ಕೆ ಮುಂದಾಗದೇ ಉಪಾಯದಿಂದ ಪಾರಾಗುವ ಬಗ್ಗೆ ಯೋಚಿಸಿ. ಸಂಗಾತಿಯೊಂದಿಗೆ ಸಮಾಲೋಚಿಸಿ ಉತ್ತಮ ನಿರ್ಣಯ ಕೈಗೊಳ್ಳಿ.

ಕುಂಭ: ಸತ್ಯವನ್ನು ಬಯಲುಗೊಳಿಸಲು ಹೋಗಿ ಅವಘಡಕ್ಕೆ ತುತ್ತಾಗುವ ಸಾಧ್ಯತೆ. ಅಂತಹ ಸಂದರ್ಭಗಳನ್ನು ಮುಂದೂಡುವುದೇ ಲೇಸು. ವಾಹನ ಖರೀದಿ ಯೋಗ. ಯಂತ್ರೋಪಕರಣಗಳ ವ್ಯವಹಾರದಲ್ಲಿ ಅಧಿಕ ಲಾಭ.

ಮೀನ: ಸಂಬಂಧವಿಲ್ಲದ ವಿಷಯಗಳು ನಿಮ್ಮನ್ನು ಗೊಂದಲಕ್ಕೆ ಸಿಕ್ಕಿಸುವ ಸಾಧ್ಯತೆ. ಅಂತಹ ವಿಷಯಗಳಲ್ಲಿ ಅತ್ಯುತ್ಸಾಹ ಸಲ್ಲ. ದೇವತಾ ದರ್ಶನ ಭಾಗ್ಯ. ಆರೋಗ್ಯದಲ್ಲಿ ವೃದ್ಧಿಯಾಗಿ ಸಂತಸ ಮೂಡುವುದು.

ನಿಮ್ಮ ಜನ್ಮದಿನ 28-ಮೇ ಈ ದಿನ ಅತ್ಯಂತ ಶುಭಕರ. ಪ್ರಾಪ್ತ ವಯಸ್ಕರಿಗೆ ವಿವಾಹ ಸಂಬಂಧಗಳು ಕೂಡಿ ಬರಲಿವೆ. ಹಿರಿಯ ವಯಸ್ಸಿನವರಿಗೆ ಒಂಟಿತನ ಕಾಡುವ ಸಾಧ್ಯತೆ. ವಾಣಿಜ್ಯ ಬೆಳೆಗಳಿಂದಾಗಿ ರೈತಾಪಿ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭ. ಹಣ್ಣು ತರಕಾರಿ ಹೂವು ಮುಂತಾದ ದೈನಂದಿನ ವಸ್ತುಗಳ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ವೃದ್ಧಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ನೋವೆಲ್ಲ ಪಾವಕ

ಅನುರಾಗ ದುಃಖಂಗಳೊಮ್ಮೊಮ್ಮೆ ಬಿರುಬೀಸಿ |
ಮನದ ತೆರೆಗಳ ಕುಲುಕಿ ಕಡೆಯುವುದುಮೊಳಿತು ||
ಘನವರ್ಷ ಬಿರುಗಾಳಿ ಬಡಿಯಲಿರುಳೊಳ್ ನೆಲನ |
ದಿನದ ಸೊಗಸಿಮ್ಮಡಿಯೊ – ಮಂಕುತಿಮ್ಮ
|| 422 ||

ಪದ-ಅರ್ಥ: ಅನುರಾಗದುಃಖಂಗಳೊಮ್ಮೊಮ್ಮೆ ಬಿರುಬೀಸಿ = ಅನುರಾಗ + ದುಃಖಂಗಳು(ದುಃಖಗಳು) + ಒಮ್ಮೊಮ್ಮೆ + ಬಿರುಬೀಸಿ (ಜೋರಾಗಿ ಬೀಸಿ), ಕಡೆಯುವುದುಮೊಳಿತು = ಕಡೆಯುವುದುಂ + ಒಳಿತು, ಘನವರ್ಷ = ಭಾರೀಮಳೆ, ಬಡಿಯಲಿರುಳೊಳ್ = ಬಡಿಯಲು + ಇರುಳೊಳ್(ರಾತ್ರಿಯಲ್ಲಿ), ಸೊಗಸಿಮ್ಮಡಿಯೊ = ಸೊಗಸು + ಇಮ್ಮಡಿಯೊ(ಎರಡು ಪಟ್ಟು)

ವಾಚ್ಯಾರ್ಥ: ಅನುರಾಗ, ದುಃಖಗಳು ಒಮ್ಮೊಮ್ಮೆ ಜೋರಾಗಿ ಬೀಸಿ ಮನಸ್ಸಿನ ತೆರೆಗಳನ್ನು ಕದಡಿ, ಮಂಥನ ಮಾಡುವುದು ಒಳ್ಳೆಯದು. ಭಾರೀಮಳೆ, ಬಿರುಗಾಳಿ, ರಾತ್ರಿ ನೆಲವನ್ನು ಅಪ್ಪಳಿಸಿದಾಗ ಮರುದಿನದ ಸೊಗಸು ಹೆಚ್ಚಾಗುತ್ತದೆ.

ವಿವರಣೆ: ಅನುರಾಗ ಯಾರಿಗೆ ಬೇಡ? ದುಃಖ ಯಾರಿಗೆ ಬೇಕು? ಪ್ರತಿಯೊಬ್ಬರೂ ಮನಸ್ಸಿಗೆ ದುಃಖ, ನೋವು ಆಗಬಾರದು ಎಂದು ಸತತ ಪ್ರಯತ್ನ ಮಾಡುತ್ತಾರೆ. ವಿಚಿತ್ರವೆಂದರೆ ದುಃಖವೇ, ಸಂತೋಷಕ್ಕೆ ಹೊಸ ಮೆರಗನ್ನು ನೀಡುತ್ತದೆ. ರಾತ್ರಿಯೇ ಇಲ್ಲದಿದ್ದರೆ ಹಗಲಿಗೇನು ಅರ್ಥ? ಹಗಲು ಎನ್ನುವ ಪದವೇ ರಾತ್ರಿಗೆ ವಿರುದ್ಧವಾದದ್ದು. ಹಗಲಿನ ಸಂತೋಷ ರಾತ್ರಿಯ ಇರುವಿಕೆಯಿಂದ. ಖಾರದ ವಸ್ತುವನ್ನು ತಿಂದಾಗಲೇ ಸಿಹಿಗೆ ಹೆಚ್ಚಿನ ಮಜಾ.

ಈ ಕಗ್ಗ ಹೇಳುತ್ತದೆ, ಒಮ್ಮೊಮ್ಮೆ ಅನುರಾಗ, ದುಃಖಗಳು ನಮ್ಮನ್ನು ಬಿರುಗಾಳಿಯಂತೆ ಅಪ್ಪಳಿಸಿ, ನಮ್ಮ ಮನಸ್ಸನ್ನು ಕಲಕಿ, ಒದ್ದಾಡಿಸುವುದು ಒಳ್ಳೆಯದು. ಆಮ್ಲಜನಕಕ್ಕಾಗಿ ಒದ್ದಾಡಿದವನಿಗೆ, ಅದರ ನಿಜವಾದ ಬೆಲೆ ಅರ್ಥವಾಗುವುದು. ರೋಗಗಳಿಂದ ಜನ, ಪ್ರಾಣ ಕಳೆದುಕೊಂಡು, ಕೇವಲ ಸಂಖ್ಯೆಗಳಾಗುತ್ತಿರುವ ಸಂದರ್ಭದಲ್ಲೇ, ಜೀವನದ ಬೆಲೆ ತಿಳಿಯುವುದು. ಅದಕ್ಕೇ ಒಂದು ಹಿರಿಯರ ಮಾತಿದೆ, 'ಒಬ್ಬ ಮನುಷ್ಯನ ವೈಯಕ್ತಿಕ ಸಂತೋಷದ ಅಳತೆಯನ್ನು ಆತ ಅನುಭವಿಸಿದ ದುಃಖದ ಆಳದಿಂದ ಅರಿಯಬಹುದು'. ಸಂಕಟ-ಸಂತೋಷ, ಕೀರ್ತಿ-ಅಪಕೀರ್ತಿ, ತ್ಯಾಗ-ಸಮೃದ್ಧಿ ಇವು ವಿರುದ್ಧ ಪದಗಳು. ಗಮನಿಸಿದರೆ, ಒಂದಿಲ್ಲದೆ ಮತ್ತೊಂದಿಲ್ಲ. ಹರಿಶ್ಚಂದ್ರ ಪಟ್ಟ ಕಷ್ಟಗಳಿಗೆ ಮಿತಿಯುಂಟೆ? ಆದರೆ ಆ ಕಷ್ಟಗಳ ಬೆಂಕಿಯಲ್ಲಿ ಹಾಯ್ದು ಬಂದದ್ದರಿಂದಲೇ ಆತ ಸತ್ಯಹರಿಶ್ಚಂದ್ರನೆಂದು ಶಾಶ್ವತನಾದ. ಕೃಷ್ಣನಿಗೆ ಶ್ಯಮಂತಕಮಣಿಯನ್ನು ಕದ್ದವನೆಂಬ ಅಪಖ್ಯಾತಿ ಬಂತು. ಅದನ್ನು ನಿವಾರಿಸಿದ ಕೃಷ್ಣನ ಬದುಕು ಖ್ಯಾತಿಯನ್ನು ಪಡೆದು ಪ್ರಕಾಶಮಾನವಾಯಿತು. ಯಾರು ಯಾರು ಕಷ್ಟಗಳ ಕುಲುಮೆಯಲ್ಲಿ ಬೆಂದು ನಿಷ್ಕಳಂಕರಾಗಿ ಹೊರಬಂದರೋ, ಅವರೆಲ್ಲ ಜಗತ್ತಿಗೆ ಮಾದರಿಗಳಾದರು. ಕಷ್ಟಗಳ ಬೆಂಕಿ ಅವರಿಗೆ ಪುಟನೀಡಿತು.


ಕಗ್ಗ ಇನ್ನೊಂದು ಸುಂದರ ರೂಪಕವನ್ನು ಕಟ್ಟಿ ಕೊಡುತ್ತದೆ. ಕಲ್ಪಿಸಿಕೊಳ್ಳಿ, ರಾತ್ರಿ ಭಯಂಕರ ಮಳೆ, ಗುಡುಗು ಸಿಡಿಲುಗಳ ಅಬ್ಬರ. ಯಾರಿಗಾದರೂ ಹೆದರಿಕೆ ಬರುವ ವಾತಾವರಣ. ಇಡೀ ರಾತ್ರಿ ಧೋ, ಧೋ ಎಂದು ಸುರಿದಿದೆ ಮಳೆ. ಆದರೆ ಬೆಳಿಗ್ಗೆ ನೀವು ಮನೆಯಿಂದ ಹೊರಬಂದರೆ, ರಸ್ತೆಗಳು ಸ್ವಚ್ಛವಾಗಿವೆ, ಮರದ ಎಲೆಗಳು ಮೈಮೇಲಿನ ಧೂಳು ಕೊಡವಿಕೊಂಡು ಮಿನುಗುತ್ತಿವೆ. ಆಕಾಶ ನಿರಭ್ರವಾಗಿದೆ. ಸೂರ್ಯನ ಬೆಳಕು ಆಹ್ಲಾದಕರವೆನ್ನಿಸುತ್ತದೆ. ಈ ಬೆಳಗಿನ ಸುಂದರತೆಗೆ, ನಿನ್ನೆಯ ಭಾರೀ ಮಳೆ ಕಾರಣ. ಹೀಗಾಗಿ ಬರುವ ಕಷ್ಟ, ಸುಖಗಳು ನಮ್ಮನ್ನು ಇನ್ನಷ್ಟು ಸಶಕ್ತರನ್ನಾಗಿ ಮಾಡಿಯಾವು. ❖

ಪದಬಂಧ 4610

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಲ್ಲುಗಳಿಗೆ ಆಧಾರವಾದ ಮಾಂಸಖಂಡ (3)
4.ನೀರಿನ ಅಧಿದೇವತೆ (3)
5.ತಹಬದಿಗೆ ಬಂದಾಗ ಹಾಕಿದ ಬುನಾದಿ (4)
6.ಅನೇಕ ಜನರ ಭೀಕರ ಕೊಲೆ (4)
8.ಉಲ್ಟಾ ಆಗಿರುವ ಸುಳ್ಳು (2)
10.ಹಿಸ್ಸೆಯು ಇಲ್ಲಿ ತಿರುವು ಮುರುವಾಗಿದೆಯಲ್ಲಾ? (2)
13.ದ್ರವದಿಂದ ತುಂಬಿರುವುದು (4)
14.ಈ ಪರಿ ಬಂದಿರುವ ಅಣಕ (4)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
16.ಉದ್ದನೆಯ ದಾರ ಹಿಡಿದಿರುವ ಧಾರಾಳಿ (3)

ಮೇಲಿಂದ ಕೆಳಕ್ಕೆ
1.ಗ್ರಂಥದ ಪೀಠಿಕೆ (6)
2.ಕೆಲಸಕ್ಕೆ ಬಾರದ ಮಾತು (5)
3.ಮರೆಯಲು ಆಗದ ಭವ್ಯ ಸೌಧ (3)
5.ತಡವಾಗಿ ಕಾಣಿಸಿದ ಅಬ್ಬಿ (4)
7.ಸರಿಯಾದ ಕಾಲಕ್ಕಿಂತ ಮುಂಚೆ ಉಂಟಾಗುವ ಸಾವು (6)
9.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
11.ಈತ ಸಣ್ಣ ಪ್ರಾಂತ್ಯದ ಮುಖಂಡ (5)
12.ಪ್ರಸವಿಸುವಿಕೆಗೊಂದು ಪರ್ಯಾಯ ಪದ (3)



4609ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರವಾಹ 4.ಸರಕಾರ 6.ಜಾಗತಿಕ 8.ಖನಿಜ 11.ಮಥಿಸು 13.ವಿರೇಚಕಾ 17.ಕಾಡತೂಸು 18.ರಹಸ್ಯ
ಮೇಲಿಂದ ಕೆಳಕ್ಕೆ: 1.ಪ್ರತಿಜ್ಞೆ 2.ಹಸನ್ಮುಖಿ 3.ಸಂಗತಿ 5.ರಜಾ 7.ಕರ್ತವ್ಯ 9.ಜನುಮ 10.ಹರವಿ 12.ಸುರಾಸುರ 14.ರೇಖಾಂಶ 15.ಕಾಕಾ 16.ಸ್ವಾರಸ್ಯ

ಸುಡೊಕು 4996

				2		3		
3		6	5		8		1	
				7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4995 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ವಿವಿಧ ಭಾಗಗಳಲ್ಲಿ ಭಾರಿ ಮಳೆ; ಜನಜೀವನ ಅಸ್ತವ್ಯಸ್ತ • ಪರಿಹಾರ ಕಾರ್ಯಾಚರಣೆಯಲ್ಲಿ 500 ತಂಡಗಳು

ಯಸ್: ಜಾರ್ಖಂಡ್‌ನಲ್ಲಿ 8 ಲಕ್ಷ ಮಂದಿಗೆ ತೊಂದರೆ

ರಾಂಚಿ (ಪಿಟಿಐ): ಗುರುವಾರ ಬೆಳಿಗ್ಗಿನ ಜಾವ ಹಾದು ಹೋದ ಯಸ್ ಚಂಡಮಾರುತದಿಂದಾಗಿ ಜಾರ್ಖಂಡ್‌ನಲ್ಲಿ ಎಂಟು ಲಕ್ಷ ಜನ ತೊಂದರೆಗೆ ಒಳಗಾಗಿದ್ದಾರೆ. ರಾಜಧಾನಿ ರಾಂಚಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಭಾರಿ ಮಳೆಯಾಗಿದೆ. ಜನಜೀವನ ಅಸ್ತವ್ಯಸ್ತಗೊಂಡಿದೆ.

15 ಸಾವಿರ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಖಾರ್ ಖಾಯ್ ಮತ್ತು ಸುವರ್ಣರೇಖಾ ಸೇರಿ ಹಲವು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಹಾಗಾಗಿ, ಪೂರ್ವ ಸಿಂಘ್‌ಭೂಮ್ ಜಿಲ್ಲೆಯಲ್ಲಿ ಜನರ ಸ್ಥಳಾಂತರ ಕಾರ್ಯಾಚರಣೆ ಗುರುವಾರವೂ ನಡೆದಿದೆ. ಜಾರ್ಖಂಡ್‌ನಲ್ಲಿ ಗುರುವಾರ ಮತ್ತು ಶುಕ್ರವಾರ ಪೂರ್ಣ ಲಾಕ್‌ಡೌನ್ ಘೋಷಿಸಲಾಗಿದೆ.

ಸಿಡಿಲು ಬಡಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಜಾರ್ಖಂಡ್‌ನಲ್ಲಿ ಚಂಡಮಾರುತವು ಈ ರೀತಿಯ ಪರಿಣಾಮ ಬೀರಿದ್ದು ಇದೇ ಮೊದಲು. 500 ತಂಡಗಳು ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿವೆ.

ಮಕ್ಕಳಿಗೆ 'ಯಸ್' ಹೆಸರು: ಯಸ್ ಚಂಡಮಾರುತವು ಒಡಿಶಾ ಕರಾವಳಿಯನ್ನು ಅಪ್ಪಳಿಸಿದ ದಿನ ರಾಜ್ಯದಲ್ಲಿ 300ಕ್ಕೂ ಹೆಚ್ಚು ಮಕ್ಕಳು ಜನಿಸಿದ್ದಾರೆ. ಅಂದು ಜನಿಸಿದ ಮಕ್ಕಳಿಗೆ ಚಂಡಮಾರುತದ ಹೆಸರನ್ನೇ ಇರಿಸಲು ಹಲವು ಕುಟುಂಬಗಳು ಮುಂದಾಗಿವೆ.

ಬುಧವಾರ ಜನಿಸಿದ ತಮ್ಮ ಗಂಡು ಮಗುವಿಗೆ 'ಯಸ್'ಗಿಂತ ಒಳ್ಳೆಯ ಹೆಸರು ಯಾವುದಿದೆ ಎಂದು ಬಾಲಸೋರ್‌ನ ಪರಖಿ ಪ್ರದೇಶದ ನಿವಾಸಿ ಸೋನಾಲಿ ಮೈತಿ ಪ್ರಶ್ನಿಸುತ್ತಾರೆ. ಕೇಂದ್ರಪಾಡ ಜಿಲ್ಲೆಯ ಸರಸ್ವತಿ ಬೈರಾಗಿ ಅವರು ಕೂಡ ಚಂಡಮಾರುತ ಅಪ್ಪಳಿಸಿದ ದಿನವೇ ಜನಿಸಿದ ತಮ್ಮ ಹೆಣ್ಣು ಮಗುವಿಗೆ 'ಯಸ್' ಎಂದು ಹೆಸರಿಟ್ಟಿದ್ದಾರೆ. ಯಸ್ ಎಂಬುದು ಪರ್ಷಿಯಾ ಪದವಾಗಿದ್ದು, ಮಲ್ಲಿಗೆ ಎಂದು ಅರ್ಥ.


ಭಾರಿ ಮಳೆಯಿಂದಾಗಿ ರಾಂಚಿ ಸಮೀಪ ಕಾಂಚಿ ನದಿಯ ಸೇತುವೆಯೊಂದು ಮುರಿದು ಬಿದ್ದಿದೆ —ಪಿಟಿಐ ಚಿತ್ರ

ಪ್ರಧಾನಿ ವೈಮಾನಿಕ ಸಮೀಕ್ಷೆ ಇಂದು

ಪ್ರಧಾನಿ ನರೇಂದ್ರ ಮೋದಿ ಅವರು ಯಸ್ ಚಂಡಮಾರುತದ ಪರಿಣಾಮದ ಬಗ್ಗೆ ಅಧಿಕಾರಿಗಳ ಜತೆಗಿನ ಸಭೆಯಲ್ಲಿ ಪರಿಶೀಲನೆ ನಡೆಸಿದ್ದಾರೆ. ಜನಜೀವನ ಸಹಜಸ್ಥಿತಿಯತ್ತ ಆದಷ್ಟು ಬೇಗನೆ ಮರಳಲು ಬೇಕಾದ ಕ್ರಮ ಕೈಗೊಳ್ಳುವಂತೆ ಅವರು ಕೇಂದ್ರ ಮತ್ತು ರಾಜ್ಯಗಳ ಸಂಸ್ಥೆಗಳಿಗೆ ಸೂಚನೆ ನೀಡಿದ್ದಾರೆ.

ಚಂಡಮಾರುತ ಎದುರಿಸಲು ಮಾಡಿಕೊಂಡಿದ್ದ ಸನ್ನದ್ಧತೆ, ಹಾನಿಯ ಅಂದಾಜು ಮತ್ತು ಇತರ ವಿಚಾರಗಳ ಬಗ್ಗೆ ಅಧಿಕಾರಿಗಳು ವಿವರವಾದ ಮಾಹಿತಿ ನೀಡಿದ್ದಾರೆ. ಚಂಡಮಾರುತದಿಂದ ಅತಿ ಹೆಚ್ಚು ಹಾನಿಗೆ ಒಳಗಾಗಿರುವ ಒಡಿಶಾ ಮತ್ತು ಪಶ್ಚಿಮ ಬಂಗಾಳಕ್ಕೆ ಮೋದಿ ಅವರು ಶುಕ್ರವಾರ ಭೇಟಿ ನೀಡಲಿದ್ದಾರೆ. ಎರಡೂ ರಾಜ್ಯಗಳಲ್ಲಿಯೂ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಚಂಡಮಾರುತದ ಪರಿಣಾಮಗಳ ವಿಶ್ಲೇಷಣೆ ನಡೆಸಲಾಗುವುದು ಎಂದು ಪ್ರಧಾನಿ ಕಾರ್ಯಾಲಯವು ತಿಳಿಸಿದೆ. ಎರಡೂ ರಾಜ್ಯಗಳಲ್ಲಿ ಅವರು ವೈಮಾನಿಕ ಸಮೀಕ್ಷೆಯನ್ನೂ ನಡೆಸಲಿದ್ದಾರೆ.

ಪೆನ್ಪಾ ತ್ಸೆರಿಂಗ್ ಅಧಿಕಾರ ಸ್ವೀಕಾರ

ಧರ್ಮಶಾಲಾ (ಹಿಮಾಚಲಪ್ರದೇಶ) (ಪಿಟಿಐ): ದೇಶಭ್ರಷ್ಟ ಟಿಬೆಟ್ ಸರ್ಕಾರದ ಅಧ್ಯಕ್ಷರಾಗಿ ಪೆನ್ಪಾ ತ್ಸೆರಿಂಗ್ ಗುರುವಾರ ಧರ್ಮಶಾಲಾದಲ್ಲಿ ಅಧಿಕಾರ ಸ್ವೀಕರಿಸಿದರು. ಕೋವಿಡ್ ಮಾರ್ಗಸೂಚಿಯಂತೆ ನಡೆದ ಸರಳ ಸಮಾರಂಭದಲ್ಲಿ ಮುಖ್ಯ ನ್ಯಾಯ ಆಯುಕ್ತ ಸೋನಂ ನಾರ್ಬು ಡಾಗ್ಪೋ ಪ್ರಮಾಣ ವಚನ ಬೋಧಿಸಿದರು.

ಚೋಕ್ಸಿ ಭಾರತಕ್ಕೆ ನೇರ ಹಸ್ತಾಂತರ ಇಲ್ಲ: ಡೊಮಿನಿಕಾ ಪ್ರಧಾನಿ

ನವದೆಹಲಿ (ಪಿಟಿಐ/ರಾಯಿಟರ್ಸ್): ಭಾರತದಿಂದ ಪರಾರಿಯಾದ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿ ಅವರನ್ನು ನೇರವಾಗಿ ಭಾರತಕ್ಕೆ ಹಸ್ತಾಂತರಿಸಿ ಎಂದು ಡೊಮಿನಿಕಾ ಸರ್ಕಾರವನ್ನು ಆಂಟಿಗುವಾ ಮತ್ತು ಬಾರ್ಬುಡಾ ಸರ್ಕಾರ ಕೋರಿದೆ. ಆದರೆ, ಅದು ಸಾಧ್ಯವಿಲ್ಲ. ಅವರನ್ನು ಆಂಟಿಗುವಾ ಮತ್ತು ಬಾರ್ಬುಡಾ ದ್ವೀಪಕ್ಕೇ ಕಳುಹಿಸಲಾಗುವುದು ಎಂದು ಡೊಮಿನಿಕಾ ಹೇಳಿದೆ. ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವ ಹೊಂದಿರುವ ಚೋಕ್ಸಿ ಅವರು ಅಲ್ಲಿಂದ ಪರಾರಿಯಾಗಿ ಡೊಮಿನಿಕಾಕ್ಕೆ ಹೋಗಿದ್ದರು. ಅಲ್ಲಿ ಅವರನ್ನು ಬಂಧಿಸಲಾಗಿದೆ.

ಆಂಟಿಗುವಾ ಮತ್ತು ಬಾರ್ಬುಡಾದ ಪ್ರಧಾನಿ ಗ್ಯಾಸ್ಟನ್ ಬ್ರೌನ್ ಅವರು ಡೊಮಿನಿಕಾದ ಪ್ರಧಾನಿ ರೂಸ್‌ವೆಲ್ಟ್ ಸ್ಕೆರಿಟ್ ಜತೆಗೆ ನೇರವಾಗಿ ಮಾತನಾಡಿದ್ದಾರೆ. ತಮ್ಮ ದೇಶಕ್ಕೆ ಅವರನ್ನು ಕರೆಸಿಕೊಳ್ಳಲು ಬಯಸುವುದಿಲ್ಲ. ಹಾಗಾಗಿ, ನೇರವಾಗಿ ಭಾರತಕ್ಕೆ ಕಳುಹಿಸಿ ಎಂದಿದ್ದರು. ಇದರಿಂದಾಗಿ ಚೋಕ್ಸಿ ಬೇಗನೆ ಭಾರತಕ್ಕೆ ಹಸ್ತಾಂತರವಾಗಬಹುದು ಎಂಬ ನಿರೀಕ್ಷೆಮೂಡಿತ್ತು.


ಮೆಹುಲ್ ಚೋಕ್ಸಿ

₹13,500 ಕೋಟಿ ಮೊತ್ತದ ಪಂಜಾಬ್ ನ್ಯಾಷನಲ್ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಭಾರತದಿಂದ ತಲೆಮರೆಸಿಕೊಂಡಿದ್ದ ಚೋಕ್ಸಿ, ಭಾನುವಾರ ಆಂಟಿಗುವಾದಿಂದ ಪರಾರಿಯಾಗಿದ್ದರು. ಹೀಗಾಗಿ ಇಂಟರ್‌ಪೋಲ್‌ಗೆ ಮಾಹಿತಿ ನೀಡಿದ್ದ ಆಂಟಿಗುವಾ ಮತ್ತು ಬಾರ್ಬುಡಾದ ಪೊಲೀಸರು ಚೋಕ್ಸಿಯ ಆಪ್ತರು ಹಾಗೂ ಸಂಬಂಧಿಕರನ್ನು ವಿಚಾರಿಸುತ್ತಿದ್ದರು.

'ಚೋಕ್ಸಿಯು ದೋಣಿ ಮೂಲಕ ಅಕ್ರಮವಾಗಿ ಡೊಮಿನಿಕಾಗೆ ಪ್ರವೇಶಿಸಿರಬಹುದು. ಆದರೆ ಆತ ಮತ್ತೆ ಇಲ್ಲಿಗೆ ಬರಲು ನಾವು ಒಪ್ಪುವುದಿಲ್ಲ. ಬಂಧನದಿಂದ ತಪ್ಪಿಸಿಕೊಳ್ಳುವ ಮೂಲಕ ಚೋಕ್ಸಿ ತಪ್ಪೆಸಗಿದ್ದಾರೆ' ಎಂದು ಬ್ರೌನ್ ಹೇಳಿದ್ದಾರೆ.

ಡೊಮಿನಿಕಾ ಸರ್ಕಾರ ಮತ್ತು ಪೊಲೀಸರು ಸಹಕಾರ ನೀಡುತ್ತಿದ್ದು, ಆಂಟಿಗುವಾ ಸರ್ಕಾರವು ಚೋಕ್ಸಿಯನ್ನು ಭಾರತಕ್ಕೆ ಮರಳಿಸುವ ಕುರಿತು ಸರ್ಕಾರದ ಜೊತೆ ಮಾತುಕತೆ ನಡೆಸುತ್ತಿದೆ ಎಂದ ಬ್ರೌನ್ ಹೇಳಿದ್ದಾರೆ.

ನೀರವ್ ಮೋದಿ ಹಾಗೂ ಮೆಹುಲ್ ಚೋಕ್ಸಿ ಅವರು 2018ರಲ್ಲಿ ಬ್ಯಾಂಕ್ ವಂಚನೆ ಪ್ರಕರಣ ಬಯಲಿಗೆ ಬರುವ ಮುನ್ನವೇ ದೇಶ ತೊರೆದಿದ್ದರು. 2019ರಲ್ಲಿ ನೀರವ್ ಮೋದಿಯನ್ನು ಲಂಡನ್‌ನಲ್ಲಿ ಬಂಧಿಸಲಾಗಿತ್ತು. ಆಂಟಿಗುವಾ ಮತ್ತು ಬಾರ್ಬುಡಾದಲ್ಲಿ ಚೋಕ್ಸಿ ವಾಸಿಸುತ್ತಿದ್ದಾರೆ.

ಚೋಕ್ಸಿ 2017ರ ಜನವರಿ ಮೊದಲ ವಾರದಲ್ಲಿ ಭಾರತದಿಂದ ಪಲಾಯನ ಮಾಡುವ ಮೊದಲು, 'ಹೂಡಿಕೆ ಮಾಡುವ ಮೂಲಕ ಪೌರತ್ವ ಪಡೆಯುವ ಯೋಜನೆ'ಯಡಿ ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವವನ್ನು ಪಡೆದಿದ್ದರು. ನಂತರ ಹಗರಣ ಬೆಳಕಿಗೆ ಬಂದಿತ್ತು.

ಕೆಐಒಸಿಎಲ್: ₹ 301 ಕೋಟಿ ಲಾಭ


ಸುಬ್ಬರಾವ್

ಮಂಗಳೂರು: ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿ (ಕೆಐಒಸಿಎಲ್) 2021ರ ಮಾರ್ಚ್ ಅಂತ್ಯಕ್ಕೆ ಹಣಕಾಸು ವರ್ಷದಲ್ಲಿ ₹ 301.17 ಕೋಟಿ ನಿವ್ವಳ ಲಾಭ ಗಳಿಸಿದೆ. ಒಂದೂವರೆ ದಶಕದಲ್ಲಿ ಇದು ಕಂಪನಿಗೆ ದೊರೆತ ಅತ್ಯಧಿಕ ಲಾಭವಾಗಿದೆ.

ಕಾರ್ಯಾಚರಣೆಗಳಿಂದ ಬರುವ ಆದಾಯ ₹ 499.75 ಕೋಟಿಯಿಂದ ₹ 939.71 ಕೋಟಿಗೆ ಏರಿಕೆಯಾಗಿದೆ. ಗುರುವಾರ ನಡೆದ ವಾರ್ಷಿಕ ಮಹಾಸಭೆಯಲ್ಲಿ ಈಕ್ವಿಟಿ ಷೇರಿಗೆ ₹ 1.64ರಷ್ಟು ಲಾಭಾಂಶವನ್ನು ಆಡಳಿತ ಮಂಡಳಿ ಶಿಫಾರಸು ಮಾಡಿದೆ.

'ಕಂಪನಿಯು ಕಳೆದ ವರ್ಷ ₹2,056.53 ಕೋಟಿ ಆದಾಯ ಗಳಿಸಿದ್ದರೆ, 2021ನೇ ಸಾಲಿನಲ್ಲಿ ₹ 2,477.83 ಕೋಟಿ ಆದಾಯ ಗಳಿಸಿದೆ' ಎಂದು ಕೆಐಒಸಿಎಲ್‌ನ ಸಿಎಂಡಿ ಎಂ.ವಿ. ಸುಬ್ಬರಾವ್ ತಿಳಿಸಿದ್ದಾರೆ.

ಕೆಪಿಎಸ್‌ಸಿ: ಅಕ್ರಮಕ್ಕೆ ರಕ್ಷಣೆ?

ಒಂದನೇ ಪುಟದಿಂದ

ಪ್ರಕರಣದಲ್ಲಿ ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ 1988ರ 19(1) ಸೆಕ್ಷನ್ ಮತ್ತು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) 1973ರ ಸೆಕ್ಷನ್197ರ ಅಡಿಯಲ್ಲಿ ಕೇಸು ದಾಖಲಿಸಿಕೊಂಡು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬೇಕೇ, ಬೇಡವೇ ಎಂಬ ಪ್ರಸ್ತಾವವನ್ನು ಸಿಬ್ಬಂದಿ ಮತ್ತು ಸುಧಾರಣಾ ಇಲಾಖೆ (ಡಿಪಿಎಆರ್) ಸೆ. 15ರಂದು ನಡೆದ ಸಚಿವ ಸಂಪುಟ ಸಭೆಗೆ ಮಂಡಿಸಿತ್ತು. ಅಂದು, ಈ ಬಗ್ಗೆ ಪರಿಶೀಲಿಸಿ ಶಿಫಾರಸು ಮಾಡಲು ಕಾನೂನು ಮತ್ತು ಸಂಸದೀಯ ಸಚಿವರಾಗಿದ್ದ ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಂಪುಟ ಉಪ ಸಮಿತಿ ರಚಿಸಲಾಗಿತ್ತು. ಡಿ. 29ರಂದು ಸಭೆ ನಡೆಸಿದ್ದ ಈ ಸಮಿತಿ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದು ಬೇಡವೆಂದು ತೀರ್ಮಾನಕ್ಕೆ ಬಂದಿದ್ದರೂ, ಅಂತಿಮ ತೀರ್ಮಾನವನ್ನು ಸಂಪುಟ ಸಭೆಯ ವಿವೇಚನೆಗೆ ಬಿಟ್ಟಿತ್ತು.

ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರ ನೇಮಕಾತಿಯಲ್ಲಿ ಸಕ್ಷಮ ಪ್ರಾಧಿಕಾರ ರಾಷ್ಟ್ರಪತಿಯಾಗಿದ್ದು, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಬಗ್ಗೆ ಅವರೇ ನಿರ್ಣಯ ಕೈಗೊಳ್ಳಬೇಕು. ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ (ಡಿಒಪಿಟಿ) ಕಳುಹಿಸಬೇಕು. ಡಿಒಪಿಟಿ ಅದನ್ನು ರಾಷ್ಟ್ರಪತಿ ಮುಂದೆ ಮಂಡಿಸುವುದು ನಿಯಮ. ಆದರೆ, ಸಂಪುಟ ಸಭೆ ವಿಚಾರಣೆ ಕೈಬಿಡಲು ನಿರ್ಧರಿಸಿರುವುದರಿಂದ ಇಡೀ ಪ್ರಕರಣವನ್ನು ಕೈ ಬಿಟ್ಟಂತೆ ಆಗಿದೆ ಎಂಬ ಅಭಿಪ್ರಾಯ ಅಧಿಕಾರಿಗಳ ವಲಯದಲ್ಲಿ ವ್ಯಕ್ತವಾಗಿದೆ.

ಜೂನ್ ಅಂತ್ಯದವರೆಗೂ ಕೋವಿಡ್ ಮಾರ್ಗಸೂಚಿ ಮುಂದುವರಿಕೆ

ನವದೆಹಲಿ (ಪಿಟಿಐ): ಕೋವಿಡ್–19ಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಜೂನ್ ಅಂತ್ಯದ ವರೆಗೂ ಮುಂದುವರಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಗುರುವಾರ ಆದೇಶಿಸಿದೆ.

ಈ ಸಂಬಂಧ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಲಾಗಿದೆ. ಅಧಿಕ ಸಂಖ್ಯೆಯ ಪ್ರಕರಣಗಳಿರುವ ಜಿಲ್ಲೆಗಳಲ್ಲಿ 'ಲೋಕಲ್ ಕಂಟೇನ್ಮೆಂಟ್ ವಲಯ'ಗಳನ್ನು ಸ್ಥಾಪಿಸಬೇಕು. ಆ ಮೂಲಕ ಸೋಂಕು ಪ್ರಸರಣ ತಡೆಗೆ ಕಾರ್ಯತಂತ್ರಗಳನ್ನು ಅನುಸರಿಸಬೇಕು ಎಂದು ಸೂಚಿಸಲಾಗಿದೆ.

'ಹೊಸ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೂ, ಸಕ್ರಿಯ ಪ್ರಕರಣಗಳ ಸಂಖ್ಯೆ ಅಧಿಕವಾಗಿಯೇ ಇದೆ. ಹೀಗಾಗಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಮುಂದುವರಿಸುವ ಅಗತ್ಯವಿದೆ' ಎಂದು ಸಚಿವಾಲಯದ ಕಾರ್ಯದರ್ಶಿ ಅಜಯ್ ಭಲ್ಲಾ ಹೇಳಿದ್ದಾರೆ.

ಆರೋಗ್ಯ ಸಚಿವಾಲಯದಿಂದ ಮಾರ್ಗಸೂಚಿ ಬಿಡುಗಡೆ

ಹಿರಿಯ ನಾಗರಿಕರ ಮನೆ ಬಳಿಯೇ ಕೋವಿಡ್ ಲಸಿಕೆ ಕೇಂದ್ರ ಸ್ಥಾಪನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 60 ವರ್ಷ ಮೇಲ್ಪಟ್ಟವರಿಗೆ ಹಾಗೂ ಅಂಗವಿಕಲರಿಗೆ ಅನುಕೂಲವಾಗಲು, ಅವರ ಮನೆ ಸಮೀಪದಲ್ಲಿಯೇ ಲಸಿಕೆ ನೀಡುವ ಕೇಂದ್ರ ಸ್ಥಾಪಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ಸೂಚಿಸಿದೆ.

ಈ ಸಂಬಂಧ ಸಚಿವಾಲಯ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. 'ಮನೆ ಸಮೀಪ ಕೋವಿಡ್ ಲಸಿಕೆ ಕೇಂದ್ರ' (ಎನ್‌ಎಚ್‌ಸಿವಿಸಿ) ಸ್ಥಾಪಿಸಬೇಕು. ಇದು ಜನಕೇಂದ್ರಿತ ಹಾಗೂ ಹೊಂದಾಣಿಕೆಯಿಂದ ಕೂಡಿದ ಕೋವಿಡ್–19 ಲಸಿಕೆ ಆಂದೋಲನವಾಗಬೇಕು' ಎಂದು ಸಚಿವಾಲಯ ಸೂಚಿಸಿದೆ.

'ಲಸಿಕೆಯನ್ನು ಹಾಕಿಸಿಕೊಳ್ಳದೇ ಇರುವ ಇಲ್ಲವೇ ಮೊದಲನೇ ಡೋಸ್ ಮಾತ್ರ ಹಾಕಿಸಿಕೊಂಡಿರುವ 60 ವರ್ಷ ಮೇಲ್ಪಟ್ಟವರು, ದೈಹಿಕ ಅಥವಾ ವೈದ್ಯಕೀಯ ಕಾರಣಗಳಿಂದಾಗಿ ಅಂಗವೈಕಲ್ಯ ಹೊಂದಿರುವವರು ಎನ್‌ಎಚ್‌ಸಿವಿಸಿಗಳಲ್ಲಿ ಲಸಿಕೆ ಪಡೆಯಲು ಅರ್ಹರಾಗಿದ್ದಾರೆ' ಎಂದು ಸಚಿವಾಲಯ ತಿಳಿಸಿದೆ.

ಲಸಿಕೆ ಪಡೆಯಲು ಇಚ್ಛಿಸುವವರು 'ಕೋವಿನ್' ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬಹುದು ಇಲ್ಲವೇ ಎನ್‌ಎಚ್‌ಸಿವಿಸಿಗಳಿಗೆ ತೆರಳಿ ಸ್ಥಳದಲ್ಲಿಯೇ ನೋಂದಣಿ ಮಾಡಿಸಿ, ಲಸಿಕೆ ಪಡೆಯಬಹುದು ಎಂದೂ ತಿಳಿಸಿದೆ.

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 25 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 27 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ವಿಜಯ್ ಶ್ರೀಪಾದ್ ಹೆಗಡೆ ಬಕ್ಕೆಮನೆ ಶ್ರೀಪಾದ್ ಹೆಗಡೆ, ಬಕ್ಕೆಮನೆ,** ಅಂಚೆ, ಕೋಡಸರ ಮುತ್ತಳ್ಳಿ, ಸಿದ್ದಾಪುರ ತಾ. ಉತ್ತರ ಕನ್ನಡ ಜಿಲ್ಲೆ	1,00,002
2.	**ವೆಂಕಟರಮಣ ಪಾರ್ಥಸಾರಥಿ,** ಗೋದ್ರೇಜ್ ಗೋಲ್ಡ್ ಕೌಂಟಿ, ವಿಲ್ಲಾ 02, ಚಿಕ್ಕಬಿದರಕಲ್ಲು, ಬೆಂಗಳೂರು–560073	10,000
3.	**ಎಂ.ಎಸ್. ಸುರೇಶ್** ಫ್ಲ್ಯಾಟ್–401, 144, 14ನೇ ಮೇನ್, 35ನೇ ಕ್ರಾಸ್, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು	10,000
4.	**ಎಂ.ಆರ್. ಭಾಸ್ಕರ್ ರಾವ್** ನಂ. 44, ಮೂರನೇ ಕ್ರಾಸ್ ರಾಮಣ್ಣ ಗಾರ್ಡನ್, ವಿದ್ಯಾರಣ್ಯಪುರ, ಬೆಂಗಳೂರು	5,001
5.	**ರೇಖಾ ಹೆಗಡೆ** 1591, ಆರ್.ಜಿ. ರೆಸಿಡೆನ್ಸಿ, ಸರ್ ಎಂ.ವಿ. ಲೇಔಟ್, ಮೊದಲನೇ ಬ್ಲಾಕ್, ಜ್ಞಾನಭಾರತಿ ಪೋಸ್ಟ್, ಬೆಂಗಳೂರು	5,000
6.	**ಪದ್ಮನಾಭ ಬಿ.ಕೆ.** ನಂ. 521, ಕೃಷ್ಣಕೃಪಾ, 13ನೇ ಕ್ರಾಸ್, 8ನೇ ಮೇನ್, ಇಸ್ರೊ ಲೇಔಟ್, ಬೆಂಗಳೂರು	5,000
7.	**ಡಾ.ನಿರ್ಮಲಾ ಶ್ರೀಕಂಠಯ್ಯ** ನಂ.183, 14ನೇ ಕ್ರಾಸ್, ಗಿರಿನಗರ, ಬೆಂಗಳೂರು	5,000
8.	**ಗುರುರಾಜ್ ಶಂಕರರಾವ್ ಕುಲಕರ್ಣಿ** ಅನುಗ್ರಹ ಬೆಳವಗಿ ಆಸ್ಪತ್ರೆ ಎದುರು, ಮೊದಲನೇ ಮೇನ್, 2ನೇ ಕ್ರಾಸ್, ಉಮಾಶಂಕರ ನಗರ, ರಾಣೆಬೆನ್ನೂರು ಹಾವೇರಿ ಜಿ.	5,000
9.	**ಗೀತಾಂಜಲಿ** ಬೆಂಗಳೂರು	5,000
10.	**ಎ. ಅನಂತನಾರಾಯಣನ್** ಎಫ್1, ನೇಚರ್ ವ್ಯೂ ರೆಸಿಡೆನ್ಸಿ, ಮನೋರಾಯನಪಾಳ್ಯ, ಆರ್.ಟಿ. ನಗರ ಪೋಸ್ಟ್, ಬೆಂಗಳೂರು	5,000
11.	**ಲೋಕೇಶ್ವರಪ್ಪ** 131, 6ನೇ ಮುಖ್ಯರಸ್ತೆ, ಮುನೇಶ್ವರ ಲೇಔಟ್, ಅಟ್ಟೂರು, ಯಲಹಂಕ, ಬೆಂಗಳೂರು	5,000
12.	**ಎಸ್.ಆರ್. ಜಗನ್ನಾಥ್** ನಂ. 20, 2ನೇ ಕ್ರಾಸ್ ರಸ್ತೆ, ಶಿವಾನಂದನಗರ, ಮೂಡಲಪಾಳ್ಯ, ಬೆಂಗಳೂರು	2,000
13.	**ಅಶೋಕ್ ಬಡಿಗೇರ್,** ಪೋಸ್ಟ್ ಬರಡೋಲ, ಚಡಚಣ ತಾ. ವಿಜಯಪುರ ಜಿ.	1,100
14.	**ಡಾ.ಎಸ್.ಟಿ.ರಾಮಚಂದ್ರ** ಫ್ಲ್ಯಾಟ್ ನಂ. 34193, ಪ್ರೆಸ್ಟೀಜ್ ಫಾಲ್ಕನ್ ಸಿಟಿ, ಕೋಣನಕುಂಟೆ ಕ್ರಾಸ್, ಕನಕಪುರ ರಸ್ತೆ, ಬೆಂಗಳೂರು	1,001
15.	**ಚಿರಂಜೀವಿ ಕಾರ್ತಿಕ್,** ನಂ. 97, 8ನೇ ಕ್ರಾಸ್, ಜಿ ಬ್ಲಾಕ್, ಸಹಕಾರನಗರ, ಬೆಂಗಳೂರು	1,000
16.	**ಡಾ.ಎಚ್.ಬಿ.ಚಂದ್ರಶೇಖರ್** ಡಿಎಸ್‌ಇಆರ್‌ಟಿ , ಬನಶಂಕರಿ 3ನೇ ಹಂತ, ಬೆಂಗಳೂರು	1,000
17.	**ಜಿ. ಈಶ್ವರಪ್ಪ** ಸೊಲ್ಲಾಪುರ	1,000
18.	**ಗುಬ್ಬಿ ರೇವಣಾರಾಧ್ಯ** ನಂ. 3394, 6ನೇ ಮೇನ್, 3ನೇ ಕ್ರಾಸ್, ಹಂಪಿನಗರ, ಬೆಂಗಳೂರು	1,000
19.	**ಶ್ರೇಯಸ್ ಅನಂತ್** ಎ ನಂ. 6, ಸ್ನೇಹ ಕಾಲೊನಿ, ಅಶ್ವತ್ಥ ಕಟ್ಟೆ ರಸ್ತೆ ಹತ್ತಿರ, ಚಿಕ್ಕಲಸಂದ್ರ, ಬೆಂಗಳೂರು	1,000
20.	**ಪೂರ್ಣಿಮಾ ಯು.ಜೆ.** ನಂ. 11, ಮೂರನೇ ಮುಖ್ಯರಸ್ತೆ, ಮೊದಲನೇ ಎ ಕ್ರಾಸ್, ಸೋಮೇಶ್ವರ ನಗರ, ಯಲಹಂಕ ನ್ಯೂಟೌನ್, ಬೆಂಗಳೂರು	1,000
	ಒಟ್ಟು ಮೊತ್ತ	1,70,104


ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಸಂಕ್ಷಿಪ್ತ ಸುದ್ದಿ

ಮಾಲಿಯ ಬಂಧಿತ ಹಂಗಾಮಿ ಅಧ್ಯಕ್ಷ, ಪ್ರಧಾನಿ ಬಿಡುಗಡೆ

ಬಮಾಕೊ (ರಾಯಿಟರ್ಸ್): ಮೂರು ದಿನಗಳ ಹಿಂದೆ ಬಂಧಿತರಾಗಿದ್ದ ಮಾಲಿಯ ಹಂಗಾಮಿ ಅಧ್ಯಕ್ಷ ಮತ್ತು ಪ್ರಧಾನಿಯನ್ನು ದಂಗೆಕೋರ ಮಿಲಿಟರಿ ಪಡೆಯು ಬುಧವಾರ ರಾತ್ರಿ ಬಿಡುಗಡೆ ಮಾಡಿದೆ.


ಬಹ್ ಎನ್ಡಾವ್

ಒಂಭತ್ತು ತಿಂಗಳ ಹಿಂದೆ ನಡೆದ ದಂಗೆಯಲ್ಲಿ ಅಧಿಕಾರವನ್ನು ವಶಪಡಿಸಿಕೊಂಡಿದ್ದ ಸೇನೆಯು ಇಬ್ಬರು ಸದಸ್ಯರನ್ನು ಸರ್ಕಾರದ ಪುನರ್‌ರಚನೆ ವೇಳೆ ಕೈಬಿಟ್ಟ ಕೆಲವೇ ಗಂಟೆಗಳಲ್ಲಿ ಅಧ್ಯಕ್ಷರು ಬಹ್ ಎನ್ಡಾವ್ ಮತ್ತು ಪ್ರಧಾನಿ ಮೊಕ್ಟರ್ ಓವಾನೆ ಅವರನ್ನು ಬಂಧಿಸಿತ್ತು.

ಎರಿಕ್ ಗಾರ್ಸೆಟಿ ಭಾರತದ ರಾಯಭಾರಿ ಸಾಧ್ಯತೆ

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿನ ಅಮೆರಿಕದ ಮುಂದಿನ ರಾಯಭಾರಿಯಾಗಿ ಎರಿಕ್ ಗಾರ್ಸೆಟಿ ನೇಮಕಗೊಳ್ಳುವ ಸಾಧ್ಯತೆ ಇದೆ.

ಸದ್ಯ ಎರಿಕ್ ಅವರು ಲಾಸ್ ಏಂಜಲೀಸ್ ಮೇಯರ್ ಆಗಿದ್ದಾರೆ. ಮುಂದಿನ ವಾರ ಅಮೆರಿಕ ಅಧ್ಯಕ್ಷ ಜೋ ಬೈಡನ್‌ನ ಅವರು ರಾಯಭಾರಿಗಳ ನೇಮಕವನ್ನು ಪ್ರಕಟಿಸುವ ನಿರೀಕ್ಷೆ ಇದೆ.

ಗಾರ್ಸೆಟಿ (50) ಅವರು, ಬೈಡನ್ ಅವರ ಅಧ್ಯಕ್ಷೀಯ ಚುನಾವಣೆ ಪ್ರಚಾರದ ಸಹ ಉಸ್ತುವಾರಿಯಾಗಿದ್ದರು. ಸರ್ಕಾರ ರಚನೆ ಸಂದರ್ಭದಲ್ಲಿ ಇವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಪರಿಗಣಿಸಲಾಗಿತ್ತು. ಜನವರಿ 20ರಿಂದ ಭಾರತದಲ್ಲಿನ ಅಮೆರಿಕ ರಾಯಭಾರಿ ಹುದ್ದೆ ಖಾಲಿ ಇದೆ.

ಮೆಕ್ಸಿಕೊ: ಮತ್ತೊಬ್ಬ ಮೇಯರ್ ಅಭ್ಯರ್ಥಿ ಕೊಲೆ


ಮೆಕ್ಸಿಕೊ ಸಿಟಿ (ಎಪಿ): ಮೆಕ್ಸಿಕೊದಲ್ಲಿ ಮತ್ತೊಬ್ಬ ಮೇಯರ್ ಅಭ್ಯರ್ಥಿಯ ಹತ್ಯೆ ನಡೆದಿದೆ. ಈ ಮೂಲಕ ಮೆಕ್ಸಿಕೊದಲ್ಲಿ ಚುನಾವಣೆಗೆ ಮುನ್ನ ನಡೆಯುತ್ತಿರುವ ಹಿಂಸಾಚಾರದಲ್ಲಿ ಒಟ್ಟು 34 ಅಭ್ಯರ್ಥಿಗಳು ಮೃತಪಟ್ಟಂತಾಗಿದೆ. ಜೂನ್ 6 ರಂದು ಮೆಕ್ಸಿಕೊದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲಿದೆ.

ಗುಂಡಿನದಾಳಿ: ಭಾರತೀಯ ಮೂಲಕ ವ್ಯಕ್ತಿ ಸಾವು

ಲಾಸ್ ಏಂಜಲೀಸ್ (ಪಿಟಿಐ): ಸ್ಯಾನ್ ಜೋಸ್‌ನ ರೈಲ್ವೆಯಾರ್ಡ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಭಾರತೀಯ ಮೂಲದ ಸಿಖ್ ವ್ಯಕ್ತಿಯೂ ಸೇರಿದಂತೆ 9 ಮಂದಿ ಮೃತಪಟ್ಟಿದ್ದಾರೆ ಎಂದು ಮಾಧ್ಯಮ ವರದಿಗಳು ಗುರುವಾರ ತಿಳಿಸಿವೆ.

ತಪ್ತೇಜ್‌ದೀಪ್ ಸಿಂಗ್ ಮೃತಪಟ್ಟವರು. ಇವರು ಕಳೆದ ಒಂಬತ್ತು ವರ್ಷಗಳಿಂದ ಕಣಿವೆ ಸಾರಿಗೆ ಪ್ರಾಧಿಕಾರದ (ವಿಟಿಎ) ಸಿಬ್ಬಂದಿಯಾಗಿದ್ದರು. ಸಾಯುವ ಸಂದರ್ಭದಲ್ಲಿಯೂ ಇತರರನ್ನು ರಕ್ಷಿಸಲು ತಪ್ತೇಜ್‌ದೀಪ್ ಪ್ರಯತ್ನಿಸಿದ್ದರು. ಅವರಿಂದ ಕೆಲವರ ಪ್ರಾಣ ಉಳಿದಿದೆ. ಅವರೊಬ್ಬ ಹೀರೊ ಎಂದು ಸ್ಥಳದಲ್ಲಿದ್ದವರು ಬಣ್ಣಿಸಿದ್ದಾರೆ. ದಾಳಿಗೆ ನಿಖರ ಕಾರಣ ತಿಳಿದುಬಂದಿಲ್ಲ.





ಸೌಲಭ್ಯಗಳ ಕೊರತೆ ಅನಾವರಣ

• ಮನೋಜಕುಮಾರ್ ಗುದ್ದಿ

ಕಲಬುರ್ಗಿ: ಆಳಂದ ತಾಲ್ಲೂಕಿನ ಆಳಂಗಾ ಗ್ರಾಮದಲ್ಲಿ ಹೆಚ್ಚುತ್ತಿರುವ ಸೋಂಕಿನ ತಡೆಗೆ ಸ್ವತಃ ಗ್ರಾಮಸ್ಥರೇ ವಂತಿಗೆ ಸಂಗ್ರಹಿಸಿ ಸರ್ಕಾರಿ ಶಾಲೆಯಲ್ಲಿ ಕ್ವಾರಂಟೈನ್ ಕೇಂದ್ರ ತೆರೆಯಲು ಅನುಮತಿ ಕೇಳಿದಾಗಲೂ ಅಧಿಕಾರಿಗಳು ಒಪ್ಪಿಗೆ ನೀಡಿಲ್ಲ. ಇದು ಗ್ರಾಮಸ್ಥರ ಆರೋಪ. ಕೋವಿಡ್ ತಡೆಗೆ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಕನಿಷ್ಠ ಮುನ್ನೆಚ್ಚರಿಕೆಯ ಕೆಲಸವನ್ನೂ ಮಾಡಿಲ್ಲ ಎನ್ನುವುದು ಇಂತಹ ದೂರುಗಳಿಂದಲೇ ಸ್ಪಷ್ಟವಾಗುತ್ತದೆ.

‘ಪ್ರಜಾವಾಣಿ’ಯು ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಎರಡು ತಿಂಗಳಿಂದ ವ್ಯಾಪಕವಾಗಿ ಹಬ್ಬುತ್ತಿರುವ ಕೊರೊನಾ ಸೋಂಕು ಹಳ್ಳಿಗಳಲ್ಲಿನ ಆರೋಗ್ಯ ಸೌಲಭ್ಯಗಳ ಅವ್ಯವಸ್ಥೆ, ಅದನ್ನು ಸುಧಾರಿಸುವಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳ ಉದಾಸೀನವನ್ನೂ ಅನಾವರಣಗೊಳಿಸಿದೆ.

ಆಳಂದ ತಾಲ್ಲೂಕಿನ ಕಡಗಂಚಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ವೈದ್ಯಾಧಿಕಾರಿಗಳೇ ಇರಲಿಲ್ಲ. ಸೇಡಂ ತಾಲ್ಲೂಕಿನ ಹೂಡಾ (ಬಿ) ಗ್ರಾಮದ ಆರೋಗ್ಯ ಉಪಕೇಂದ್ರಕ್ಕೆ ಬೀಗ ಹಾಕಲಾಗಿತ್ತು. ಆಮ್ಲಜನಕ ಕೊರತೆಯಿಂದ ನಾಲ್ವರು ಸಾವನ್ನಪ್ಪಿದ್ದ ಘಟನೆಯಿಂದ ಅಪಖ್ಯಾತಿಗೊಳಗಾಗಿರುವ ಅಫಜಲಪುರ ತಾಲ್ಲೂಕು ಆಸ್ಪತ್ರೆಗೆ ಐದು ವೆಂಟಿಲೇಟರ್‌ಗಳು ಬಂದಿವೆ. ಆದರೆ ಬಳಕೆ ಮಾಡಲು ನುರಿತ ತಂತ್ರಜ್ಞರಿಲ್ಲದೇ ದೂಳು ತಿನ್ನುತ್ತಿವೆ. ತಾಲ್ಲೂಕಿನ ಬಿಸಿಎಂ ವಸತಿ ನಿಲಯವನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಆರಂಭಿಸಿದ್ದರೂ ವೈದ್ಯರ ನಿಯೋಜನೆ ಇಲ್ಲದ್ದರಿಂದ ಒಂದು ವಾರ ಯಾವ ಸೋಂಕಿತರೂ ಅಲ್ಲಿಗೆ ತೆರಳಲು ಸಾಧ್ಯವಾಗಿರಲಿಲ್ಲ. ಅಲ್ಲಿ ದಾಖಲಾಗಲು ಸೋಂಕಿತರು ಹಿಂಜರಿಯುತ್ತಿರುವುದಕ್ಕೆ ಆ ಕೇಂದ್ರ ನಗರದಿಂದ ದೂರ ಇರುವುದೂ ಕಾರಣ.

ಆಂಬುಲೆನ್ಸ್‌ಗಳ ಕೊರತೆ: ನೂತನವಾಗಿ ರಚನೆಯಾದ ಯಡ್ರಾಮಿ ತಾಲ್ಲೂಕು ಕೇಂದ್ರದಲ್ಲಿ ಇನ್ನೂ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇತ್ತೀಚೆಗಷ್ಟೇ ಇಲ್ಲೊಂದು ಆಂಬುಲೆನ್ಸ್ ನಿಯೋಜಿಸಲಾಗಿದೆ. ಆದರೆ, ತುರ್ತು ಸಂದರ್ಭಗಳಲ್ಲಿ ಚಾಲಕ ಲಭ್ಯ ಇರುವುದಿಲ್ಲ ಎಂಬ ಆರೋಪಗಳಿವೆ. ಅಫಜಲಪುರ ತಾಲ್ಲೂಕು ಆಸ್ಪತ್ರೆಯ ಮೂರು ಆಂಬುಲೆನ್ಸ್‌ಗಳ ಪೈಕಿ ಎರಡು ದುರಸ್ತಿಯಲ್ಲಿವೆ. ಕಮಲಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿದ್ದ ಆಂಬುಲೆನ್ಸ್ ಕೆಟ್ಟು ಹೋಗಿದ್ದು, ಹೊಸ ಆಂಬುಲೆನ್ಸ್ ಇನ್ನೂ ಖರೀದಿಸಿಲ್ಲ.

‘ಕೊರೊನಾಗಿಂತ ಮುಂಚೆ ಒಂದು ಸಾವು ಸಂಭವಿಸಿದರೂ ಪ್ರತಿ ಮನೆಯಿಂದಲೂ ಒಬ್ಬೊಬ್ಬರು ಅಂತ್ಯಸಂಸ್ಕಾರದಲ್ಲಿ ಭಾಗವಹಿಸುತ್ತಿದ್ದೆವು. ಒಂದೇ ದಿನದಲ್ಲಿ ನಾಲ್ಕು ಜನ ತೀರಿಕೊಂಡಾಗ ಇಡೀ ಊರೇ ಗಾಬರಿಯಾಯಿತು. ಕುಟುಂಬದವರನ್ನು ಹೊರತುಪಡಿಸಿ ಬೇರೆ ಯಾರೂ ಹೋಗಲಿಲ್ಲ. ಇಷ್ಟಾಗಿಯೂ ಸಕಾಲಕ್ಕೆ ಲಸಿಕೆ ಪೂರೈಕೆಯಾಗಿಲ್ಲ. ಗ್ರಾಮವನ್ನು ಸ್ಯಾನಿಟೈಜ್ ಮಾಡಿಲ್ಲ’ ಎಂದು ಸೇಡಂ ತಾಲ್ಲೂಕಿನ ಹೂಡಾ (ಬಿ) ಗ್ರಾಮದ ಯುವಕರಾದ ಕುರುಮಯ್ಯ, ಮಲ್ಲಿಕಾರ್ಜುನ ಹಾಗೂ ಭೀಮಾಶಂಕರ ಬೇಸರಿಸಿದರು.



ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ರೋಗಿಗಳ ಆರೈಕೆಯಲ್ಲಿ ತೊಡಗಬೇಕಿದ್ದ ಸೇಡಂ ತಾಲ್ಲೂಕಿನ ಹೂಡಾ (ಬಿ) ಗ್ರಾಮದ ಆರೋಗ್ಯ ಉಪಕೇಂದ್ರಕ್ಕೆ ಬುಧವಾರ ಕೀಲಿ ಹಾಕಿತ್ತು

ಇಲಾಖೆಗಳ ನಡುವೆ ಸಮನ್ವಯದ ಕೊರತೆ

ಗ್ರಾಮೀಣ ಪ್ರದೇಶಗಳಲ್ಲಿ ಸೋಂಕನ್ನು ಪರಿಣಾಮಕಾರಿಯಾಗಿ ತಡೆಯಬೇಕೆಂದರೆ ಕಂದಾಯ, ಆರೋಗ್ಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಮನ್ವಯ ಅತ್ಯಗತ್ಯ.

ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಕ್ವಾರಂಟೈನ್ ಕೇಂದ್ರಗಳ ನಿರ್ವಹಣೆ ಸಂದರ್ಭದಲ್ಲಿ ಸಮನ್ವಯದ ಕೊರತೆ ಢಾಳಾಗಿ ಎದ್ದು ಕಾಣುತ್ತಿದೆ. ಸೋಂಕಿತರಿಗೆ ಆಹಾರ ಪೂರೈಕೆ ಮಾಡುವುದು ಕಂದಾಯ ಅಧಿಕಾರಿಗಳ ಜವಾಬ್ದಾರಿ. ಆದರೆ, ಕಳೆದ ಬಾರಿ ಅದನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಹೊರಿಸಿದ್ದರಿಂದ ಸ್ವಂತ ಕೈಯಿಂದ ಖರ್ಚು ಮಾಡಿಯೂ ಅದರ ಬಿಲ್ ಪಾವತಿಯಾಗಿಲ್ಲ. ಹೀಗಾಗಿ, ಅಗತ್ಯವಿರುವಷ್ಟು ಕೇಂದ್ರಗಳ ಆರಂಭ ಸಾಧ್ಯವಾಗಿಲ್ಲ. ವೈದ್ಯರು, ಗ್ರೂಪ್ ‘ಡಿ’ ಸಿಬ್ಬಂದಿಯನ್ನು ನಿಯೋಜಿಸುವ ವಿಚಾರದಲ್ಲಿಯೂ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದಿಂದ ಬರುವ ಕೋವಿಡ್ ರೋಗಿಗಳನ್ನು ಕಲಬುರ್ಗಿಯ ಜಿಮ್ಸ್ ಹಾಗೂ ಇಎಸ್‌ಐಸಿ ಆಸ್ಪತ್ರೆಗಳಲ್ಲಿನ ಬೆಡ್ ವ್ಯವಸ್ಥೆಯನ್ನು ನೋಡಿಕೊಂಡು ದಾಖಲಿಸಬೇಕು. ಇಎಸ್‌ಐಸಿಯಲ್ಲಿ ಆಮ್ಲಜನಕ ಸಿಲಿಂಡರ್‌ಗಳಿಲ್ಲ ಎಂಬ ಕಾರಣ ನೀಡಿ ಜಿಮ್ಸ್‌ಗೇ ರೋಗಿಗಳನ್ನು ಕಳಿಸಲಾಗುತ್ತಿದೆ. ಇಎಸ್‌ಐಸಿಯಲ್ಲಿ ಆಮ್ಲಜನಕ ಸಿಲಿಂಡರ್‌ಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಾಯಂ ಆಮ್ಲಜನಕ ಘಟಕವನ್ನು ಆರಂಭಿಸುವ ಪ್ರಕ್ರಿಯೆ ಇನ್ನೂ ಆಮೆಗತಿಯಲ್ಲೇ ಸಾಗಿದೆ.



ಮಹಾರಾಷ್ಟ್ರದೊಂದಿಗೆ ಗ್ರಾಮದ ವಹಿವಾಟು ಹೆಚ್ಚಿದೆ. ಜನ ತೀರಿಕೊಂಡ ವೇಳೆಯೇ ಎಚ್ಚೆತ್ತು ಕ್ವಾರಂಟೈನ್ ಕೇಂದ್ರ ತೆರೆದಿದ್ದರೆ ಸೋಂಕು ಕಡಿಮೆಯಾಗುತ್ತಿತ್ತು

ರವಿ ಪಾಟೀಲ
ಆಳಂಗಾ ಗ್ರಾಮಸ್ಥ, ಆಳಂದ ತಾಲ್ಲೂಕು



ಗ್ರಾಮಗಳಲ್ಲಿ ಹೆಚ್ಚು ಸೋಂಕಿತರಿದ್ದು, ತಪಾಸಣೆ ಹೆಚ್ಚಿಸಬೇಕು. ಅಫಜಲಪುರ ತಾಲ್ಲೂಕು ಆಸ್ಪತ್ರೆಯಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಪ್ರಭಾವಿಗಳು ಹೇಳುವ ರೋಗಿಗಳಿಗೆ ಕೊಡಲಾಗುತ್ತದೆ

ಮಹಾಲಿಂಗ, ಅಫಜಲಪುರ

27 ಜನರಿಗೆ ಮಾತ್ರ ಲಸಿಕೆ: ತಿಂಗಳಲ್ಲಿ 18 ಜನರು ಮೃತಪಟ್ಟ ಹೂಡಾ (ಬಿ) ಗ್ರಾಮದಲ್ಲಿರುವ ಜನಸಂಖ್ಯೆ 3 ಸಾವಿರ. ಇಲ್ಲಿಯವರೆಗೆ ಕೇವಲ 27 ಜನರಿಗೆ ಮಾತ್ರ ಲಸಿಕೆ ನೀಡಲಾಗಿದೆ. ಇಷ್ಟೊಂದು ನಿಧಾನಗತಿಯಲ್ಲಿ ಲಸಿಕೆ ನೀಡಿದರೆ ಮುಗಿಸುವುದು ಯಾವಾಗ ಎಂಬ ಪ್ರಶ್ನೆಗಳೂ ಈ ಯುವಕರನ್ನು ಕಾಡುತ್ತಿವೆ.

‘ಕೊರೊನಾ ಸಾಂಕ್ರಾಮಿಕದ ಎರಡನೇ ಅಲೆ ಹಬ್ಬುವ ಮಾಹಿತಿ ಇದ್ದರೂ ಸರ್ಕಾರ ಉದಾಸೀನ ತೋರಿತು. ಅಗತ್ಯವಿರುವಷ್ಟು ಕೋವಿಡ್ ಆರೈಕೆ ಕೇಂದ್ರಗಳು, ಕ್ವಾರಂಟೈನ್ ಕೇಂದ್ರಗಳು, ವೈದ್ಯರು, ಸ್ಟಾಫ್ ನರ್ಸ್‌ಗಳ ನೇಮಕ ಮಾಡಿಕೊಳ್ಳದೇ ಸಮಯ ಕಳೆಯಿತು. ತುರ್ತು ಅಗತ್ಯಗಳಿಗಾಗಿ ಆಸ್ಪತ್ರೆಗಳಿಗೂ ತೆರಳಿದರೂ ಆಮ್ಲಜನಕ ಇರುವ ಬೆಡ್ ಸಿಗಲಿಲ್ಲ. ಹೀಗಾಗಿ, ಊರಿನಲ್ಲೇ ಹಲವರು ನರಳಾಡಿ ಪ್ರಾಣಬಿಟ್ಟರು. ಒಂದು ತಿಂಗಳಲ್ಲೇ 38 ಜನರು ನಮ್ಮ ಹಳ್ಳಿಯಲ್ಲಿ ಸಾವಿಗೀಡಾದರು’ ಎಂದು ಗ್ರಾಮ ಪಂಚಾಯಿತಿ ಸದಸ್ಯ ಪ್ರತಾಪ ಗಣಪತರಾವ್ ಕುಲಕರ್ಣಿ ಬೇಸರ ಹೊರಹಾಕಿದರು.

ಕಮಲಾಪುರ ತಾಲ್ಲೂಕಿನ ಮಹಾಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆ ಡಾ.ವಾಣಿಶ್ರೀ ಪಾಗಾ, ‘ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬೇರೆ ಕಾಯಿಲೆ ಇರುವವರೂ ಬರುವುದರಿಂದ ಕೋವಿಡ್ ಸೋಂಕಿತರನ್ನು ಕಲಬುರ್ಗಿಗೆ ಕಳಿಸುತ್ತೇವೆ. ಎಲ್ಲರಿಗೂ ಸೋಂಕು ತಪಾಸಣೆ ಮಾಡುವ ಬದಲು ಕೆಲವು ನಿರ್ದಿಷ್ಟ ಗುಂಪುಗಳಿಗೆ ತಪಾಸಣೆ ಮಾಡುತ್ತಿದ್ದೇವೆ’ ಎನ್ನುತ್ತಾರೆ.

ಮೇಲ್ದರ್ಜೆಗೇರದ ಆಸ್ಪತ್ರೆಗಳು: ಜಿಲ್ಲೆಯ ಶಹಾಬಾದ್, ಕಾಳಗಿ, ಯಡ್ರಾಮಿ ಹಾಗೂ ಕಮಲಾಪುರ ತಾಲ್ಲೂಕು ಕೇಂದ್ರಗಳಾಗಿ ರಚನೆಯಾಗಿ ಎರಡು ವರ್ಷ ಕಳೆದರೂ ಇನ್ನೂ ಅಲ್ಲಿನ ಆಸ್ಪತ್ರೆಗಳು ತಾಲ್ಲೂಕು ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಲ್ಲ. ಹೀಗಾಗಿ, ಈ ತಾಲ್ಲೂಕುಗಳ ಜನತೆ ವೈದ್ಯಕೀಯ ಸೇವೆಗಳಿಗಾಗಿ ಅಕ್ಕ ಪಕ್ಕದ ತಾಲ್ಲೂಕು ಕೇಂದ್ರಗಳು ಹಾಗೂ ಕಲಬುರ್ಗಿ ಜಿಲ್ಲಾಸ್ಪತ್ರೆ, ಗುಲಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ (ಜಿಮ್ಸ್) ಹಾಗೂ ಇಎಸ್‌ಐಸಿ ಆಸ್ಪತ್ರೆಯನ್ನೇ ಅವಲಂಬಿಸಿವೆ.

ಜಿಲ್ಲಾ ಕೇಂದ್ರದಲ್ಲಿಯೂ ಕೊರೊನಾ ಸಾಂಕ್ರಾಮಿಕವನ್ನು ನಿಭಾಯಿಸುವಷ್ಟು ವೈದ್ಯರು, ಸ್ಟಾಫ್ ನರ್ಸ್, ಗ್ರೂಪ್ ಡಿ ಸಿಬ್ಬಂದಿ ಇಲ್ಲ. ಹೀಗಾಗಿ, ಕೊರೊನಾ ಸೋಂಕಿತರಿಗೆ ಉತ್ತಮ ಚಿಕಿತ್ಸೆ ಎಂಬುದು ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ.

ನನ್ನ ತಮ್ಮನಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿದೆ. ಅದಕ್ಕೆ ಚುಚ್ಚುಮದ್ದು ಸಿಗುತ್ತಿಲ್ಲ. ಎಲ್ಲಿಂದಲಾದರೂ ಚುಚ್ಚುಮದ್ದು ತೆಗೆದುಕೊಂಡು ಬನ್ನಿ ಎಂದು ಇಎಸ್‌ಐಸಿ ಆಸ್ಪತ್ರೆ ವೈದ್ಯರು ಹೇಳುತ್ತಿದ್ದಾರೆ, ಎಲ್ಲಿಂದ ತರಬೇಕು?

ದಿಲೀಪ ರಾಗಿ, ನರೋಣಾ, ಆಳಂದ ತಾಲ್ಲೂಕು

ಆಳಂದ ಹಾಗೂ ಅಫಜಲಪುರದಲ್ಲಿ ಕ್ವಾರಂಟೈನ್ ಸೆಂಟರ್‌ಗಳನ್ನು ತೆರೆದರೂ ಸೋಂಕಿತರು ಬರುತ್ತಿಲ್ಲ. ಈ ಬಾರಿ ಸುಸಜ್ಜಿತ ಕೇಂದ್ರಗಳನ್ನು ಆರಂಭಿಸಲಾಗಿದೆ

ಯಲ್ಲಪ್ಪ ಸುಬೇದಾರ್
ಆಳಂದ ತಹಶೀಲ್ದಾರ್, (ಅಫಜಲಪುರ ಪ್ರಭಾರ)

ಕಲಬುರ್ಗಿ ಜಿಲ್ಲಾ
ಕೋವಿಡ್ ಅಂಕಿ–ಅಂಶ

59,676 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2931 ▲	55991 ▲	754 ▼

ದಿನದ ಏರಿಕೆ

ಹೊಸ ಪ್ರಕರಣ	153 ▼
ಗುಣಮುಖ	156 ▲
ಸಾವು	05 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ತುರ್ತು ಚಿಕಿತ್ಸೆಗೆ ದೊಡ್ಡ ಊರುಗಳೇ ಆಸರೆ

ಒಂದನೇ ಪುಟದಿಂದ...

ಬೈಂದೂರು, ಕಾಪು, ಬ್ರಹ್ಮಾವರ, ಹೆಬ್ರಿ ಹೊಸ ತಾಲ್ಲೂಕುಗಳಾಗಿವೆ. ಆದರೆ, ಇಲ್ಲಿನ ಆಸ್ಪತ್ರೆಗಳು ಮಾತ್ರ ಮೇಲ್ದರ್ಜೆಗೆ ಏರಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಸಿಗೆಯ ವ್ಯವಸ್ಥೆ ಇಲ್ಲ. ತಪಾಸಣೆ, ಲಸಿಕೆ ಅಭಿಯಾನ, ಗಂಟಲು ದ್ರವ ಮಾದರಿ ಸಂಗ್ರಹಿಸುವ ಕೆಲಸಗಳು ಮಾತ್ರ ನಡೆಯುತ್ತದೆ. ತುರ್ತು ಸಂದರ್ಭದಲ್ಲಿ ಹಾಸಿಗೆ ಬೇಕಾದರೆ ದೊಡ್ಡ ಊರುಗಳೇ ಗತಿ.

ಉಡುಪಿ, ಮಂಗಳೂರೇ ಆಸರೆ: ಉಡುಪಿಯ ಉತ್ತರ ಭಾಗದ ಜನರು ಕುಂದಾಪುರ ಉಪವಿಭಾಗ ಆಸ್ಪತ್ರೆಯನ್ನು ಅವಲಂಬಿಸಿದರೆ, ದಕ್ಷಿಣ ಭಾಗದ ಜನರು ಉಡುಪಿಯ ಟಿಎಂಎ ಪೈ ಆಸ್ಪತ್ರೆ, ಅಜ್ಜರಕಾಡು ಜಿಲ್ಲಾ ಆಸ್ಪತ್ರೆ ಇಲ್ಲವೇ ಮಂಗಳೂರಿನ ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸಬೇಕಾದ ಅನಿವಾರ್ಯತೆ ಇದೆ.

‘ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ, ಗಂಟಲು ದ್ರವ ಸಂಗ್ರಹಗಳ ವ್ಯವಸ್ಥೆ ಅಚ್ಚುಕಟ್ಟಾಗಿದೆ. ಹೋಂ ಐಸೋಲೇಷನ್‌ನಲ್ಲಿ ಇರುವವರ ಮೇಲೆ ನಿಗಾ ಕೂಡ ವಹಿಸಲಾಗಿದೆ. ಆದರೆ, ಈ ಭಾಗದಲ್ಲಿ ಯಾರಿಗಾದರೂ ಗಂಭೀರ ಸಮಸ್ಯೆಯಾದರೆ, ನಾವು ಉಡುಪಿ, ಇಲ್ಲವೇ ಮಂಗಳೂರಿನ ಆಸ್ಪತ್ರೆಗಳಿಗೇ ಹೋಗಬೇಕು’ ಎನ್ನುತ್ತಾರೆ ಪಡುಬಿದ್ರಿಯ ಸಫ್ವಾನ್.

‘ಖಾಸಗಿ ಆಸ್ಪತ್ರೆಗಳೂ ಉಡುಪಿ, ಕುಂದಾಪುರದಲ್ಲಿಯೇ ಹೆಚ್ಚಾಗಿವೆ. ಆರೋಗ್ಯ ಕೇಂದ್ರಗಳಲ್ಲಿ ಹಾಸಿಗೆ, ಆಮ್ಲಜನಕದ ವ್ಯವಸ್ಥೆ ಮಾಡಿದರೆ, ತುರ್ತು ಸಂದರ್ಭದಲ್ಲಿ ಅನುಕೂಲವಾಗುತ್ತದೆ’ ಎನ್ನುವ ಮನವಿ ಹಿರಿಯರಾದ ಇಸ್ಮಾಯಿಲ್ ಅವರದ್ದು.

ಜಾರಿಯಾಗದ ಕಟ್ಟುನಿಟ್ಟು ಕ್ರಮ

ಜಿಲ್ಲಾಡಳಿತದ ಕಟ್ಟುನಿಟ್ಟಿನ ಕ್ರಮದಿಂದ ಮೊದಲ ಅಲೆಯಲ್ಲಿ ಜನರು ಉಡುಪಿ ಜಿಲ್ಲೆಗೆ ಬರುವುದೇ ದುಸ್ತರ ಎನ್ನುವಂತಾಗಿತ್ತು. ಆದರೆ ಈ ಬಾರಿ ಅಂತಹ ಬಿಗಿ ಕ್ರಮ ಕಾಣುತ್ತಿಲ್ಲ. ಕೇರಳ ಹಾಗೂ ಮಹಾರಾಷ್ಟ್ರದಿಂದ ಬರುವವರಿಗೆ ನೆಗೆಟಿವ್ ಪ್ರಮಾಣಪತ್ರ ಕಡ್ಡಾಯ ಮಾಡಿದ್ದರೂ, ಜಿಲ್ಲಾಡಳಿತದ ಆದೇಶ ಪಾಲನೆಯಾಗುತ್ತಿಲ್ಲ ಎಂಬುದು ಸಾರ್ವಜನಿಕರ ದೂರು.

ಮಹಾರಾಷ್ಟ್ರದಲ್ಲಿ ಲಾಕ್‌ಡೌನ್ ಘೋಷಣೆಯಾದ ನಂತರ ಸಾವಿರಾರು ಜನರು ಏಕಾಏಕಿ ಜಿಲ್ಲೆಗೆ ಬಂದಿದ್ದು, ಮತ್ತೆ ಸೋಂಕಿನ ಪ್ರಮಾಣ ಹೆಚ್ಚಾಗಿದೆ. ಆರಂಭಿಕ ಹಂತದಲ್ಲಿಯೇ ತಪಾಸಣೆ ಮಾಡಿಸಿಕೊಳ್ಳದೇ, ಗಂಭೀರ ಸ್ಥಿತಿ ತಲುಪಿದಾಗ ಆಸ್ಪತ್ರೆಗೆ ಬರುತ್ತಿದ್ದಾರೆ ಎನ್ನುವುದು ಆರೋಗ್ಯ ಇಲಾಖೆ ಅಧಿಕಾರಿಗಳ ವಿವರಣೆ.

ಸೌಕರ್ಯಗಳಿಗೆ ಕೊರತೆ ಇಲ್ಲ

ಜಿಲ್ಲೆಯ ಬಹುತೇಕ ಗ್ರಾಮೀಣ ಭಾಗದಲ್ಲಿ ಆಂಬುಲೆನ್ಸ್, ಆಮ್ಲಜನಕ ಸಾಂದ್ರಕ, ಕೋವಿಡ್ ಆರೈಕೆ ಕೇಂದ್ರಗಳಿಗೆ ಕೊರತೆ ಆಗಿಲ್ಲ. ಸಂಘ–ಸಂಸ್ಥೆಗಳಿಂದಲೇ ಅಗತ್ಯ ಸೌಲಭ್ಯ ಒದಗಿಸಲಾಗಿದೆ. ಲಸಿಕೆಗೆ ಸಂಬಂಧಿಸಿದಂತೆ ಜನರಲ್ಲಿ ಹೆಚ್ಚಿನ ಜಾಗೃತಿ ಇದೆ. ಜೊತೆಗೆ ಆಶಾ ಕಾರ್ಯಕರ್ತೆಯರೂ ಮನೆ ಮನೆಗೆ ತೆರಳಿ, ಲಸಿಕೆ ಹಾಕಿಸಿಕೊಳ್ಳುವ ದಿನದ ಮಾಹಿತಿ ನೀಡುತ್ತಾರೆ.

ಉಡುಪಿ ಜಿಲ್ಲಾ
ಕೋವಿಡ್ ಅಂಕಿ–ಅಂಶ

56,106 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,015 ▲	49,773 ▲	318 ▲

ದಿನದ ಏರಿಕೆ

ಹೊಸ ಪ್ರಕರಣ	905 ▲
ಗುಣಮುಖ	753 ▲
ಸಾವು	3 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಶಿರ್ವ ಸಮುದಾಯ ಆರೋಗ್ಯ ಕೇಂದ್ರವನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಮಾಡಬಹುದು. ವೈದ್ಯರನ್ನು ತಕ್ಷಣದಿಂದ ಶಿರ್ವದಲ್ಲೇ ಕರ್ತವ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು.

ಕೆ.ಆರ್. ಪಾಟ್ಕರ್ ಶಿರ್ವ
ಗ್ರಾಮ ಪಂಚಾಯಿತಿ ಅಧ್ಯಕ್ಷ

ಗುಡ್ಡಗಾಡು ಪ್ರದೇಶದ ಜನರ ಕಣ್ಣೀರು

• ಆದಿತ್ಯ ಕೆ.ಎ.

ಮಡಿಕೇರಿ: ಗುಡ್ಡಗಾಡು ಪ್ರದೇಶವಾದ ಕೊಡಗು ಜಿಲ್ಲೆಯ ಪ್ರತಿ ಗ್ರಾಮದಲ್ಲೂ ಕೋವಿಡ್–19 ಜನರ ಜೀವಹಿಂಡುತ್ತಿದೆ. ನಗರದಲ್ಲಿದ್ದವರು ವಾಪಸ್ಸಾಗಿದ್ದರಿಂದ ಹಳ್ಳಿಹಳ್ಳಿಗೂ ಕೊರೊನಾ ಸೋಂಕು ವ್ಯಾಪಿಸಿದೆ. ಅದರಲ್ಲೂ ಬೆಟ್ಟಗುಡ್ಡಗಳ ನಿವಾಸಿಗಳು ಹಾಗೂ ಕುಗ್ರಾಮಗಳ ಜನರು ಹದಗೆಟ್ಟ ಆರೋಗ್ಯ ವ್ಯವಸ್ಥೆಯಿಂದಾಗಿ ಕಣ್ಣೀರಿನಲ್ಲಿ ಕೈತೊಳೆಯುವ ಸ್ಥಿತಿಯಿದೆ.

104 ಗ್ರಾಮ ಪಂಚಾಯಿತಿ ಒಳಗೊಂಡಿರುವ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳೇ ಇಲ್ಲ. ಸೋಂಕು ತಗುಲಿದವರೂ ಅಕ್ಕಪಕ್ಕದ ಗ್ರಾಮದ ಆರೋಗ್ಯ ಕೇಂದ್ರ, ಇಲ್ಲವೇ ತಾಲ್ಲೂಕು ಕೇಂದ್ರ ಹಾಗೂ ಜಿಲ್ಲಾ ಕೇಂದ್ರಕ್ಕೇ ಚಿಕಿತ್ಸೆಗೆ ಧಾವಿಸಬೇಕು. ಕಾರ್ಮಿಕರೂ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದು, ಅವರಿಗೆ ಸೋಂಕು ತಗುಲಿದರೂ ಅರಿವಿಗೇ ಬರುತ್ತಿಲ್ಲ.

ಜಿಲ್ಲೆಯಲ್ಲಿ 32 ಆಂಬುಲೆನ್ಸ್‌ಗಳು ಸೇವೆ ನೀಡುತ್ತಿದ್ದು ದುರ್ಗಮ ಪ್ರದೇಶಕ್ಕೆ ಅವುಗಳು ತಲುಪುತ್ತಿಲ್ಲ. ಇದೇ ರೋಗಿಗಳ ಜೀವಕ್ಕೆ ಆಪತ್ತು ತರುತ್ತಿದೆ. ಸೋಮವಾರಪೇಟೆ ತಾಲ್ಲೂಕಿನ ಬಜೆಗುಂಡಿಯಲ್ಲಿ ಆಂಬುಲೆನ್ಸ್‌ಗಾಗಿ ಕಾದಿದ್ದ ಕೋವಿಡ್ ಪೀಡಿತ ಯುವಕನೊಬ್ಬ ರಸ್ತೆಯಲ್ಲೇ ಕುಸಿದು ಮೃತಪಟ್ಟದ್ದ ಘಟನೆಯೂ ಇಲ್ಲಿನ ಜನರ ಕಣ್ಣೆದುರಿಗಿದೆ.

ಇನ್ನು ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಉಪಟಳವಿದ್ದು, ಹೋಂ ಐಸೋಲೇಷನ್‌ನಲ್ಲಿರುವ ರೋಗಿಗಳು ರಾತ್ರಿ ವೇಳೆ ಗಂಭೀರ ಸ್ಥಿತಿಗೆ ತಲುಪಿದರೆ ಕಾಡಾನೆ ಭಯದಿಂದ ದೂರದ ಆಸ್ಪತ್ರೆಗೆ ಬರಲೂ ಸಾಧ್ಯವಾಗುತ್ತಿಲ್ಲ.

‘ಆರಂಭಿಕ ದಿನಗಳಲ್ಲಿ ಪ್ರಕರಣಗಳು ಕಡಿಮೆಯಿದ್ದವು. ಆಂಬುಲೆನ್ಸ್‌ಗಳೂ ಓಡಾಟ ನಡೆಸುತ್ತಿದ್ದವು. ಈಗ ಪ್ರಕರಣಗಳು ಹೆಚ್ಚಿದ್ದು, ನಾವೇ ಆಸ್ಪತ್ರೆಗೆ ತೆರಳಬೇಕು. ವೃದ್ಧರಿಗೆ ಸೋಂಕು ತಗುಲಿದರೆ, ಬಾಡಿಗೆ ವಾಹನ ಪಡೆದು ಆಸ್ಪತ್ರೆಗೆ ಕಳುಹಿಸುತ್ತೇವೆ. ಕೆಲವು ಮನೆಗಳ ಕಡೆಗೆ ಬೈಕ್ ಬಿಟ್ಟರೆ, ಬೇರೆ ಯಾವ ವಾಹನಗಳು ಹೋಗಲೂ ಸಾಧ್ಯವಿಲ್ಲದ ಸ್ಥಿತಿ ಇದೆ. ಅಂತಹ ಕಡೆ, ರೋಗಿಗಳನ್ನು ನಾವೇ ಹೊತ್ತುಕೊಂಡು ಆಸ್ಪತ್ರೆಗೆ ಸೇರಿಸಿದ್ದೇವೆ’ ಎನ್ನುತ್ತಾರೆ ಮಾದಾಪುರದ ಹರೀಶ್.

ಸೋಮವಾರಪೇಟೆ ತಾಲ್ಲೂಕಿನ ಕಾಡ್ಮನೆ ಗ್ರಾಮದ ನೋವಿನ ಕಥೆಯನ್ನು ಕೊರೊನಾ ಸೋಂಕಿತರು ಹೇಳುವಾಗ ಕಣ್ಣಂಚಿನಲ್ಲಿ ನೀರು ಜಿನುಗುತ್ತದೆ.

‘ಕೂಲಿ, ಕೃಷಿ ಮಾಡುತ್ತಲೇ ಬದುಕು ಸಾಗಿಸುತ್ತಿದ್ದೆವು. ಮಾರ್ಚ್ ತನಕ ನಿತ್ಯದ ಜೀವನ ಹೇಗೋ ನಡೆಯುತ್ತಿತ್ತು. ಅದಾದ ಮೇಲೆ ದಿಕ್ಕೇ ಬದಲಾಗಿ ಹೋಗಿದೆ. ಊರಿನ ಬಹುತೇಕರು ಈಗ ಕೊರೊನಾ ಪೀಡಿತರು. ಕೋವಿಡ್‌ನಿಂದ ಗ್ರಾಮದಲ್ಲಿ ಸಾವು ಸಂಭವಿಸಿ, ಕಣ್ಣೀರು ಉಳಿಸಿ ಹೋಗಿದೆ’ ಎಂದು ಸೋಂಕಿತರು ನೋವಿನಿಂದ ನುಡಿಯುತ್ತಾರೆ. ಕಳೆದ ವರ್ಷ ಒಂದೇ ಒಂದು ಪ್ರಕರಣ ಪತ್ತೆಯಾಗದ ಈ ಊರಿನಲ್ಲಿ, ಈ ಬಾರಿ ಪ್ರತಿ ಮನೆಯಲ್ಲೂ ಸೋಂಕಿತರಿದ್ದಾರೆ.

‘ಕಾಡ್ಮನೆ ಗ್ರಾಮದ ಜನರು ತಪಾಸಣೆಗೂ ಸೋಮವಾರಪೇಟೆಗೆ ಬರಬೇಕು. ವರದಿಯು ಪಾಸಿಟಿವ್ ಎಂದು ಬಂದಲ್ಲಿ, ಅಂಥವರು ಕೋವಿಡ್ ಆರೈಕೆ ಕೇಂದ್ರಕ್ಕೆ ಸುಮಾರು 40 ಕಿ.ಮೀ. ದೂರದ ಕುಶಾಲನಗರ ಸಮೀಪದ ಕೂಡಿಗೆಗೆ ಬರಬೇಕು. ಬಡವರು, ಕೂಲಿ ಕಾರ್ಮಿಕರು ಲಾಕ್‌ಡೌನ್ ಅವಧಿಯಲ್ಲಿ ಅಷ್ಟು ದೂರ ಹೇಗೆ ಕ್ರಮಿಸುವುದು? ಆಂಬುಲೆನ್ಸ್ ವ್ಯವಸ್ಥೆಯನ್ನೂ ಸರಿಯಾಗಿ ಮಾಡುತ್ತಿಲ್ಲ. ಸ್ಥಿತಿ ಗಂಭೀರವಿದ್ದರೂ ಹೋಂ ಐಸೋಲೇಷನ್ ನೆಪದಲ್ಲಿ ಮನೆಗೇ ಕಳುಹಿಸುತ್ತಾರೆ’ ಎಂದು ಸೋಂಕಿತರು ಅಳಲು ತೋಡಿಕೊಳ್ಳುತ್ತಾರೆ. ಉತ್ತರ ಕೊಡಗಿನ ಭಾಗದ ಬಹುತೇಕ ಹಳ್ಳಿಗಳು ಕೊರೊನಾ ಬಾಧಿತವಾಗಿವೆ. ಜಿಲ್ಲೆಯ ದಕ್ಷಿಣ ಭಾಗದಲ್ಲೂ ಅದೇ ಸ್ಥಿತಿಯಿದೆ.

ಶನಿವಾರಸಂತೆ ಸಮೀಪದ ಹಂಡ್ಲಿ ಗ್ರಾಮಕ್ಕೆ ‘ಪ್ರಜಾವಾಣಿ’ ಪ್ರತಿನಿಧಿ ಭೇಟಿ ಕೊಟ್ಟಾಗ ಜನರ ಓಡಾಟ ವಿರಳವಾಗಿತ್ತು. ಪಂಚಾಯಿತಿ ವ್ಯಾಪ್ತಿಯ, 21 ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗವು ಜನರನ್ನು ಮನೆಯಿಂದ ಹೊರಗೆ ಬರುವುದಕ್ಕೇ ಯೋಚಿಸುವಂತೆ ಮಾಡಿಬಿಟ್ಟಿದೆ.

‘ದೂರದ ಕಾಫಿ ತೋಟಕ್ಕೆ ಕೂಲಿಗೆ ತೆರಳುತ್ತಿಲ್ಲ. ಪರಿಚಯಸ್ಥ ಮಾಲೀಕರ ತೋಟಕ್ಕೆ ಮಾತ್ರ ಹೋಗುತ್ತಿದ್ದೇವೆ. ನಾವು ಸತ್ತರೆ ನಮ್ಮ ಮಕ್ಕಳಿಗೆ ಇನ್ಯಾರು ಗತಿ? ತೋಟದ ಕಾರ್ಮಿಕರಿಗೆ ಲಸಿಕೆಯ ಮಾಹಿತಿಯನ್ನು ಯಾರೂ ನೀಡುತ್ತಿಲ್ಲ’ ಎಂದು ಕೊಡ್ಲಿಪೇಟೆಯಲ್ಲಿ ಮಾತಿಗೆ ಸಿಕ್ಕ ಕಾರ್ಮಿಕ ಮಹಿಳೆ ರಂಗಿ ಪರಿಸ್ಥಿತಿಯನ್ನು ವಿವರಿಸಿದರು.

ಜಿಲ್ಲೆಯಲ್ಲಿ ಆರು ಕಡೆ ಕೋವಿಡ್ ಆರೈಕೆ ಕೇಂದ್ರ ತೆರೆಯಲಾಗಿದೆ. ‘ಬಿಸಿನೀರು ಕೊಡುವುದಿಲ್ಲ. ಊಟ ಕಳಪೆಯಾಗಿರುತ್ತೆ. ಔಷಧಿಯನ್ನೂ ಸರಿಯಾಗಿ ನೀಡುತ್ತಿಲ್ಲ’ ಎಂದು ಗಾಳಿಬೀಡಿನ ಆರೈಕೆ ಕೇಂದ್ರದ ಸೋಂಕಿತರು ಆಪಾದಿಸಿ ಪ್ರತಿಭಟಿಸಿದ್ದರು. ಪ್ರತಿಭಟಿಸಿದ್ದ 10 ಮಂದಿಯನ್ನು ಕೇಂದ್ರದಿಂದ ಮನೆಗೆ ಕಳುಹಿಸಲಾಗಿತ್ತು. ‘ನಿಮಗೆ ಕೊರೊನಾ ಸೋಂಕಿರುವ ಕಾರಣಕ್ಕೆ ಊಟದ ರುಚಿ ಗೊತ್ತಾಗುವುದಿಲ್ಲ. ಅಡುಗೆ ಚೆನ್ನಾಗಿಯೇ ಇದೆ, ತಿನ್ನಿ’ ಎಂದು ಸಿಬ್ಬಂದಿ ಸಬೂಬು ಹೇಳಿದ್ದರು. ಅದಾದ ಮೇಲೆ ಜಿಲ್ಲಾಡಳಿತ ಎಚ್ಚೆತ್ತುಕೊಂಡಿತ್ತು.

ಈ ಕೇಂದ್ರಕ್ಕೆ ಭೇಟಿ ನೀಡಿದಾಗ, ‘ಈಗ ಆರೈಕೆ ಕೇಂದ್ರದಲ್ಲಿ ವಾತಾವರಣ ಉತ್ತಮವಾಗಿದೆ. ಊಟವೂ ರುಚಿಯಾಗಿದೆ. ಬಿಸಿನೀರು ಕೂಡ ಲಭಿಸುತ್ತಿದೆ’ ಎಂದು ಸೋಂಕಿತರೊಬ್ಬರು ಹೇಳಿದರು. ‘ಆದರೆ, ಸೋಂಕಿತರು ಆರೈಕೆ ಕೇಂದ್ರಕ್ಕೆ ಬಂದಾಗ, ಅವರಿಗೆ ಔಷಧಿ ನೀಡಿ ಧೈರ್ಯ ತುಂಬುವ ಕೆಲಸ ನಡೆಯುತ್ತಿಲ್ಲ. ಇದು ನಮ್ಮನ್ನು ಮಾನಸಿಕವಾಗಿ ಕುಗ್ಗುವಂತೆ ಮಾಡಿದೆ. ಪ್ರಶ್ನೆ ಮಾಡಿದರೆ ಕೇಂದ್ರದಿಂದಲೇ ಹೊರಗೆ ಕಳುಹಿಸುತ್ತಾರೆಂಬ ಭಯವಿದೆ’ ಎಂದೂ ಅಳಲು ತೋಡಿಕೊಂಡರು.

ಕೋವಿಡ್ ಆಸ್ಪತ್ರೆಯಲ್ಲಿ ಸೋಂಕಿತರ ಬೆಲೆಬಾಳುವ ವಸ್ತುಗಳು ಕಳವಾಗುತ್ತಿರುವ ಪ್ರಕರಣಗಳು ವರದಿಯಾದ ಮೇಲೆ, ಇದೀಗ ಎಲ್ಲ ವಾರ್ಡ್‌ಗೂ ಸಿ.ಸಿ ಟಿ.ವಿ ಕ್ಯಾಮೆರಾ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಕೋವಿಡ್ ಆಸ್ಪತ್ರೆಯಲ್ಲಿ ಸೋಂಕಿತರಿಗೆ ಊಟ ಪೂರೈಸುವ ವೇಳೆ ಮೊಬೈಲ್ ಕದ್ದಿದ್ದ ಆರೋಪಿಯನ್ನು ಬಂಧಿಸಲಾಗಿದೆ.

ಮಡಿಕೇರಿಯ ಕೋವಿಡ್ ಆಸ್ಪತ್ರೆಯ ಕರ್ಮಕಾಂಡಗಳು ಬೆಳಕಿಗೆ ಬಂದ ಮೇಲೆ ಆಸ್ಪತ್ರೆಯ ಅಧೀಕ್ಷಕ ಡಾ.ಲೋಕೇಶ್ ಅವರನ್ನು ಬದಲಾಯಿಸಿ, ಡಾ.ಮಂಜುನಾಥ್ ಅವರ ನೇಮಕ ಮಾಡಲಾಗಿದೆ. ಆಸ್ಪತ್ರೆಯ ಸುಧಾರಣೆಗೆ ‘ಕಾರ್ಯಪಡೆ’ ರಚಿಸಲಾಗಿದೆ. ಆದರೆ ತಜ್ಞ ವೈದ್ಯರು ಹಾಗೂ ನರ್ಸ್‌ಗಳ ಕೊರತೆ ಇರುವುದರಿಂದ ರೋಗಿಗಳು ಪರದಾಡುವ ಸ್ಥಿತಿಯಿದೆ.

ಕೊಡಗು ಕೃಷಿ ಪ್ರಧಾನ ಜಿಲ್ಲೆ. ಇದನ್ನೇ ನೆಚ್ಚಿಕೊಂಡ ಕಾರ್ಮಿಕರ ಸಂಖ್ಯೆಯೂ ಹೆಚ್ಚು. ಈ ಕಾರ್ಮಿಕರು ಹಾಗೂ ಬಡವರಿಗೆ ಮಡಿಕೇರಿಯಲ್ಲಿರುವ ಕೋವಿಡ್ ಆಸ್ಪತ್ರೆಯೊಂದೇ ಗತಿ. ಇಲ್ಲಿ ಮಾತ್ರ ಐಸಿಯು ಬೆಡ್ ವ್ಯವಸ್ಥೆ ಇದೆ. ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆ ಸೌಲಭ್ಯವಿಲ್ಲ. ಸ್ಥಿತಿವಂತರು, ಮೈಸೂರು ಹಾಗೂ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಕಾರ್ಮಿಕರ ಕಷ್ಟ ವ್ಯವಸ್ಥೆಗೆ ಅರ್ಥವಾಗುತ್ತಿಲ್ಲ.



ಕೊಡಗು ಜಿಲ್ಲೆಯ ಗಾಳಿಬೀಡಿನ ಕೋವಿಡ್ ಆರೈಕೆ ಕೇಂದ್ರ

ತತ್ತರಿಸಿದ ಗಿರಿಜನ ಸಮೂಹ

ಕೊಡಗಿನ ಕಾರೆಕಂಡಿ, ಬೊಂಬುಹಾಡಿ, ಚೇಣಿಹಡ್ಲು, ಆಯಿರುಸುಳಿ, ಮಜ್ಜಿಗೆಹಳ್ಳ, ಆನೆ ಕ್ಯಾಂಪ್, ಕಾಡಿನ ಹಾಡಿಗಳಲ್ಲಿ ವಾಸಿಸುತ್ತಿರುವ ಗಿರಿಜನರನ್ನೂ ಕೋವಿಡ್ ಸಂಕಷ್ಟಕ್ಕೆ ತಳ್ಳಿದೆ. ಅವರು ಕೋವಿಡ್ ಸೋಂಕಿಗೆ ಒಳಗಾಗದಿದ್ದರೂ ಪರೋಕ್ಷವಾಗಿ ಅವರ ಬದುಕಿನ ಮೇಲೆ ಪರಿಣಾಮ ಬೀರಿದೆ. ಕೂಲಿಯನ್ನೇ ಬದುಕಿನ ಉಸಿರಾಗಿಸಿಕೊಂಡಿರುವ ಇವರು, ಈಗ ಕೆಲಸವಿಲ್ಲದೇ ನಲುಗಿ ಹೋಗಿದ್ದಾರೆ.

ಗಂಟಲು ದ್ರವದ ಮಾದರಿ ನೀಡಲು ಆಸ್ಪತ್ರೆಗೆ ಬರಲೂ ಗಿರಿಜನರು ಹಿಂದೇಟು ಹಾಕುತ್ತಿದ್ದಾರೆ. ಇನ್ನು, ಲಸಿಕೆ ಹಾಕಿಸಿಕೊಳ್ಳಿ ಎಂದರೆ, ‘ಕಾಯಿಲೆಗೆ ನಾವೇ ಮದ್ದು ಕಂಡುಕೊಳ್ಳುತ್ತೇವೆ. ನಿಮಗ್ಯಾಕೆ ಚಿಂತೆ. ನೀವ್ಯಾರೂ ಹಾಡಿಗೆ ಬರಬೇಡಿ’ ಎಂದು ಅಧಿಕಾರಿಗಳಿಗೆ ತಾಕೀತು ಮಾಡುತ್ತಿದ್ದಾರೆ. ಹಾಡಿಗಳಿಗೆ ಸೋಂಕು ವ್ಯಾಪಿಸಿದರೆ ಕಷ್ಟ ಎಂಬುದು ಅಧಿಕಾರಿಗಳ ಆತಂಕ. ಆ ಎಚ್ಚರಿಕೆಯಿಂದ, ಅವರು ಇದೀಗ ಗಿರಿಜನರ ಮನವೊಲಿಸುವ ಕೆಲಸಕ್ಕೆ ಮುಂದಾಗಿದ್ದಾರೆ.

ಮಳೆ, ಪ್ರವಾಹ ಕಲಿಸಿದ ಪಾಠ

ಕೆಲವು ಗ್ರಾಮಗಳಲ್ಲಿ ಲಾಕ್‌ಡೌನ್‌ಗೆ ಜನರು ಹೆದರಿಲ್ಲ. ಮಳೆಗಾಲದ ಮೂರು ತಿಂಗಳು ಕಳೆದಂತೆಯೇ ಈ ಲಾಕ್‌ಡೌನ್ ಅನ್ನು ಜನರು ಕಳೆಯುತ್ತಿದ್ದಾರೆ. ಅಂಥ ಹಲವು ಹಳ್ಳಿಗಳು ಜಿಲ್ಲೆಯಲ್ಲಿ ಸಿಗುತ್ತವೆ. ಭಾಗಮಂಡಲ, ಚೇರಂಗಾಲ, ಅಯ್ಯಂಗೇರಿ, ನಾಪೋಕ್ಲು, ಬಲಮುರಿ, ಕರಡಿಗೋಡು ಮಳೆಗಾಲದಲ್ಲಿ ಸಂಪರ್ಕ ಕಳೆದುಕೊಳ್ಳುತ್ತವೆ. ಆ ಗ್ರಾಮಗಳ ಜನರು, ತಿಂಗಳಿಗೆ ಆಗುವಷ್ಟು ಸಾಮಗ್ರಿಯನ್ನು ಮೊದಲೇ ಹೊತ್ತೊಯ್ದು, ತಮ್ಮೂರಿನಲ್ಲಿಯೇ ಕೆಲಸ ಮಾಡಿಕೊಂಡು ಮಳೆಗಾಲ ಕಳೆಯುತ್ತಾರೆ. ಕೋವಿಡ್ ನಿಯಂತ್ರಣಕ್ಕೆ ಹೇರುತ್ತಿರುವ ಈ ಲಾಕ್‌ಡೌನ್ ವೇಳೆಯೂ ಈ ಗ್ರಾಮಗಳ ಜನರು ತಮ್ಮ ಪಾಡಿಗೆ ಕೆಲಸ ಮಾಡಿಕೊಂಡಿದ್ದಾರೆ.



ಕೊಡಗಿನ ಗಡಿಭಾಗದ ಗ್ರಾಮಗಳಲ್ಲಿ ಏಪ್ರಿಲ್‌ನಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾಗಿದ್ದವು. ಈಗ ಸ್ವಲ್ಪ ನಿಯಂತ್ರಣಕ್ಕೆ ಬರುತ್ತಿವೆ. ಅಗತ್ಯವಿರುವಷ್ಟು ಔಷಧಿಯೂ ಲಭಿಸುತ್ತಿದೆ

ಡಾ.ರಾಜೇಶ್ವರಿ, ವೈದ್ಯೆ, ಶನಿವಾರಸಂತೆ



ಈ ವರ್ಷ ಗ್ರಾಮೀಣರೇ ಕೋವಿಡ್‌ಗೆ ಹೆದರಿದ್ದಾರೆ. ಹೀಗಾಗಿ ಕೃಷಿ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ. ಲಾಕ್‌ಡೌನ್ ತೆರವಾದ ಮೇಲೆ ಪರಿಸ್ಥಿತಿ ಅರಿವಿಗೆ ಬರಲಿದೆ

ವೀರೇಂದ್ರ ಕುಮಾರ್
ಸದಸ್ಯ, ಹಂಡ್ಲಿ ಗ್ರಾಮ ಪಂಚಾಯಿತಿ

ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸಾಕಾಗುವಷ್ಟು ಲಸಿಕೆ ಪೂರೈಕೆಯಾಗಿಲ್ಲ. ಲಸಿಕೆಯ ಮಹತ್ವದ ಬಗ್ಗೆ ಕಾರ್ಮಿಕರಲ್ಲೂ ಅರಿವು ಮೂಡಿಸಿಲ್ಲ. ಕಾರ್ಮಿಕರು ಹಾಗೆಯೇ ಕೆಲಸಕ್ಕೆ ತೆರಳುತ್ತಿದ್ದಾರೆ

ಎಚ್.ಬಿ.ಜಯಮ್ಮ, ಬೆಳ್ಳಾರಳ್ಳಿ ಗ್ರಾಮದ ನಿವಾಸಿ

ಕೊಡಗು ಜಿಲ್ಲಾ
ಕೋವಿಡ್ ಅಂಕಿ–ಅಂಶ

23,509 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,761 ▲	20,444 ▲	304 ▲

ದಿನದ ಏರಿಕೆ

ಹೊಸ ಪ್ರಕರಣ	269 ▼
ಗುಣಮುಖ	108 ▼
ಸಾವು	1 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್


ಕೋವಿಡ್: ದೃಢ ಪ್ರಮಾಣ ಮತ್ತಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 24,214 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 25 ಲಕ್ಷದ ಗಡಿ (25.23 ಲಕ್ಷ) ದಾಟಿದೆ.

ಈ ತಿಂಗಳು ಕೆಲ ದಿನಗಳು ಶೇ 30ರ ಗಡಿಯ ಆಸುಪಾಸಿನಲ್ಲಿಯೇ ಇದ್ದ ಸೋಂಕು ದೃಢ ಪ್ರಮಾಣ ಈಗ ಶೇ 17.59ಕ್ಕೆ ಇಳಿಕೆಯಾಗಿದೆ. ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 273 ಮಂದಿ ಸೇರಿದಂತೆ ರಾಜ್ಯದಲ್ಲಿ 476 ಮಂದಿ ಸಾವಿಗೀಡಾಗಿರುವುದು ಗುರುವಾರ ದೃಢಪಟ್ಟಿದೆ. ಮರಣ ಪ್ರಮಾಣ ದರ ಶೇ 1.96ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 27,405ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.37 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 4.02 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 31,459 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 20.94 ಲಕ್ಷ ದಾಟಿದೆ.



9 ಜಿಲ್ಲೆಗಳಲ್ಲಿ 10ಕ್ಕೂ ಅಧಿಕ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬಳ್ಳಾರಿಯಲ್ಲಿ 22 ಮಂದಿ, ಮೈಸೂರಿನಲ್ಲಿ 18 ಮಂದಿ, ಬೆಳಗಾವಿ ಹಾಗೂ ಧಾರವಾಡದಲ್ಲಿ ತಲಾ 15 ಮಂದಿ, ತುಮಕೂರಿನಲ್ಲಿ 14 ಮಂದಿ, ಉತ್ತರ ಕನ್ನಡದಲ್ಲಿ 13 ಮಂದಿ, ಚಿಕ್ಕಬಳ್ಳಾಪುರದಲ್ಲಿ 11 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಗೊಂಡಿದ್ದು, 24 ಗಂಟೆಗಳ ಅವಧಿಯಲ್ಲಿ 5,949 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (2,240), ಹಾಸನ (1,505), ತುಮಕೂರು (1,219), ಬೆಳಗಾವಿ (1,147) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ. ಬೀದರ್ (60), ಕಲಬುರ್ಗಿ (153), ಹಾವೇರಿ (159) ಸೇರಿದಂತೆ 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ವರದಿಯಾಗಿವೆ.

ಲಸಿಕೆ: ಮತ್ತಷ್ಟು ಸಿಬ್ಬಂದಿ ಸೇರ್ಪಡೆ

ಬೆಂಗಳೂರು: ಕೋವಿಡ್ ಲಸಿಕೆ ವಿತರಣೆಗೆ ಸಂಬಂಧಿಸಿ 18ರಿಂದ 44 ವರ್ಷದೊಳಗಿನ ಕೊರೊನಾ ಮುಂಚೂಣಿ ಕಾರ್ಯಕರ್ತರ ಗುಂಪಿಗೆ ಅಗ್ನಿಶಾಮಕ ಇಲಾಖೆ ಸೇರಿದಂತೆ ವಿವಿಧೆಡೆ ಕಾರ್ಯನಿರ್ವಹಿಸುವ ಸಿಬ್ಬಂದಿಯನ್ನು ಸೇರಿಸಲಾಗಿದೆ.

ಈ ಸಂಬಂಧ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಜಿಲ್ಲಾಧಿಕಾರಿಗಳು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಒಂದು ವಾರದ ಹಿಂದೆ ಮುಖ್ಯ ಕಾರ್ಯದರ್ಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 18ರಿಂದ 44 ವರ್ಷದವರೆಗಿನ ಕೊರೊನಾ ಮುಂಚೂಣಿ ಕಾರ್ಯಕರ್ತರು ಹಾಗೂ ಆದ್ಯತಾ ಗುಂಪುಗಳನ್ನು ಗುರುತಿಸಲಾಗಿತ್ತು. ಅವರಿಗೆ ಮೇ 22ರಿಂದ ಲಸಿಕೆ ವಿತರಣೆ ಪ್ರಾರಂಭಿಸಲಾಗಿದೆ. ಈಗ ಆ ಸಾಲಿಗೆ ಮತ್ತಷ್ಟು ಗುಂಪುಗಳನ್ನು ಸೇರ್ಪಡೆ ಮಾಡಲಾಗಿದೆ.

ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆ ಸಿಬ್ಬಂದಿ, ಆಸ್ಪತ್ರೆಗಳಿಗೆ ವೈದ್ಯಕೀಯ ಆಮ್ಲಜನಕ, ಔಷಧ ಹಾಗೂ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುವ ಸಿಬ್ಬಂದಿ, ಕರ್ನಾಟಕ ರಾಜ್ಯ ಆಹಾರ ನಿಗಮ ಸಿಬ್ಬಂದಿ, ದೀರ್ಘಾವಧಿ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಸಿಬ್ಬಂದಿ, ತೋಟಗಾರಿಕೆ ಇಲಾಖೆ ಸಿಬ್ಬಂದಿ ಹಾಗೂ ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ ಸಿಬ್ಬಂದಿ ಹೊಸದಾಗಿ ಮುಂಚೂಣಿ ಕಾರ್ಯಕರ್ತರ ಗುಂಪಿಗೆ ಸೇರ್ಪಡೆಯಾಗಿದ್ದಾರೆ.

ಆದ್ಯತೆ ಗುಂಪಿಗೆ ವಿಮೆ ಸಿಬ್ಬಂದಿಯನ್ನು ಸೇರ್ಪಡೆಮಾಡಲಾಗಿದೆ. ಒಟ್ಟು 29 ವಿಭಾಗದಲ್ಲಿ ಮುಂಚೂಣಿ ಕಾರ್ಯಕರ್ತರನ್ನು ಗುರುತಿಸಲಾಗಿದೆ. ಅದೇ ರೀತಿ, ಹೋಟೆಲ್ ಮತ್ತು ಆತಿಥ್ಯ ಸೇವಾದಾರರು, ಪೆಟ್ರೋಲ್ ಬಂಕ್ ಕೆಲಸಗಾರರು ಸೇರಿದಂತೆ 19 ವಿಭಾಗಗಳಲ್ಲಿ ವಿವಿಧ ವಲಯಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಆದ್ಯತಾ ಗುಂಪಿನಲ್ಲಿ ಗುರುತಿಸಲಾಗಿದೆ.

ಬಿಜೆಪಿ: ಹೊರಗೆ ತಣ್ಣಗೆ, ಒಳಗೆ ಧಗೆ

ಒಂದನೇ ಪುಟದಿಂದ...

ಸಚಿವರು–ಶಾಸಕರು ಪರಸ್ಪರ ಟೀಕಿಸಿಕೊಳ್ಳುತ್ತಾ, ಆಂತರಿಕ ರಾಜಕೀಯವನ್ನು ಬೀದಿಗೆ ತಂದಿದ್ದರೂ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಈ ಬಗ್ಗೆ ತುಟಿಬಿಚ್ಚಿಲ್ಲ. ಇದು ಕೂಡ ನಾನಾ ರೀತಿಯ ಚರ್ಚೆಗಳನ್ನು ಹುಟ್ಟು ಹಾಕಿದೆ.

ಸಂಪುಟ ಸಭೆಯಲ್ಲೂ ಚರ್ಚೆ: ಯೋಗೇಶ್ವರ್ ಅವರ ದೆಹಲಿ ಭೇಟಿ ವಿಚಾರವನ್ನು ಸಂಪುಟ ಸಭೆಯಲ್ಲಿ ಅನೌಪಚಾರಿಕವಾಗಿ ಪ್ರಸ್ತಾಪಿಸಿದ ಕೆಲವು ಸಚಿವರು, ಕೋವಿಡ್ ಸಂಕಷ್ಟದಲ್ಲಿ ಈ ರೀತಿಯ ಬೆಳವಣಿಗೆ ಆಗುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಯೋಗೇಶ್ವರ್ ಅವರಿಂದ ವಿವರಣೆ ಕೇಳಬೇಕು ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ‘ಈ ರೀತಿ ವರ್ತನೆ ಸಹಿಸಿಕೊಳ್ಳಬೇಕೆ? ಸಂಪುಟದಿಂದ ಕೈಬಿಡುವುದು ಸೂಕ್ತ ಎಂದು ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದರು’ ಎಂದು ಮೂಲಗಳು ಹೇಳಿವೆ.

‘ಹಲವರ ಶ್ರಮದಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಇಂತಹ ಸಂದರ್ಭದಲ್ಲೂ ಈ ರೀತಿ ವರ್ತನೆ ಶೋಭೆ ತರುವಂತಹದ್ದಲ್ಲ. ನಾಯಕತ್ವ ಬದಲಾವಣೆಗೆ ಹೊರಟವರು ಅರ್ಥ ಮಾಡಿಕೊಳ್ಳಬೇಕು ಎಂದು ಕೆಲವು ಸಚಿವರು ಹೇಳಿದರು’ ಮೂಲಗಳು ತಿಳಿಸಿವೆ.

ಕೆಎಎಸ್ ಅಧಿಕಾರಿ ಪತಿ ಕೋವಿಡ್‌ನಿಂದ ಸಾವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮದುವೆಯ ನಂತರ ಪತ್ನಿಯನ್ನು ಓದಿಸಿ, ಅವರ ಕೆಎಎಸ್ ಕನಸಿಗೆ ನೀರೆರೆದಿದ್ದ ಪತಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ನಗರದ ಕಾಮಾಕ್ಷಿ ಬೀದಿಯ ಎಲ್.ಶ್ರೀನಿವಾಸ್ (45) ಮೃತಪಟ್ಟವರು.

ಇವರು ಅಕ್ಕನ ಮಗಳನ್ನೇ ಮದುವೆಯಾಗಿದ್ದರು. ತಮ್ಮ ಸಾಧುಶೆಟ್ಟಿ ಸಮಾಜದಲ್ಲಿ ಹೆಣ್ಣುಮಕ್ಕಳು ಓದುವುದಿಲ್ಲ ಎಂಬ ಆಪಾದನೆಯಿಂದ ಮುಕ್ತವಾಗಬೇಕು ಎಂದು ಪತ್ನಿ ಅಶ್ವಿನಿಗೆ ಓದಲು ಪ್ರೇರಣೆ ನೀಡಿದ್ದರು. ಪತಿಯ ನಿರೀಕ್ಷೆ ಹುಸಿಗೊಳಿಸದ ಅಶ್ವಿನಿ ಪದವಿ ನಂತರ ಕೆಎಎಸ್ ತೇರ್ಗಡೆಯಾಗಿದ್ದರು. ಪ್ರಸ್ತುತ ತುಮಕೂರಿನಲ್ಲಿ ಪ್ರೊಬೇಷನರಿ ಅಧಿಕಾರಿಯಾಗಿ ತರಬೇತಿ ಪಡೆಯುತ್ತಿದ್ದಾರೆ. ತಹಶೀಲ್ದಾರ್ ಹುದ್ದೆ ಪೂರ್ಣಪ್ರಮಾಣದಲ್ಲಿ ದೊರಕುವ ಮೊದಲೇ ಪತಿ ಶ್ರೀನಿವಾಸ್ ನಿಧನರಾಗಿದ್ದಾರೆ.



ಶ್ರೀನಿವಾಸ್

ಕೆಲವು ದಿನಗಳ ಹಿಂದೆ ಕೊರೊನಾ ಸೋಂಕಿಗೆ ಒಳಗಾಗಿದ್ದ ಶ್ರೀನಿವಾಸ್ ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಅತಿರಂಜಿತ ಸುದ್ದಿ: ಸುಶೀಲ್ ತಾಯಿ ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ಯುವ ಕುಸ್ತಿಪಟುವಿನ ಕೊಲೆ ಆರೋಪಿ ಎಂದು ಬಿಂಬಿಸಿ ಸುಶೀಲ್ ಕುಮಾರ್ ಅವರಿಗೆ ಸಂಬಂಧಿಸಿದ ಅತಿರಂಜಿತ ವರದಿಗಳನ್ನು ಪ್ರಕಟಿಸಲಾಗಿದೆ ಎಂದು ಆರೋಪಿಸಿ ಮಾಧ್ಯಮಗಳ ವಿರುದ್ಧ ಸುಶೀಲ್ ಅವರ ತಾಯಿ ದೆಹಲಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಛತ್ರಸಾಲ್ ಕ್ರೀಡಾಂಗಣದಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿ ಒಲಿಂಪಿಯನ್ ಸುಶೀಲ್ ಕುಮಾರ್ ಮತ್ತು ಸಹಚರರನ್ನು ಬಂಧಿಸಲಾಗಿದೆ. ಎಫ್‌ಐಆರ್ ಕೂಡ ದಾಖಲಾಗಿದೆ.

ಆದರೆ ಕೊಲೆಯ ನಂತರ ಮಾಧ್ಯಮಗಳು ಪ್ರಕಟಿಸಿದ ವರದಿಗಳನ್ನು ಉಲ್ಲೇಖಿಸಿ ಕಮಲಾದೇವಿ ಮತ್ತು ಕಾನೂನು ವಿದ್ಯಾರ್ಥಿ ಶ್ರೀಕಾಂತ್ ಪ್ರಸಾದ್ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಮೂರ್ತಿಗಳಾದ ಡಿ.ಎನ್.ಪಟೇಲ್ ಮತ್ತು ಜ್ಯೋತಿ ಸಿಂಗ್ ಅವರನ್ನೊಳಗೊಂಡ ಪೀಠ ಶುಕ್ರವಾರ ವಿಚಾರಣೆ ನಡೆಸಲಿದೆ.

ರೂಪಾಂತರಿ ವೈರಸ್ ಹರಡುವ ಸಾಧ್ಯತೆ; ಮತ್ತೊಂದು ದುರಂತಕ್ಕೆ ನಾಂದಿ: ವೈದ್ಯರ ಅಭಿಪ್ರಾಯ

ಒಲಿಂಪಿಕ್ಸ್‌ನಿಂದ ವಿಕೋಪ: ಎಚ್ಚರಿಕೆ



ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ ನಿರಾಶ್ರಿತರ ತಂಡದ ಮ್ಯಾರಥಾನ್ ಓಟಗಾರರೊಬ್ಬ ಸ್ವಿಟ್ಜರ್ಲೆಂಡ್‌ನಲ್ಲಿ ಗುರುವಾರ ಅಭ್ಯಾಸ ಮಾಡಿದರು –ರಾಯಿಟರ್ಸ್ ಚಿತ್ರ

ಟೋಕಿಯೊ(ಎಎಫ್‌ಪಿ): ಒಲಿಂಪಿಕ್ಸ್ ಆಯೋಜಿಸಿದರೂ ಪ್ರೇಕ್ಷಕರಿಗೆ ಅವಕಾಶ ನೀಡದೇ ಇರುವುದು ಒಳ್ಳೆಯದು ಎಂದು ವೈದ್ಯಕೀಯ ತಂಡವೊಂದು ಎಚ್ಚರಿಕೆ ನೀಡಿರುವ ಬೆನ್ನಲ್ಲೇ ಒಲಿಂಪಿಕ್ಸ್ ದೊಡ್ಡ ವಿಕೋಪಕ್ಕೆ ಕಾರಣವಾಗಲಿದ್ದು ರದ್ದು ಮಾಡುವುದೇ ಅತ್ಯಂತ ಸೂಕ್ತ ಎಂದು ವೈದ್ಯರ ಸಂಘ ಸಲಹೆ ನೀಡಿದೆ.

ಸೋಂಕು ಏರುಗತಿಯಲ್ಲೇ ಸಾಗುತ್ತಿರುವುದರಿಂದ ಜಪಾನ್‌ನ ಅನೇಕ ಪ್ರದೇಶಗಳಲ್ಲಿ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಒಲಿಂಪಿಕ್ಸ್ ನಡೆಸಕೂಡದು ಎಂದು ಸಾರ್ವಜನಿಕರು ಒತ್ತಾಯಿಸುತ್ತಲೇ ಇದ್ದಾರೆ. ಒಲಿಂಪಿಕ್ ಕೂಟದಿಂದಾಗಿ ಜಪಾನ್‌ನಲ್ಲಿ ರೂಪಾಂತರಿತ ವೈರಸ್‌ಗಳು ಹರಡುವ ಸಾಧ್ಯತೆ ಇದ್ದು ನಾಲ್ಕನೇ ಅಲೆಗೆ ತತ್ತರಿಸಿರುವ ದೇಶ ಇನ್ನಷ್ಟು ಸಂಕಷ್ಟಕ್ಕೆ ಒಳಗಾಗಲಿದೆ ಎಂದು ವೈದ್ಯರು ಹೇಳಿದ್ದಾರೆ.

ವಿದೇಶದ ಪ್ರೇಕ್ಷಕರಿಗೆ ಒಲಿಂಪಿಕ್ಸ್‌ಗೆ ಅವಕಾಶವಿಲ್ಲ ಎಂದು ಆಯೋಜಕರು ಈಗಾಗಲೇ ಹೇಳಿದ್ದಾರೆ. ಸ್ಥಳೀಯ ಪ್ರೇಕ್ಷಕರಿಗೆ ಅವಕಾಶ ನೀಡಬೇಕೇ ಬೇಡವೇ ಎಂಬುದರ ಬಗ್ಗೆ ಜೂನ್‌ನಲ್ಲಿ ನಿರ್ಧಾರ ಕೈಗೊಳ್ಳಲಿದ್ದಾರೆ.

‘ಪ್ರಪಂಚದ ಬೇರೆ ಬೇರೆ ಕಡೆಯಿಂದ ಕ್ರೀಡಾಪಟುಗಳು, ಸಿಬ್ಬಂದಿ, ಪತ್ರಕರ್ತರು ಮತ್ತು ಅಧಿಕಾರಿಗಳು ಬರುವುದರಿಂದ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಲಿದೆ. ಸುನಾಮಿ ಮತ್ತು 2011ರ ಭೂಕಂಪದಿಂದ ಚೇತರಿಸಿಕೊಂಡಿರುವ ಜಪಾನ್‌ನ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸುವುದಕ್ಕಾಗಿ ಇಲ್ಲಿ ಇಲಿಂಪಿಕ್ಸ್ ಆಯೋಜಿಸಲು ಉದ್ದೇಶಿಸಲಾಗಿದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಕ್ರೀಡಾಕೂಟ ನಡೆದರೆ ಮತ್ತೊಂದು ವಿಕೋಪಕ್ಕೆ ಎಡೆಮಾಡಿಕೊಟ್ಟಂತಾಗಲಿದೆ’ ಎಂದು ಜಪಾನ್ ವೈದ್ಯ ಸಂಘದ ಅಧ್ಯಕ್ಷ ನವೊತೊ ಉಯೆಮಾ ಅಭಿಪ್ರಾಯಪಟ್ಟಿದ್ದಾರೆ.

‘ಇಲ್ಲಿ ಕಾಣಿಸಿಕೊಳ್ಳಲಿರುವ ರೂಪಾಂತರಿತ ವೈರಸ್‌ಗೆ ಟೋಕಿಯೊ ಒಲಿಂಪಿಕ್ಸ್ ವೈರಸ್ ಎಂದೇ ಹೆಸರಾಗಬಹುದೇನೋ. ಹಾಗೇನಾದರೂ ಆದರೆ ಮುಂದಿನ 100 ವರ್ಷಗಳ ವರೆಗೆ ಜನರ ಮನಸ್ಸಿನಲ್ಲಿ ಕೆಟ್ಟ ನೆನಪಾಗಿ ಅದು ಉಳಿಯಲಿದೆ’ ಎಂದು ಉಯೆಮಾ ಹೇಳಿದ್ದಾರೆ.

ಮುಖ್ಯಾಂಶಗಳು

- ಸಾವಿರಾರು ಮಂದಿಯಿಂದ ರೂಪಾಂತರಿತ ವೈರಸ್ ಹಾವಳಿ ಸಾಧ್ಯತೆ
- ಸುನಾಮಿ, ಭೂಕಂಪದಂತೆ ಮತ್ತೊಂದು ದುರಂತದ ಆತಂಕ

ಎಲ್ಲ ಕ್ರೀಡಾಪಟುಗಳಿಗೂ ಲಸಿಕೆ: ಐಒಎ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ತೆರಳುವ ಎಲ್ಲರಿಗೂ ಲಸಿಕೆಯ ಎರಡನೇ ಡೋಸ್ ಹಾಕಲಾಗುವುದು ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಗುರುವಾರ ತಿಳಿಸಿದೆ.

ಒಲಿಂಪಿಕ್ಸ್‌ಗೆ ತೆರಳುವ ಕ್ರೀಡಾಪಟುಗಳಿಗೆ ಲಸಿಕೆ ಹಾಕಿರುವ ಬಗ್ಗೆ ದೇಶದ ಎಲ್ಲ ಕ್ರೀಡಾ ಫೆಡರೇಷನ್‌ಗಳಿಂದ ಐಒಎ ಬುಧವಾರ ಮಾಹಿತಿ ಕೇಳಿತ್ತು.

‘ಅಥ್ಲೀಟ್‌ಗಳು, ತಾಂತ್ರಿಕ ಅಧಿಕಾರಿಗಳು ಸೇರಿದಂತೆ ಒಲಿಂಪಿಕ್ಸ್‌ಗೆ ತೆರಳುವ ಎಲ್ಲರಿಗೂ ಮೊದಲ ಡೋಸ್ ಲಸಿಕೆ ನೀಡಲಾಗಿದೆ. ಒಲಿಂಪಿಕ್ಸ್‌ಗೆ ಹೋಗುವ ಮುನ್ನ ಎಲ್ಲರೂ ಎರಡನೇ ಡೋಸ್ ತೆಗೆದುಕೊಳ್ಳಲಿದ್ದಾರೆ’ ಎಂದು ಐಒಎ ಅಧ್ಯಕ್ಷ ನರೀಂದರ್ ಬಾತ್ರಾ ಮತ್ತು ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಹೇಳಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವವರು ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಹೇಳಿದೆ. ಆದರೂ ಕ್ರೀಡಾ ಗ್ರಾಮದಲ್ಲಿ 80 ಶೇಕಡಕ್ಕೂ ಹೆಚ್ಚು ಮಂದಿ ಲಸಿಕೆ ತೆಗೆದುಕೊಳ್ಳಲಿರುವ ಸಾಧ್ಯತೆ ಇದೆ ಎಂದು ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಈಗಾಗಲೇ ಭರವಸೆ ವ್ಯಕ್ತಪಡಿಸಿದ್ದಾರೆ.



ರಫೆಲ್ ನಡಾಲ್ –ರಾಯಿಟರ್ಸ್ ಚಿತ್ರ



ನೊವಾಕ್ ಜೊಕೊವಿಚ್ –ಪಿಟಿಐ ಚಿತ್ರ

ಫ್ರೆಂಚ್ ಓಪನ್: ನಡಾಲ್–ನೊವಾಕ್ ಮುಖಾಮುಖಿ?

ಪ್ಯಾರಿಸ್ (ಎಎಫ್‌ಪಿ): ಅಗ್ರ ಕ್ರಮಾಂಕದ ನೊವಾಕ್ ಜೊಕೊವಿಚ್ ಮತ್ತು 13 ಬಾರಿಯ ಚಾಂಪಿಯನ್ ರಫೆಲ್ ನಡಾಲ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಫೈನಲ್‌ಗೂ ಮೊದಲು ಮುಖಾಮುಖಿಯಾಗುವ ಸಾಧ್ಯತೆ ಇದೆ.

ಟೂರ್ನಿಯ ಡ್ರಾ ಗುರುವಾರ ಆಗಿದ್ದು ಪ್ರಮುಖ ಆಟಗಾರರಾದ ನಡಾಲ್, ಜೊಕೊವಿಚ್ ಮತ್ತು ರೋಜರ್ ಫೆಡರರ್ ಪ್ರಥಮಾರ್ಧದ ಪಟ್ಟಿಯಲ್ಲೇ ಕಾಣಿಸಿಕೊಂಡಿರುವುದರಿಂದ ಕುತೂಹಲ ಕೆರಳಿದೆ. 2016ರ ಚಾಂಪಿಯನ್ ಜೊಕೊವಿಚ್ ಮತ್ತು 2009ರ ಪ್ರಶಸ್ತಿ ವಿಜೇತ ಫೆಡರರ್ ಕ್ವಾರ್ಟರ್ ಫೈನಲ್‌ನಲ್ಲಿ ಮುಖಾಮುಖಿಯಾಗುವ ಸಾಧ್ಯತೆ ಇದೆ.

ನಡಾಲ್ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾದ ಅಲೆಕ್ಸಿ ಪಾಪಿರಿನ್ ವಿರುದ್ಧ ಸೆಣಸುವರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ರಷ್ಯಾದ ಆ್ಯಂಡ್ರೆ ರುಬ್ಲೆವ್ ಎದುರು ಸೆಣಸಾಡುವ ಸಾಧ್ಯತೆ ಇದೆ. ಜೊಕೊವಿಚ್‌ಗೆ ಮೊದಲ ಪಂದ್ಯದಲ್ಲಿ ಅಮೆರಿಕದ ಟೆನಿಸ್ ಸ್ಯಾಂಡ್‌ಗ್ರೆನ್ ಎದುರಾಳಿ.

ಮಹಿಳಾ ವಿಭಾಗದಲ್ಲಿ 2019ರ ಚಾಂಪಿಯನ್ ಮತ್ತು ವಿಶ್ವ ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿರುವ ಆ್ಯಶ್ಲಿ ಬಾರ್ಟಿ ಅಮೆರಿಕದ ಬೆರ್ನಾರ್ಡ ಪೆರ ಅವರನ್ನು ಮೊದಲ ಪಂದ್ಯದಲ್ಲಿ ಎದುರಿಸುವರು. ಎರಡನೇ ಶ್ರೇಯಾಂಕದ ನವೊಮಿ ಒಸಾಕ ರೊಮೇನಿಯಾದ ಪ್ಯಾಟ್ರಿಸಿಯಾ ಮರಿಯಾ ಟಿಗ್ ವಿರುದ್ಧ ಅಭಿಯಾನ ಆರಂಭಿಸುವರು.

ಸೆರೆನಾ ವಿಲಿಯಮ್ಸ್ ಮೊದಲ ಪಂದ್ಯದಲ್ಲಿ ರೊಮೇನಿಯಾದ ಐರಿನಾ ಕೆಮಿಲಿಯಾ ಬೇಗು ಅವರನ್ನು ಎದುರಿಸುವರು. ಹಾಲಿ ಚಾಂಪಿಯನ್ ಇಗಾ ಸ್ವಾಟೆಕ್ ಸ್ಲೊವೇನಿಯಾದ ಕಾಜಾ ಜುವಾನ್ ಎದುರು ಮೊದಲ ಸುತ್ತಿನಲ್ಲಿ ಸೆಣಸುವರು.

ಪತ್ರಿಕಾಗೋಷ್ಠಿಗೆ ಒಸಾಕ ಬಹಿಷ್ಕಾರ



ನವೊಮಿ ಒಸಾಕ

ಪ್ಯಾರಿಸ್ (ಎಪಿ): ಈ ಬಾರಿಯ ಫ್ರೆಂಚ್ ಓಪನ್ ಟೆನಿಸ್ ಟೂರ್ನಿ ಸಂದರ್ಭದಲ್ಲಿ ಮಾಧ್ಯಮಗೋಷ್ಠಿಗಳಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಟೆನಿಸ್ ಪಟು, ಜಪಾನ್‌ನ ನವೊಮಿ ಒಸಾಕ ಗುರುವಾರ ತಿಳಿಸಿದ್ದಾರೆ. ಬಹಿಷ್ಕಾರದ ಹಿನ್ನೆಲೆಯಲ್ಲಿ ವಸೂಲಿ ಮಾಡುವ ಶುಲ್ಕವನ್ನು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಾಮಾಜಿಕ ಕಾರ್ಯಕ್ಕೆ ನೀಡುವಂತೆ ಕೋರಲಾಗುವುದು ಎಂದು ಅವರು ವಿವರಿಸಿದ್ದಾರೆ.

ವಿಶ್ವದ ಮಹಿಳಾ ಕ್ರೀಡಾಪಟುಗಳ ಪೈಕಿ ಅತಿ ಹೆಚ್ಚು ಗಳಿಕೆ ಇರುವವರು ಒಸಾಕ ಈಗ ಅಮೆರಿಕದಲ್ಲಿ ನೆಲೆಸಿದ್ದಾರೆ. ಈ ವರೆಗೆ 4ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗಳಿಸಿದ್ದಾರೆ. ಕಳೆದ ವರ್ಷ ಅಮೆರಿಕ ಓಪನ್ ಮತ್ತು ಈ ವರ್ಷದ ಫೆಬ್ರುವರಿಯಲ್ಲಿ ನಡೆದ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲೂ ಚಾಂಪಿಯನ್ ಆಗಿದ್ದಾರೆ.

ಬಾಕ್ಸಿಂಗ್: ಫೈನಲ್‌ಗೆ ಮೇರಿ, ಸಾಕ್ಷಿ



ಮೇರಿ ಕೋಮ್–ಪಿಟಿಐ ಚಿತ್ರ

ದುಬೈ (ಪಿಟಿಐ): ಆರು ಬಾರಿಯ ವಿಶ್ವ ಚಾಂಪಿಯನ್, ಭಾರತದ ಎಂ.ಸಿ.ಮೇರಿ ಕೋಮ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 51 ಕೆಜಿ ವಿಭಾಗದ ಫೈನಲ್ ಪ್ರವೇಶಿಸಿದ್ದಾರೆ. 54 ಕೆಜಿ ವಿಭಾಗದಲ್ಲಿ ಸಾಕ್ಷಿ ಕೂಡ ಪ್ರಶಸ್ತಿ ಸುತ್ತು ತಲುಪಿದ್ದಾರೆ.

ಗುರುವಾರ ನಡೆದ ನಾಲ್ಕರ ಘಟ್ಟದ ಬೌಟ್‌ಗಳಲ್ಲಿ ಮಂಗೋಲಿಯಾದ ಲುಟ್ಸೈಖನ್ ಅಲ್ಟಂಸ್ಸೆಗ್ ಅವರನ್ನು ಮೇರಿ 4–1ರಲ್ಲಿ ಮಣಿಸಿದರು. ಕಜಕಸ್ತಾನದ ದೀನಾ ಜೊಲಮನ್ ವಿರುದ್ಧ ಸಾಕ್ಷಿ 3–2ರಲ್ಲಿ ಜಯ ಸಾಧಿಸಿದರು.

ಫೈನಲ್‌ಗೆ ಪೂಜಾ, ಅನುಪಮಾ: 75 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಪೂಜಾ ಅವರಿಗೆ ಫೈನಲ್‌ಗೆ ವಾಕ್‌ಓವರ್ ಸಿಕ್ಕಿತು. ನಾಲ್ಕರ ಘಟ್ಟದಲ್ಲಿ ಅವರ ವಿರುದ್ಧ ಸೆಣಸಬೇಕಿದ್ದ ಮಂಗೋಲಿಯಾದ ಮುಂಖಾಬಾತ್ ಮ್ಯಾಗ್ಮಾರ್ಜಾರ್ಗಲ್ ನಿರ್ದಿಷ್ಟ ಕಾರಣ ನೀಡದೆ ಹಿಂದೆ ಸರಿದರು. ಏಷ್ಯನ್ ಕೂಟದಲ್ಲಿ ಮೊದಲ ಬಾರಿ ಸ್ಪರ್ಧಿಸಿರುವ ಅನುಪಮಾ (+81 ಕೆಜಿ) ಅವರು ಉಜ್ಬೆಕಿಸ್ತಾನದ ಮೋಖಿರಾ ಅಬ್ದುಲ್ಲಾಯೆವಾ ಅವರನ್ನು ಸೋಲಿಸಿ ಚಿನ್ನದ ಪದಕದ ಸುತ್ತಿಗೆ ತಲುಪಿದರು.

48 ಕೆಜಿ ವಿಭಾಗದಲ್ಲಿ ಮೋನಿಕಾ, ಲವ್ಲಿನಾ ಬೊರ್ಗೊಹೈನ್ (69 ಕೆಜಿ), ಸಿಮ್ರನ್‌ಜೀತ್ ಕೌರ್ (60 ಕೆಜಿ), ಜೈಸ್ಮೈನ್ (57 ಕೆಜಿ) ಹಾಗೂ ಸ್ವೀಟಿ (81ಕೆಜಿ) ಸೆಮಿಫೈನಲ್‌ಗಳಲ್ಲಿ ಸೋತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಬುಧವಾರ ರಾತ್ರಿ ಆಶಿಶ್ ಕುಮಾರ್ (75 ಕೆಜಿ) ಕಜಕಸ್ತಾನದ ಅಬೀಲ್‌ಖಾನ್ ಅಮಾಂಕುಲ್ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ 2–3ರಲ್ಲಿ ಸೋತರು.

ಸಂಕ್ಷಿಪ್ತ ಸುದ್ದಿ

ಶೂಟಿಂಗ್: ತೇಜಸ್ವಿನಿ ಸಾವಂತ್‌ಗೆ ಅಗ್ರ ಸ್ಥಾನ



ತೇಜಸ್ವಿನಿ ಸಾವಂತ್

ನವದೆಹಲಿ: ಮಾಜಿ ವಿಶ್ವ ಚಾಂಪಿಯನ್, ಭಾರತದ ತೇಜಸ್ವಿನಿ ಸಾವಂತ್ ಅವರು ಕ್ರೊವೇಷ್ಯಾದಲ್ಲಿ ನಡೆಯುತ್ತಿರುವ ಯುರೋಪಿಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಕನಿಷ್ಠ ಅರ್ಹತಾ ಸ್ಕೋರ್ (ಎಂಕ್ಯುಎಸ್) ಸುತ್ತಿನಲ್ಲಿ ಅಗ್ರ ಸ್ಥಾನ ಗಳಿಸಿದ್ದಾರೆ.

ಗುರುವಾರ ನಡೆದ ಮಹಿಳೆಯರ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್‌ನಲ್ಲಿ ತೇಜಸ್ವಿನಿ 622.7 ಸ್ಕೋರು ಗಳಿಸಿ ಭಾರತದ ಮೂವರು ಮತ್ತು ಇರಾನ್‌ನ ಆರು ಸ್ಪರ್ಧಿಗಳನ್ನು ಹಿಂದಿಕ್ಕಿದರು. ಯುವ ಶೂಟರ್ ಐಶ್ವರ್ಯಾ ಪ್ರತಾಪ್ ಸಿಂಗ್ ತೋಮರ್ 620.3 ಸ್ಕೋರು ಗಳಿಸಿದರೆ ಸಂಜೀವ್ ರಜಪೂತ್ 619.7 ಮತ್ತು ಅಂಜುಮ್ ಮೌದ್ಗಿಲ್ 619.2 ಸ್ಕೋರ್ ದಾಖಲಿಸಿದರು

ಸುಮಿತ್ ಪರಾಭವ


ಪ್ಯಾರಿಸ್ (ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸುವಲ್ಲಿ ವಿಫಲರಾಗಿದ್ದಾರೆ. ಅರ್ಹತಾ ಟೂರ್ನಿಯ ಎರಡನೇ ಸುತ್ತಿನಲ್ಲಿ ನೇರ ಸೆಟ್‌ಗಳಲ್ಲಿ ಸೋಲುವುದರೊಂದಿಗೆ ಮೂರನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಮುಖ್ಯ ಸುತ್ತು ಪ್ರವೇಶಿಸುವ ಅವರ ಆಸೆ ಕಮರಿತು.

ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ 3–6, 3–6ರಿಂದ ಚಿಲಿಯ ಅಲೆಜಾಂಡ್ರೊ ಟ್ಯಾಬಿಲೊಗೆ ಮಣಿದರು.

ಮಿಲ್ಖಾ ಸಿಂಗ್ ಆರೋಗ್ಯ ಸ್ಥಿರ

ಚಂಡೀಗಡ (ಪಿಟಿಐ): ಕೋವಿಡ್ ಸೋಂಕಿತರಾಗಿ ಚಿಕಿತ್ಸೆ ಪಡೆಯುತ್ತಿರುವ, ಭಾರತದ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಮತ್ತು ಅವರ ಪತ್ನಿ ನಿರ್ಮಲ್ ಕೌರ್ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಅವರು ದಾಖಲಾಗಿರುವ ಮೊಹಾಲಿ ಆಸ್ಪತ್ರೆಯ ಮೂಲಗಳು ಗುರುವಾರ ತಿಳಿಸಿವೆ.

ಷೇರುಪೇಟೆ ವಹಿವಾಟು 98



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,301
ಇಂದಿನ ಅಂತ್ಯ	15,337
▲	36
ದಿನದ ಗರಿಷ್ಠ	15,384

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1480 (1490)
ಸೋಯಾ (ರಿಫೈಂಡ್)	₹1405 (1415)
ಸೂರ್ಯಕಾಂತಿ(ರಿಫೈಂಡ್)	₹1610 (1650)
ಪಾಮೋಲಿನ್	₹1285 (1305)

ವಿನಿಮಯ ದರ

$ ಡಾಲರ್	72.60
£ ಪೌಂಡ್	102.5
€ ಯುರೊ	88.50
¥ ಯೆನ್ (100ಕ್ಕೆ)	66

ಜೆಸಿ ನ್ಯೂಮರೋ ಆ್ಯಪ್ ಬಿಡುಗಡೆ



ಜೆ.ಸಿ. ಚೌಧರಿ

ಬೆಂಗಳೂರು: ಚೌಧರಿ ನ್ಯೂಮರೋ ಪ್ರೈವೇಟ್ ಲಿಮಿಟೆಡ್‌ನ ಮುಖ್ಯಸ್ಥ ಹಾಗೂ ಸಂಖ್ಯಾಶಾಸ್ತ್ರಜ್ಞ ಜೆ.ಸಿ. ಚೌಧರಿ, ಸಂಖ್ಯಾಶಾಸ್ತ್ರ ಕ್ಷೇತ್ರದಲ್ಲಿ ತಾವು ಹೊಂದಿರುವ 35 ವರ್ಷಗಳಿಗೂ ಹೆಚ್ಚಿನ ಅನುಭವ ಬಳಸಿ ‘ಜೆಸಿ ನ್ಯೂಮರೋ ಆ್ಯಪ್’ ಬಿಡುಗಡೆ ಮಾಡಿ ದ್ದಾರೆ.

‘ಸಂಖ್ಯಾಶಾಸ್ತ್ರವು ವ್ಯಕ್ತಿಯ ಭವಿಷ್ಯವನ್ನು ನಿಖರವಾಗಿ, ತ್ವರಿತವಾಗಿ ಹೇಳುತ್ತದೆ. ತಂತ್ರಜ್ಞಾನ ಬಳಸಿಕೊಂಡು ಹೆಚ್ಚಿನ ಜನರನ್ನು ತಲುಪಬಹುದಾಗಿದೆ’ ಎಂದು ಚೌಧರಿ ಹೇಳಿದ್ದಾರೆ. ಆಂಡ್ರಾಯ್ಡ್ ಫೋನ್ ಮತ್ತು ಐಫೋನ್‌ಗಳಿಗೆ ಈ ಆ್ಯಪ್ ಸಿದ್ಧಪಡಿಸಲಾಗಿದೆ. ಚೌಧರಿ ಅವರಿಂದ ವೈಯಕ್ತಿಕ ಸಲಹೆ ಪಡೆಯಲು ಆ್ಯಪ್ ಮೂಲಕ ಸಮಯ ಕಾಯ್ದಿರಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಹಳತು	46000-50000
ಕುಂದಾಪುರ	
ಹೊಸಚಾಲಿ	35000-40000
ಯಲ್ಲಾಪುರ	
ಬಿಳಿಗೋಟು	27510-27510
ಚಾಲಿ	33230-36150
ಪುತ್ತೂರು	
ಹೊಸತು	28000-39500
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	231-331
ದ್ವಿತಳಿ (ಬಿ.ವಿ)	239-391

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	10700
ಎಸಿ	4480
ಆರ್‌ಪಿ	5100
ಆರ್‌ಸಿ	3100

ಬೇಡಿಕೆ ಹೆಚ್ಚಳ, ಹೂಡಿಕೆ ಇದ್ದರೆ ಬೆಳವಣಿಗೆ: ಆರ್‌ಬಿಐ

ನವದೆಹಲಿ (ಪಿಟಿಐ): ಸಾಂಕ್ರಾಮಿಕದ ಅಲೆಯು ತಗ್ಗಿದ ನಂತರದಲ್ಲಿ ಆರ್ಥಿಕ ಬೆಳವಣಿಗೆ ಸುಸ್ಥಿರ ಆಗಬೇಕು ಎಂದಾದರೆ ಮಾರುಕಟ್ಟೆಯಲ್ಲಿ ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾಗಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

‘2020–21ನೆಯ ಹಣಕಾಸು ವರ್ಷವು ಆರ್ಥಿಕತೆಗೆ ಗಾಯ ಮಾಡಿದೆ. ಕೋವಿಡ್‌ನ ಎರಡನೆಯ ಅಲೆಯ ಕಾರಣದಿಂದಾಗಿ, ಹಾಲಿ ಆರ್ಥಿಕ ವರ್ಷದಲ್ಲಿ (2021–22) ದೇಶದ ಜಿಡಿಪಿ ಎಷ್ಟು ಬೆಳವಣಿಗೆ ಸಾಧಿಸಬಹುದು ಎಂಬ ಅಂದಾಜನ್ನು ಪರಿಷ್ಕರಿಸಲಾಗುತ್ತಿದೆ. ಬೆಳವಣಿಗೆಯು ಶೇಕಡ 10.5ರಷ್ಟು ಇರಬಹುದು ಎಂಬುದು ನಮ್ಮ ಅಂದಾಜು. ಇತರರು ಕೂಡ ಈಗ ಈ ಅಂದಾಜಿಗೆ ಸಹಮತ ಸೂಚಿಸುವಂತೆ ಕಾಣುತ್ತಿದೆ’ ಎಂದು ಆರ್‌ಬಿಐ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ.

ಬಿಕ್ಕಟ್ಟಿನ ನಂತರದ ಸಂದರ್ಭದಲ್ಲಿ ಆರ್ಥಿಕ ಪುನಶ್ಚೇತನವು ಸಾಮಾನ್ಯವಾಗಿ ಹೂಡಿಕೆಗಿಂತಲೂ ಮಿಗಿಲಾಗಿ ಬೇಡಿಕೆ ಹೆಚ್ಚಳದ ಮೂಲಕ ಆಗುತ್ತದೆ. ಆದರೆ, ಹೂಡಿಕೆ ಹೆಚ್ಚಳದ ಮೂಲಕ ಆಗುವ ಆರ್ಥಿಕ ಪುನಶ್ಚೇತನವು ಹೆಚ್ಚು ಸುಸ್ಥಿರವಾಗಿರುತ್ತದೆ, ಬೇಡಿಕೆಯನ್ನು ಹೆಚ್ಚಿಸುತ್ತದೆ ಹಾಗೂ ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

‘ಸಾಲದ ಮೇಲೆ ಕಣ್ಣಿಡಿ’: ಮರುಪಾವತಿ ಆಗುತ್ತಿಲ್ಲದ ಸಾಲದ ಮೇಲೆ ಒಂದು ಕಣ್ಣು ಇಡುವಂತೆ, ಎನ್‌ಪಿಎ ಆಗಬಹುದಾದ ಸಾಲಗಳಿಗಾಗಿ ಅಗತ್ಯ ಪ್ರಮಾಣದಲ್ಲಿ ಬಂಡವಾಳ ಮೀಸಲಿಡುವಂತೆ ಆರ್‌ಬಿಐ, ಬ್ಯಾಂಕ್‌ಗಳಿಗೆ ಸೂಚನೆ ನೀಡಿದೆ.

ಆದರೆ, ಬ್ಯಾಂಕ್‌ಗಳ ಬಳಿ ಹೆಚ್ಚು ಬಂಡವಾಳ ಇರುವುದರಿಂದ, ಸಾಲದ ವಸೂಲಿ ಸುಧಾರಿಸುತ್ತಿರುವುದರಿಂದ ಹಾಗೂ ಬ್ಯಾಂಕ್‌ಗಳು ಲಾಭದ ಹಳಿಗೆ ಮರಳಿರುವುದರಿಂದ ಹಣಕಾಸಿನ ಒತ್ತಡಗಳನ್ನು ಉತ್ತಮವಾಗಿ ನಿಭಾಯಿಸುವ ಸ್ಥಿತಿಯಲ್ಲಿ ಅವು ಇವೆ ಎಂದು ಆರ್‌ಬಿಐ ವಿಶ್ವಾಸ ವ್ಯಕ್ತಪಡಿಸಿದೆ.

ಹೆಚ್ಚಿದ ನೋಟು ಚಲಾವಣೆ: 2020–21ರಲ್ಲಿ ಬ್ಯಾಂಕ್ ನೋಟುಗಳ ಚಲಾವಣೆಯು ಸರಾಸರಿ ಪ್ರಮಾಣಕ್ಕಿಂತ ಜಾಸ್ತಿ ಆಗಿತ್ತು ಎಂಬ ಅಂಶವು ವರದಿಯಲ್ಲಿ ಇದೆ. ಸಾಂಕ್ರಾಮಿಕದ ಕಾರಣದಿಂದಾಗಿ ಜನ ಮುನ್ನೆಚ್ಚರಿಕೆಯಿಂದ ನಗದನ್ನು ತಮ್ಮ ಬಳಿ ಹೆಚ್ಚಿನ ಪ್ರಮಾಣದಲ್ಲಿ ಇರಿಸಿಕೊಳ್ಳುತ್ತಿದ್ದುದು ಇದಕ್ಕೆ ಕಾರಣ ಎಂದು ಅದು ಹೇಳಿದೆ.

‘ಈ ಬಾರಿ ನಷ್ಟ ಕಡಿಮೆ’

ನವದೆಹಲಿ: ಕೋವಿಡ್ ಎರಡನೆಯ ಅಲೆಯ ಸಂದರ್ಭದಲ್ಲಿ ದೇಶದ ಅರ್ಥ ವ್ಯವಸ್ಥೆಯು ಮೊದಲ ಅಲೆಯ ಸಂದರ್ಭದಲ್ಲಿ ಅನುಭವಿಸಿದಂತಹ ನಷ್ಟಕ್ಕೆ ಗುರಿಯಾಗಿಲ್ಲ ಎಂದು ಆರ್‌ಬಿಐ ಹೇಳಿದೆ. ‘ಹೀಗಿದ್ದರೂ ಅನಿಶ್ಚಿತತೆಗಳು ಮುಂದುವರಿದಿವೆ. ಆರ್ಥಿಕ ಬೆಳವಣಿಗೆಯು, ಎರಡನೆಯ ಅಲೆಯನ್ನು ದೇಶವು ಎಷ್ಟು ತ್ವರಿತವಾಗಿ ನಿಯಂತ್ರಣಕ್ಕೆ ತರುತ್ತದೆ ಎಂಬುದನ್ನು ಆಧರಿಸಿದೆ’ ಎಂದು ಅದು ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ.

2020–21ರಲ್ಲಿ ಅರ್ಥ ವ್ಯವಸ್ಥೆಯು ಶೇಕಡ (–)8ರಷ್ಟು ಕುಸಿಯಬಹುದು ಎಂಬ ಅಂದಾಜು ಇದ್ದರೂ ದೇಶಿ ಷೇರು ಮಾರುಕಟ್ಟೆಗಳು ಏರಿಕೆಯ ಹಾದಿಯಲ್ಲಿವೆ. ಇದು ಮಾರುಕಟ್ಟೆಯಲ್ಲಿ ಷೇರುಗಳ ಮೌಲ್ಯ ದಿಢೀರ್ ಕುಸಿಯುವ ಅಪಾಯವನ್ನು ತಂದೊಡ್ಡಿದೆ ಎಂದು ವರದಿಯು ಎಚ್ಚರಿಸಿದೆ.

ಹಿಂದಿನ ವರ್ಷ ರಾಷ್ಟ್ರದೆಲ್ಲೆಡೆ ಜಾರಿಗೆ ಬಂದ ಲಾಕ್‌ಡೌನ್ ಸಂದರ್ಭದಲ್ಲಿ ಷೇರು ಮಾರುಕಟ್ಟೆ ಸೂಚ್ಯಂಕಗಳು ತೀವ್ರ ಕುಸಿತ ಕಂಡಿದ್ದವು. ಅದಾದ ಒಂದು ವರ್ಷದೊಳಗೆ ಸೂಚ್ಯಂಗಳು ಶೇಕಡ 100.7ರಷ್ಟು ಏರಿಕೆ ದಾಖಲಿಸಿದ್ದವು. ‘ಆರ್ಥಿಕ ಪುನಶ್ಚೇತನಕ್ಕೆ ಉತ್ತೇಜನ ನೀಡಲು ನಗದು ಲಭ್ಯತೆ ಹೆಚ್ಚಿಸಲಾಯಿತು. ವಿದೇಶಿ ಹೂಡಿಕೆ ಕೂಡ ಜಾಸ್ತಿಯಾಯಿತು. ಇವು ಸೂಚ್ಯಂಕಗಳ ಈ ಪರಿಯ ಏರಿಕೆಗೆ ಕಾರಣ’ ಎಂದು ಆರ್‌ಬಿಐ ಹೇಳಿದೆ.

ಷೇರುಪೇಟೆ ಬಂಡವಾಳ ₹ 220 ಲಕ್ಷ ಕೋಟಿಗೆ ಏರಿಕೆ



ನವದೆಹಲಿ/ಮುಂಬೈ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ಗುರುವಾರ ನಡೆದ ಸಕಾರಾತ್ಮಕ ವಹಿವಾಟಿನಿಂದಾಗಿ ಮಾರುಕಟ್ಟೆ ಬಂಡವಾಳ ಮೌಲ್ಯವು ದಾಖಲೆಯ ₹ 220.74 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಗುರುವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 98 ಅಂಶ ಹೆಚ್ಚಾಗಿ 51,115 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 1.67 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 38 ಅಂಶ ಹೆಚ್ಚಾಗಿ 15,337ಕ್ಕೆ ತಲುಪಿದೆ.

ಗುರುವಾರ ಸರ್ಕಾರಿ ಸಾಲಪತ್ರಗಳ ಮೇ ತಿಂಗಳ ವಹಿವಾಟಿನ ಅಂತ್ಯದ ದಿನವಾಗಿತ್ತು. ಇದರಿಂದಾಗಿ ಚಂಚಲತೆ ಇದ್ದರೂ ಸಕಾರಾತ್ಮಕವಾಗಿಯೇ ವಹಿವಾಟು ಅಂತ್ಯವಾಗಿದೆ. ಮಿಡ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳಲ್ಲಿ ಖರೀದಿ ವಹಿವಾಟು ಕಂಡುಬಂದು, ಅವು ಉತ್ತಮ ಗಳಿಕೆಯನ್ನೂ ಕಂಡವು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 17 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 72.60ರಂತೆ ವಿನಿಮಯಗೊಂಡಿತು. ಇದು 2 ತಿಂಗಳ ಗರಿಷ್ಠ ಮಟ್ಟವಾಗಿದೆ.

ಪೇಟಿಎಂನಿಂದ ಭಾರಿ ಮೊತ್ತದ ಐಪಿಒ?

ನವದೆಹಲಿ (ಪಿಟಿಐ): ಡಿಜಿಟಲ್ ಪಾವತಿ ಸೇರಿದಂತೆ ವಿವಿಧ ಹಣಕಾಸು ಸೇವೆಗಳನ್ನು ಒದಗಿಸುವ ಪೇಟಿಎಂ ಈ ವರ್ಷದಲ್ಲಿ ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ (ಐಪಿಒ) ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಈ ಮೂಲಕ ಒಟ್ಟು ₹ 21,700 ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯನ್ನು ಅದು ಹೊಂದಿದೆ.

ಐಪಿಒ ಮೂಲಕ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಸಂಗ್ರಹಿಸಲು ಪೇಟಿಎಂಗೆ ಸಾಧ್ಯವಾದರೆ, ಭಾರತದ ಅತಿದೊಡ್ಡ ಐಪಿಒ ಇದಾಗಲಿದೆ. 2010ರಲ್ಲಿ ಕೋಲ್ ಇಂಡಿಯಾ ಕಂಪನಿಯು ಐಪಿಒ ಮೂಲಕ ₹ 15,200 ಕೋಟಿ ಸಂಗ್ರಹಿಸಿದ್ದು ಇದುವರೆಗಿನ ಅತಿದೊಡ್ಡ ಮೊತ್ತ.

ಐಪಿಒ ಪ್ರಸ್ತಾವ ಕುರಿತು ಚರ್ಚಿಸಲು ಪೇಟಿಎಂ ಆಡಳಿತ ಮಂಡಳಿಯು ಶುಕ್ರವಾರ ಸಭೆ ಸೇರುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ. ಈ ಬಗ್ಗೆ ಪ್ರತಿಕ್ರಿಯೆಗೆ ಪೇಟಿಎಂ ನಿರಾಕರಿಸಿದೆ. ಪಾಲಿಸಿಬಜಾರ್, ಡೆಲ್ಲಿವರಿ ಮತ್ತು ಮೊಬಿಕ್ವಿಕ್ ಕೂಡ ಐಪಿಒಗೆ ಸಿದ್ಧತೆ ನಡೆಸಿವೆ ಎನ್ನಲಾಗಿದೆ.

ಠಾಣೆ: ₹ 100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ದೇಶದಾದ್ಯಂತ ಗುರುವಾರ ಪೆಟ್ರೋಲ್ ದರ ಲೀಟರಿಗೆ 24 ಪೈಸೆ ಮತ್ತು ಡೀಸೆಲ್ ದರ ಲೀಟರಿಗೆ 29 ಪೈಸೆ ಹೆಚ್ಚಾಗಿದೆ. ಇದರಿಂದ ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100ರ ಗಡಿ ದಾಟಿದೆ. ಠಾಣೆಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹100.06 ಮತ್ತು ಡೀಸೆಲ್ ದರ ₹ 91.99ರಷ್ಟಾಗಿದೆ.

ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ಥಾನದ ಹಲವು ರಾಜ್ಯಗಳಲ್ಲಿ ಪೆಟ್ರೋಲ್ ದರವು ಈಗಾಗಲೇ ₹ 100ರ ಗಡಿ ದಾಟಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 99.94 ಮತ್ತು ಡೀಸೆಲ್ ದರ ₹ 91.87ರಷ್ಟಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ ₹ 93.84 ಮತ್ತು ಡೀಸೆಲ್ ದರ ₹ 84.61ರಷ್ಟಿದ್ದರೆ, ಬೆಂಗಳೂರಿನಲ್ಲಿ ಪೆಟ್ರೋಲ್ ₹ 96.80 ಮತ್ತು ಡೀಸೆಲ್ ₹ 89.70ಕ್ಕೆ ತಲುಪಿದೆ. ಮೇ ತಿಂಗಳಿನಲ್ಲಿ ಇದುವರೆಗೆ ಒಟ್ಟು 14 ಬಾರಿ ಇಂಧನ ದರ ಹೆಚ್ಚಿಸಿದಂತಾಗಿದೆ.

ಮುಂಬೈ ಧಾರಣೆ

ಶೇಂಗಾ

27-5-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1500)
ಒಂದು ವಾರದ ಡೆಲಿವರಿ	1485 (1495)
ಸೋಯಾ ಕಚ್ಚಾ	1390 (1400)
ಪಾಮ್ ವಾರದ ಡೆಲಿವರಿ	1283 (1303)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1610)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,650 (48,900)
ಬೆಳ್ಳಿ ಕೆ.ಜಿ 70,625 (71,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ